R.V. Satyanarayana Sastry
Dept. of SANSKRIT
Sir M.V. College
BHADRAVATI.

ॐ

ಅಂತರತಮ ನೀ ಗುರು
ಹೇ ಆತ್ಮತಮೋಹಾರಿ ||

ಜಟಿಲ ಕುಟಿಲ ತಮ ಅಂತರಂಗ ಬಹಿ
ಭಾವವಿಪಿನ ಸಂಚಾರಿ ||

ಜನುಮ ಜನುಮ ಶತಕೋಟಿ ಸಂಸ್ಕಾ
ರ ಪರಮ ಚಿತ್ತರಮ ಸಂಸ್ಕಾರಿ ||

ಪಾಪ ಪುಣ್ಯ ನಾನಾ ಲಲಿತ ರುದ್ರ ಲೀಲಾ
ರೂಪ ಅರೂಪ ವಿಹಾರಿ ||

ಒಲವೆಂಬ ಹೊತ್ತಿಗೆ

ಬೇಂದ್ರೆ

ಲೆ

ವೆಂಬ ಹೊತ್ತಿಗೆಯನೋದ ಬಯಸುತ ನೀನು
ಲೆಯೆಷ್ಟು ಎಂದು ಕೇಳುತಿಹೆ ಹುಚ್ಚ!
ಗಲಿರುಳು ದುಡಿದರೂ, ಹಲಜನುಮ ಕಳೆದರೂ
ಲೆ ತೆತ್ತಲಾರೆ ಬರಿ ಅಂಚೆವೆಚ್ಚ.

ದರದನಿಯಲಿ ಹಲವು, ಕಣ್ಣೋಟದಲಿ ಕೆಲವು
ತ್ರದಿ ಬರೆದುದಕೆ ಲೆಕ್ಕವಿಲ್ಲ
ತ್ರ ಚಿತ್ರಾಕ್ಷರದ ಲಕ್ಷಪತ್ರಗಳುಂಟು:
ನಕ್ಷತ್ರ ಓದುತಿದೆ ಮರೆತು ಸೊಲ್ಲ.

ಏನಿಹುದೋ ಎಂತಿಹುದೋ ಸಂಸಾರ ಸಾರ
ಕಂಡವರು ಯಾರವರ ಅಂತಪಾರ
ಹೃದಯ ಸಂಪುಟದಲ್ಲಿ ಒಲವ ಲೆಕ್ಕಣಿಕೆ
ಡಿ ಬರೆಯಲಿ ಹುಡುಗ, ನಿನ್ನ ಬಿಕ್ಕಣಿಕೆ.

ಗಾನ

ಕ್ಷಿಕಾಶಿ ಕುವೆಂಪು.

ದೂರಕೆ ದೂರಕೆ ಬಹು ಬಹು ದೂರಕೆ
ಹಾರುವೆ ಗಾನ ವಿಮಾನದಲಿ;
ಮುಗಿಲಿನ ದೂರಕೆ, ಗಗನದ ದೂರಕೆ,
ಶಶಿ ರವಿ ತಾರೆಗಳಾಚೆಯ ತೀರಕೆ,
ಮಾತಿಗೆ ನಿಲುಕದ ಭವ್ಯ ಅಪಾರಕೆ,
ಮನಸಿಗೆ ನಿಲುಕದ ದಿವ್ಯ ಅತೀತಕೆ,
ದೂರಕೆ ದೂರಕೆ ಬಹು ಬಹು ದೂರಕೆ,
ಹಾರುವೆ ಗಾನ ವಿಮಾನದಲಿ!
ಹಾರುತ ಹಾರುತ ಭೂರ್ಭುವಸ್ಸ್ವರ್ಗಳನ್
ಆತ್ಮವಿಲಯದಲಿ ತಬ್ಬುವೆನು.
ಬಿಸಿಲಿಗೆ ಹಬ್ಬುವ ಮಂಜಿನಂದದಲಿ
ಲೋಕ ಲೋಕಗಳ ಹಬ್ಬುವೆನು!

೨೧-೧೧-೧೯೨೩.

ತವರೂರು.

ಎಲ್ಲಿರುವುದು ನಾ ಸೇರುವ ಊರು?
ಬಲ್ಲವರರಿಯದ, ಯಾರೂ ಕಾಣದ
ಎಲ್ಲಿಯು ಇರದಾ ಊರು!
ಭವಭಯವಿಲ್ಲದ ಊರಂತೆ
ದಿವಿಜರು ಬಯಸುವ ಊರಂತೆ
ತವರೂರಂತೆ, ಬಹುದೂರಂತೆ,
ಕವಿಗಳು ಕಂಡಿಹ ಊರಂತೆ!
...ಎಲ್ಲಿರುವುದು ನಾ......

ಅಲ್ಲಿರುವುದು ನಾ ಸೇರುವ ಊರು!
ಬಲ್ಲವರರಿತಾ, ಎಲ್ಲರು ಕಾಣುವ
ಎಲ್ಲಿಯು ಇರುವಾ ಊರು!
ಜ್ಞಾನಿಗಳಿರುವುದೆ ಆ ಊರು.
ಧ್ಯಾನದ ಮೇರೆಯೆ ಆ ಊರು.
ನಾನಿಹ ಊರು, ಸುಖಾಮುದ ಊರು,
ಮಹಾನತೆಯಾಳುವ ತವರೂರು!
...ಎಲ್ಲಿರುವುದು ನಾ......

ಕೊಳ್ಳಲು?

ಕುವೆಂಪು.

ದೋಣಿಗನ ಹಾಡು.

ಂದಕಿ — ಕುವೆಂಪು

ದೂರಾ! ಬಹುದೂರಾ! ಹೋಗುವ ಬಾರಾ!
ಅಲ್ಲೇ ಇಹುದೆಮ್ಮ ಊರಾ ತೀರಾ !
ದೂರದೂರ ಹೋಗುವ ಬಾರ,
ಅಲ್ಲಿಹುದೆಮ್ಮ ಊರ ತೀರ.
ಚಲಜಲದಲೆಗಳ ಮೇಲ್ಕುಣಿದಾಡಿ
ಬಳಲಿಕೆ ತೊಳಲಿಕೆಗಳನೆಲ್ಲ ದೂಡಿ
ಗೆಲುವಿನ ಉಲಿಗಳ ಹಾಡಿ
ಒಲುಮೆಯ ಮಾತಾಡಿ
ಹಕ್ಕಿಗಳಿಂಚರ ಕೇಳಿ
ಆನಂದವ ತಾಳಿ
ಹಿಮಮಣಿ ಕಣಗಣ ಸಿಂಚಿತ ಅಂಚಿನ
ಹಸುರಿನ ತೀರದ ಮೇಲಾಡಿ,
ಕಿಸಲಯಕಂಪನದಿಂಪನು ನೋಡಿ
ಕೂಡಿ ಆಡಿ ನೋಡಿ ಹಾಡಿ
ತೇಲಿ ತೇಲಿ ಹೋಗುವ ಬಾರ,
ಅಲ್ಲಿಹುದೆಮ್ಮ ಊರ ತೀರ.
ದೂರಾ! ಬಹುದೂರಾ! ಹೋಗುವ ಬಾರಾ!
ಅಲ್ಲೇ ಇಹುದೆಮ್ಮ ಊರಾ ತೀರಾ !

'ಕೊಳಲು'

ಪ್ರಾರ್ಥನೆ

ಕುವೆಂಪು

ನಿನ್ನ ಬಾಂದಳದಂತೆ
ನನ್ನ ಮನವಿರಲಿ;
ನಿನ್ನ ಸಾಗರದಂತೆ
ನನ್ನ ಎದೆಯಿರಲಿ.
ನಿನ್ನ ಸುಗ್ಗಿಯ ತೆರದಿ
ನನ್ನ ಸೊಬಗಿರಲಿ;
ನಿನ್ನ ಲೀಲೆಯ ತೆರದಿ
ನನ್ನ ಬಾಳಿರಲಿ.
ನಿನ್ನ ಬಲವಿರುವಂತೆ
ನನ್ನ ಬಲವಿರಲಿ;
ನಿನ್ನ ತಿಳಿವಿರುವಂತೆ
ನನ್ನ ತಿಳಿವಿರಲಿ.
ನಿನ್ನೊಲ್ಮೆಯಂದದಲಿ
ನನ್ನೊಲ್ಮೆಯಿರಲಿ
ನಿನ್ನಾಳವೆನಗಿರಲಿ
ನೀನೆ ನನಗಿರಲಿ
ನಿನ್ನಾತ್ಮದಾನಂದ
ನನ್ನದಾಗಿರಲಿ;
ನಿನ್ನೊಳಿರುವಾ ಶಾಂತಿ
ನನ್ನೆಡೆಗೆ ಬರಲಿ.

ನಿನ್ನವನು ನಾನಲ್ಲವೆ?

ದಳಲು: ಕುವೆಂಪು.

ದೇಹವಿದು ನೀನಿರುವ ಗುಡಿಯೆಂದು ತಿಳಿದು
ಗುಡಿಸುವೆನು ದಿನದಿನವು, ದೇವದೇವ;
ಬುದ್ಧಿಯಿದು ಗುಡಿಯೊಳುರಿಯುವ ದೀಪವೆಂದು
ಅಮಲ ಚಿಂತೆಯ ತೈಲವನು ತುಂಬುವೆ.

ಎದೆಯ ಕಮಲಾಕರದಿ ನೀನು ಮೀಯುವೆ ಎಂದು
ಕಂಬನಿಯ ನವಜಲದಿ ದಿನವು ತೊಳೆವೆ;
ಇರುಳು ಕವಿಯದ ತೆರದಿ ರವಿಯ ಬೆಳಕನು ಕರೆವ
ಮನದ ಬಾಗಿಲ ತೆರೆವೆ; ಮುಚ್ಚದಿರುವೆ.

ಎನ್ನ ಕರ್ಮದ ಹಣ್ಣುಗಳ ಕೊಯ್ದು ತರುವೆ,
ಸುಖದುಃಖಗಳನೆಲ್ಲ ಆಯ್ದು ತರುವೆ;
ಕಣ್ಣು ಕಿವಿ ಮೂಗು ಬಾಯಿಂದ್ರಿಯಂಗಳು ದುಡಿದ
ಹೂವುಗಳ ಮಾಲೆಯನು ನೆಯ್ದು ಬರುವೆ.

ಗಂಟೆಗಳ ನಾ ಹೊಡೆಯೆ, ಶಂಖವನು ನಾ ಊದೆ,
ಮಂಗಳಾರತಿಯ ನಾ ಬೆಳಗಲರಿಯೆ;
ನಿನ್ನ ಸಂಗವ ತೊರೆಯೆ, ನಿನ್ನನೆಂದೂ ಮರೆಯೆ,
ನಿನ್ನವನು ನಾನಲ್ಲವೇನೋ, ದೊರೆಯೆ!

ಅನಿಕೇತನ.

ಓ ನನ್ನ ಚೇತನ,
ಆಗು ನೀ ಅನಿಕೇತನ!
ರೂಪು ರೂಪುಗಳನು ದಾಟಿ,
ನಾಮಕೋಟಿಗಳನು ಮೀಟಿ,
ಎದೆಯ ಬಿರಿಯೆ ಭಾವದೀಟಿ, ॥ ಓ ನನ್ನ...
ನೂರು ಮತದ ಹೊಟ್ಟ ತೂರಿ,
ಎಲ್ಲ ತತ್ತ್ವದೆಲ್ಲೆ ಮೀರಿ,
ನಿರ್ದಿಗಂತವಾಗಿ ಏರಿ, ॥ ಓ ನನ್ನ...
ಎಲ್ಲಿಯೂ ನಿಲ್ಲದಿರು;
ಮನೆಯನೆಂದೂ ಕಟ್ಟದಿರು;
ಕೊನೆಯನೆಂದೂ ಮುಟ್ಟದಿರು;
ಓ ಅನಂತವಾಗಿರು! ॥ ಓ ನನ್ನ...
ಅನಂತ ತಾನ್ ಅನಂತವಾಗಿ
ಆಗುತಿಹನೆ ನಿತ್ಯಯೋಗಿ;
ಅನಂತ ನೀನ್ ಅನಂತವಾಗು:
ಆಗು, ಆಗು, ಆಗು, ಆಗು,
ಓ ನನ್ನ ಚೇತನ,
ಆಗು ನೀ ಅನಿಕೇತನ!

---

೨೦. ೧. ೨೪

ನನ್ನ ಹಾಡು

೧೦ ಬೇಂದ್ರೆ

ನನ್ನ ಹರಣಾ
ನಿನಗೆ ಶರಣಾ
ಸಕಲ ಕಾರ್ಯ ಕಾರಣಾ
ನಿನ್ನ ಮನನ
ದಿಂದ ತನನನ
ಎನಿಸುತಿದೆ ತನು ಪಾವನಾ.

ಸುಖದ ಮಿತ್ರ
ದುಃಖ ಮಿತ್ರ
ಭಾಗ್ಯ ಪ್ರಾಣ ಪೂರಣಾ
ಭಂಚಿ ಕ್ಷರಣ
ಸಲ್ಲಿ ಸದಣ
ಕಟ್ಟುತು ಗುಡಿ ತೋರಣಾ.

ನಿನ್ನ ಚರಣಾ
ಸುಸಂತರಣಾ
ಜಗದ್ಭರಿತ ಭಾವನಾ
ಹಾಸ್ಯ ಕಿರಣಾ
ತದನುಸರಣಾ
ತದಿತರ ಪುಷ್ಪ ಕಾಸೇನಾ.

ಹರುಷ ರಸವೆ
ಕರುಣಾದಸುವೆ
ಜೀವಧರ್ಮ ಧಾರಣಾ.
ರಸವೆ ಜನನ.
ವಿರಸ ಮರಣ
ಸಮರಸವೇ ಜೀವನ.

ನಾವಿಕ.

'ಕೊಳಲು'　　　　　　　　　　　　　　ಕುವೆಂಪು.

ಕೈ ಬಿಟ್ಟರೆ ನೀ ಗತಿಯಾರೆನ್ನ?
ಕಿರುದೋಣಿಯಿದು ಮುಳುಗದೇನೆನ್ನ?

ಮೊರೆಯುತ ಬರುತಿವೆ ಕಡಲಲೆ, ಗುರುವೆ,
ಭೋರೆಂಬಲೆಗಳು ಏಳುತಿವೆ;
ನೊರೆ ನೊರೆಯಾಗಿಹ ತೆರೆ ತೆರೆಯಲ್ಲಿ
ಮೃತ್ಯುವು ನೃತ್ಯವ ಮಾಡುತಿದೆ!

ಉತ್ತರಮುಖದಿಂ ಪ್ರತಿಧ್ವನಿಯಾಗಿದೆ!
ಗಾಳಿಯು! ಮೋಡವು! ಮುಸುಕುತಿದೆ!
ಕತ್ತಲು ಕವಿದಿದೆ, ಚಿತ್ತವು ನಡುಗುತಿದೆ,
ಕಾಣದು ಕಣ್ಣಿಗೆ ಧ್ರುವತಾರೆ!

ಹರಿದಿದೆ ಕಟ್ಟು, ಮುರಿದಿದೆ ಹುಟ್ಟು,
ಬಿಕ್ಕಲಿಹೆ, ಬಿಡದಿದೆ ಕಂಗೆಟ್ಟು!
ನೋಡದ ದಡದೆಡೆ ಮುಳುಗುವ ಚಿಕ್ಕದು
ಬರಿಯ ದೋಣಿಗಳು ತೋರುತಿವೆ!

ಎನ್ನದು ಯಾವ್ರದಯ್ಯ ಎನ್ನಯ ದೊರೆ
ಅನ್ಯರದಾವ್ರದಯ್ಯ ।
ಎಲ್ಲ ಸೌಭಾಗ್ಯವು ನಿನ್ನದಾಗಿರಲಾಗಿ ॥
ಗಂಗೆಯ ಜಲವೆಲ್ಲ ತುಂಗಭದ್ರೆಯದೆಲ್ಲ
ಮಂಗಳಕರವಾದ ಯಮುನೆಯದೆಲ್ಲ ।
ತುಂಗತರಂಗದ ಸಿಂಧು ನದಿಯದೆಲ್ಲ
ವಿಂಗಡಿಸುವರಾರೋ ಜಲನಿಧಿಯೊಳು ಪೊಕ್ಕು ॥
ಚಂಪಕ ರಜವೆಲ್ಲ ಚಂದನ ಧೂಳಿಯೆಲ್ಲ
ಸೊಂಪಿನ ಪಾಟಲ ಕಣವೆಲ್ಲ ।
ಪಾರಿಜಾತಕ ರಜವೆಂಬುದನ್ನಾರು
ಪರೀಕ್ಷಿಸಿ ಪೇಳ್ವರೋ ವನವಾತದಲಿ ನಿಂದು ।
ಭಿನ್ನಭಾವವ ಬಿಟ್ಟು ನಿನ್ನ ಪೂರ್ಣತೆಯನ್ನು
ಚೆನ್ನಾಗಿ ನೋಳ್ಪ ಕಣ್ಣೆನ್ನದಾಗಿರಲಾಗಿ ।
ನಿನ್ನ ಮಹಿಮೆಯನೆನ್ನ ಕಣ್ಣಿಗೆ ತೋರಿಪ
ಪುಣ್ಯವೆ ~~[illegible]~~ ಅನ್ಯರದಾಗಿರಲೆಂದಿಗು ॥

ಅಂಬಿಗ ನಾ ನಿನ್ನ ನಂಬಿದೆ । ಜಗ-
ದಂಬಾರಮಣ ನಿನ್ನ ನಂಬಿದೆ ॥
ತುಂಬಿದ ಹರಿಗೋಲಂಬಿಗಾ ಅದ-
ಕೊಂಬತ್ತು ಛಿದ್ರವು ಅಂಬಿಗಾ ।
ಸಂಭ್ರಮದಿ ನೋಡಂಬಿಗಾ ಅದ-
ರಿಂಬು ನೋಡಿ ನಡೆಸಂಬಿಗಾ ॥
ಹೊಳೆಯು ಭರವ ನೋಡಂಬಿಗ ಅದರ
ಸೆಳೆವು ಘನವಯ್ಯ ಅಂಬಿಗ ।
ಸುಳಿಯೊಳು ಮುಳುಗಿಸದೆ ಅಂಬಿಗ ಎನ್ನ
ಸೆಳೆದು ಕೊಂಡೊಯ್ಯ ನೀ ಅಂಬಿಗ ॥
ಆರು ತೆರೆಯ ನೋಡಂಬಿಗ ಅದು
ಮೀರಿ ಬರುತಲಿದೆ ಅಂಬಿಗ ।
ಯಾರಿಂದಲಾಗದು ಅಂಬಿಗ ಅದ ನಿ-
ವಾರಿಸಿ ನಡೆಸಂಬಿಗ ॥
ಸತ್ಯವೆಂಬುವ ಹುಟ್ಟಂಬಿಗ ಸದಾ-
ಭಕ್ತಿಯೆಂಬುವ ಪಥವಂಬಿಗ ।
ನಿತ್ಯಮೂರುತಿ ನಮ್ಮ ಪುರಂದರ ವಿಠಲನ
ಮುಕ್ತಿಮಂಟಪಕೊಯ್ಯೋ ಅಂಬಿಗ ॥

ಜಯ ಹೇ ಕರ್ನಾಟಕ ಮಾತೆ.

'ಕನ್ನಡ ಡಿಂಡಿಮ' ಕುವೆಂಪು.

ಜಯ್ ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ!
ಜಯತ್ ಸುಂದರ ನದಿ ವನಗಳ ನಾಡೆ,
ಜಯ ಹೇ ರಸಋಷಿಗಳ ಬೀಡೆ!
ಭೂದೇವಿಯ ಮಕುಟದ ನವಮಣಿಯೆ,
ಗಂಧದ ಚಂದದ ಹೊನ್ನಿನ ಗಣಿಯೆ;
ರಾಘವ ಮಧುಸೂದನರವತರಿಸಿದ
..ಭಾರತ ಜನನಿಯ....
ಜನನಿಯ ಜೋಗುಳ ವೇದದ ಘೋಷ,
ಜನನಿಗೆ ಜೀವವು ನಿನ್ನಾವೇಶ.
ಹಸುರಿನ ಗಿರಿಗಳ ಸಾಲೆ
ನಿನ್ನಯ ಕೊರಳಿನ ಮಾಲೆ
ಕಪಿಲ ಪತಂಜಲ ಗೌತಮ ಜಿನನುತ
..ಭಾರತ ಜನನಿಯ....
ಶಂಕರ ರಾಮಾನುಜ ವಿದ್ಯಾರಣ್ಯ
ಬಸವೇಶ್ವರರಿಹ ದಿವ್ಯಾರಣ್ಯ;
ರನ್ನ ಷಡಕ್ಷರಿ ಪೊನ್ನ
ಪಂಪ ಲಕುಮಿಪತಿ ಜನ್ನ

ಕಬ್ಬಿಗರುದಿಸಿದ ಮಂಗಳಧಾಮ
ಕವಿ ಕೋಗಿಲೆಗಳ ಪುಣ್ಯಾರಾಮ!
ನಾನಕ ರಾಮಾನಂದ ಕಬೀರರ
.. ಭಾರತ ಜನನಿಯ....
ತೈಲಪ ಹೊಯ್ಸಳರಾಳಿದ ನಾಡೆ,
ಡಂಕಣ ಜಕಣರ ನೆಚ್ಚಿನ ಬೀಡೆ,
ಕೃಷ್ಣಾ ಶರಾವತಿ ತುಂಗಾ
ಕಾವೇರಿಯ ವರ ರಂಗ!
ಚೈತನ್ಯ ಪರಮಹಂಸ ವಿವೇಕರ
..ಭಾರತ ಜನನಿಯ.....
ಸರ್ವ ಜನಾಂಗದ ಶಾಂತಿಯ ತೋಟ,
ರಸಿಕರ ಕಂಗಳ ಸೆಳೆಯುವ ನೋಟ.
ಹಿಂದೂ ಕ್ರೈಸ್ತ ಮುಸಲ್ಮಾನ
ಪಾರಸಿಕ ಜೈನರುದ್ಯಾನ.
ಜನಕನ ಹೋಲುವ ದೊರೆಗಳ ಧಾಮ,
ಗಾಯಕ ವೈಣಿಕರಾರಾಮ!
ಕನ್ನಡ ನುಡಿ ಕುಣಿದಾಡುವ ಗೇಹ,
ಕನ್ನಡ ತಾಯಿಯ ಮಕ್ಕಳ ದೇಹ!
.. ಜಯಹೆ ಭಾರತ ಜನನಿಯ..

ಕನ್ನಡಮ್ಮನ ಹರಕೆ

'ಕನ್ನಡ ಡಿಂಡಿಮ'

(ಕುವೆಂಪು)

ಕನ್ನಡಕೆ ಹೋರಾಡು ಕನ್ನಡದ ಕಂದ;
ಕನ್ನಡವ ಕಾಪಾಡು ನನ್ನ ಆನಂದ!
ಜೋಗುಳದ ಹರಕೆಯಿದು ಮರೆಯದಿರು, ಚಿನ್ನ;
ಮರೆತೆಯಾದರೆ, ಅಯ್ಯೊ ಮರೆತಂತೆ ನನ್ನ!

ಮೊಲೆಯ ಹಾಲೆಂತಂತೆ ಸವಿಜೇನು ಬಾಯ್ಗೆ;
ತಾಯಿಯಪ್ಪುಗೆಯಂತೆ ಬಲುಸೊಗಸು ಮೆಯ್ಗೆ;
ಗುರುವಿನೊಳ್ನುಡಿಯಂತೆ ಶ್ರೇಯಸ್ಸು ಬಾಳ್ಗೆ;
ತಾಯ್ನುಡಿಗೆ ದುಡಿದು ಮಡಿ, ಇಹಪರಗಳೇಳ್ಗೆ!

ರನ್ನ ಪಂಪರ ನಚ್ಚು ಕನ್ನಡದ ಸೊಲ್ಲು
ಬಸವದೇವನ ಮೆಚ್ಚು ಹರಿಹರನ ಗೆಲ್ಲು;
ನಾರಣಪ್ಪನ ಕೆಚ್ಚು ಬತ್ತಳಿಕೆ ಬಿಲ್ಲು;
ಕನ್ನಡವ ಕೊಲುವ ಮುನ್ನ ಓ ನನ್ನ ಕೊಲ್ಲು!

ನೆವವು ಏನಾದರೇನ್, ಹೊರನುಡಿಯು ಹೊರೆಯತ್ತು;
ನಿನ್ನ ನಾಡೊಡೆಯ ನೀನ್; ವೈರಿಯನು ತೊರೆಯತ್ತು.
ಕನ್ನಡದ ನಾಡಿನಲಿ ಕನ್ನಡವ ಮೆರೆಯತ್ತು;
ತಾಯ್ಗಾಗಿ ಹೋರಾಡಿ ತಾಯ್ನುಡಿಯ ಪೊರೆಯತ್ತು!

ಕನ್ನಡಕೆ ಬಂದಿರ್ಪ ಅಪಾಯವು ಹಿರಿದಿಂದು;
ನೀ ನಿನ್ನ ಮನೆಯಲಿ ಮಲಗಿರುವುದು ಹೊಂದದು!
ಎದ್ದೇಳು, ಕಂದಯ್ಯ, ಕತ್ತಿಯನು ಕೈಕೊಳ್ಳು!
ಕಳ್ಳರು ಪೇಟೆಯ ಕೋಟೆ ಬಂದಿಳಿದರೆ, ತಳ್ಳೆಲ್ಲ!

ಏಳಯ್ಯ, ಕಂದಯ್ಯ, ಬೇಡುವೆನು ನಿನ್ನ;
ಕನ್ನಡಮ್ಮನ ಗುಡಿಗೆ, ಮರೆಯದಿರು ಚಿನ್ನ!
ಮರೆತೆಯಾದರೆ ಅವಳ, ಮರೆತಂತೆ ನನ್ನ
ಹೋರಾಡು ಕನ್ನಡಕೆ ಕಲಿಯಾಗಿ, ಚಿನ್ನ!

క్షీరసాగర విహార
అపరిమిత ఘోర పాతక విదార ।
క్రూర జనగణ విదూర
నిగమ సంచార సుందర శరీర ॥
శతమఖాహిత విభాగ శ్రీరామ శమనరిపు సన్నుతాంగ
శ్రిత మానసాంతరంగ జనకజా శృంగార కులజ భృంగ ।
రాజాధిరాజ వేష శ్రీరామ రమణీయతర సుభూష
రాజనుత లలిత భాష శ్రీ త్యాగరాజాది భక్త పోష ॥

ಗಂಗಾವತರಣ

ಅಂಬಿಕಾತನಯದತ್ತ

ಇಳಿದು ಬಾ ತಾಯಿ
ಇಳಿದು ಬಾ
ಹರನ ಜಡೆಯಿಂದ
ಹರಿಯ ಅಡಿಯಿಂದ
ಋಷಿಯ ತೊಡೆಯಿಂದ
ನುಸುಳಿ ಬಾ
ದೇವದೇವರನು ತಣಿಸಿ ಬಾ
ದಿಗ್ ದಿಗಂತದಲಿ ಹಣಿಸಿ ಬಾ
ಚರಾಚರಗಳಿಗೆ ಉಣಿಸಿ ಬಾ
ಇಳಿದು ಬಾ ತಾಯಿ
ಇಳಿದು ಬಾ.

ನಿನಗೆ ಪೊಡಮಡುವೆ
ನಿನ್ನನುಡುತೊಡುವೆ
ಏಕೆ ಎಡೆತಡೆವೆ
ಸುರಿದು ಬಾ
ಸ್ವರ್ಗ ತೊರೆದು ಬಾ
ಬಯಲು ಜರಿದು ಬಾ

ನೆಲದಿ ಹರಿದು ಬಾ
ಬಾರೆ ಬಾ ತಾಯಿ ಇಳಿದು ಬಾ
ಇಳಿದು ಬಾ ತಾಯಿ
ಇಳಿದು ಬಾ.

ನನ್ನ ತಲೆಯೊಳಗೆ
ನನ್ನ ಬೆಂಬೊಳಗೆ
ನನ್ನ ಬಗಲೊಳಗೆ
ನುಗ್ಗಿ ಬಾ
ಕಣ್ಣ ಕಣ ತೊಳೆಸಿ
ಉಸಿರ ಎಳೆ ಎಳೆಸಿ
ನುಡಿಯ ಸಸಿ ಮೊಳೆಸಿ
ಹಿಗ್ಗಿ ಬಾ
ಎದೆಯ ನೆಲೆಯಲ್ಲಿ ನೆಲಸಿ ಬಾ
ಜೀವ ಜಲದಲ್ಲಿ ಚಲಿಸಿ ಬಾ
ಮೂಲ ಜಾಲದಲ್ಲಿ ನೆಲಸಿ ಬಾ
ಇಳಿದು ಬಾ ತಾಯಿ
ಇಳಿದು ಬಾ.

ಕಂಬನಿ ಮುಂಬನಾಗಿ ತೆರಳಿ ಬಾ
ನೀರು ನೀರಾಗಿ ಉರುಳಿ ಬಾ
ಮತ್ತೆ ಹೊಡೆಮರಳಿ ಹೊರಳಿ ಬಾ
ದಂಡೆಯುಯುರದ ದೀನ
ಹರೆಂತುಳಿದ ದೀನ
ನೀಲರದ ಮೀನ
ಕರೆ ಕರೆವ ಬಾ
ಇಲ್ಲಿಗು ಬಾ ತಾಯಿ
ಇಲ್ಲಿಗು ಬಾ.

ಕರು ಕಂಡ ಕರುಳೆ
ಮನ ಉಂಡ ಮರುಳೆ
ಉದ್ದಂಡ ಅರುಳೆ
ಸುಳ್ಳು ಸುಳ್ಳಿದು ಬಾ
ಶಿವ ಸುಪ್ತ ಕರುಣೆ
ಅತಿಶಂಬಿ ದರುಣೆ
ವಾತ್ಸಲ್ಯವರಣೆ
ಇಲ್ಲಿ ಇಲ್ಲಿದು ಬಾ

ಇಳಿದು ಬಾ ತಾಯಿ
ಇಳಿದು ಬಾ.

ಕೊಳ್ಳೆಂದು ಕೊಳ್ಳುವವರು ಇಲ್ಲ ಬಾ
ಬೆಲೆ ಶಕ್ತಿಗಳು ಕೊಳ್ಳ ಬಾ
ಅಳಿಗೆ ಮಾಡುವರು, ಇಲ್ಲ ಬಾ
ಸಾವಿ ನಾವಿಂದುಸು ತುಕ್ಕ ಬಾ
ನೀವು ನಾವನ್ನು ನುಂಕ್ತ ಬಾ
ನಿಕ್ಕಿ ಜನನನ್ನು ಎತ್ತ ಬಾ
ಸಂರಕ್ಷಿಸ್ಯವಿದ್ದ ಪ್ರತಿಬಿಂಬ ಬಿದ್ದ
ಒಬ್ಬ ದ್ದ ಸುದ್ದ ನೀರೆ
ಎಚ್ಚತ್ತು ಎದ್ದ ಪ್ರಕಾಶದುದ್ದ
ಧರೆಗಿಳಿಯುವ ಬದ್ದ ಧಾರೆ
ನಿತ್ಯಾನಂದ ಪರ ಪಾವನಾತ
ತಾನಾ- ಕನ್ಯುಮಿಂದೆ.

ಸ್ವಂತಾರ ದಂಡೆಯ ಪುಂಡಾರ ಗಂಗೆ
ನೀನೇ ತಾಯಿ ತಂದೆ.

ರಸಪೂರ ಜನ್ಯ ನೀನಲ್ಲ ಅನ್ಯ
ಸುಚಿತ್ತಾನಂದ ಕನ್ಯ
ಬಂದಾರೆ ಬಾರೆ, ಬಂದಾರೆ ಸಾರೆ
ಕನ್ ಪ್ಯಾರೆ ತಡೆವರೇನೇ ?
ಅವತಾರವೆಂದೆ ಎಂದಾರೆ ತಾಯಿ,
ಈ ಅಘ: ಪಾತವನ್ನೇ
ದೂರಕೆ ಸಂದಂತೆ
ಪುಟುತ್ತೆ ಉಂಡಂತೆ
ತುಂಬಿ ಬಂದಂತೆ
ಮುವತ ಪುವತೆ ಎಂದಂತೆ
ಮುಡುಕಿ ಬಾ
ನಿನ್ನ ಕಂದನ್ನ ಹುಡುಕಿ ಬಾ
ಹುಡುಕಿ ಬಾ ತಾಯಿ
ಮುಡುಕಿ ಬಾ.

ಹರಣ ಹೊಸದಾಗೆ ಹೊಳೆದು ಬಾ
ಬಾಳು ಬೆಳಕಾಗೆ ಬೆಳೆದು ಬಾ
ಮನ್ನ ತೊಳೆದು ಬಾ

ಕೈ ತೊಳೆದು ಬಾ
ಇಳಿದಿಳಿದು ಬಾ ತಾಯಿ
ಇಳಿದು ಬಾ ತಾಯಿ
ಇಳಿದು ಬಾ.

ಶಂಭು-ಶಿವ-ಹರನ ಚಿತ್ತೆ ಬಾ
ದತ್ತ ನರಹರಿಯ ಮುತ್ತೆ ಬಾ
ಅಂಬಿಕಾತನಯನತ್ತೆ ಬಾ
ಇಳಿದು ಬಾ ತಾಯಿ
ಇಳಿದು ಬಾ.

ಸೋಮನಾಥಪುರದ ದೇವಾಲಯ

ಕೊಳ್ಳಲು? ಕುವೆಂಪು.

ಬಾಗಿಲೊಳು ಕೈಮುಗಿದು ಒಳಗೆ ಬಾ, ಯಾತ್ರಿಕನೆ,
ಶಿಲೆಯಲ್ಲವೀ ಗುಡಿಯು ಕಲೆಯ ಬಲೆಯು!
ಕಂಬನಿಯ ಮಾಲೆಯನು ಎದೆಯ ಬಟ್ಟಲೊಳಿಟ್ಟು
ಧನ್ಯತೆಯ ಕುಸುಮಗಳನರ್ಪಿಸಿಲ್ಲಿ.
ಗಂಟೆಗಳ ದನಿಯಿಲ್ಲ, ಜಾಗಟೆಗಳಿಲ್ಲಿಲ್ಲ;
ಕರ್ಪೂರದಾರತಿಯ ಜ್ಯೋತಿಯಿಲ್ಲ.
ಭಗವಂತನಾನಂದ ರೂಪುಗೊಂಡಿಹುದಿಲ್ಲಿ;
ರಸಿಕತೆಯ ಕಡಲುಕ್ಕಿ ಹರಿವುದಿಲ್ಲಿ!
ಸುರಸದಿಂದುಲಿಯುತಿದೆ ಶಿಲೆಯು ರಾಮಾಯಣವನಿಲ್ಲಿ!
ಬಾದರಾಯಣನಂತೆ ಭಾರತವ ಹಾಡುತಿಹುದಿಲ್ಲಿ!
ಕುಶಲತೆಗೆ ಬೆರಗಾಗಿ ಮೂಕವಾಗಿಹೆ ಕಾಲವಿಲ್ಲಿ!
ಮೂರ್ತಿಯಲಿ ಮೈಮರೆತು ತೇಲುವುದು ಭೂಭಾರವಿಲ್ಲಿ!

ದೋಣಿ ಹಾಡು

[illegible] — ಕುವೆಂಪು

ದೋಣಿ ಸಾಗಲಿ, ಮುಂದೆ ಹೋಗಲಿ, ದೂರ ತೀರವ ಸೇರಲಿ!
ಬೀಸುಗಾಳಿಗೆ ಬೀಳುತೇಳುವ ತೆರೆಯ ಮೇಗಡೆ ಹಾರಲಿ!

ಹೊನ್ನ ಬಿಸಿಲಿನ ಕಿರಣ ಕೆಂಪಾಗಲು ಹೇಮವಾರಿಯು ತೊಳೆಯುತಿರೆ,
ಪಡುವಣದೊಳಗೆ ಬಣ್ಣವೆರೆಯುತ ರಕ್ತಕೋಮಲ ಚಿತ್ರಕೆ,
ನೋಡಿ, ಮುಗಿಲಾಟ ದಿಗಂತದ ಮುಂದುವರೆಸಿನ ಮೆಲ್ಲನೆ
ರಂಜಿಸುತ್ತಿದೆ! ಬೆಳಗಿನಂತಿಹ ಸುಪ್ರಭಾತದ ಬಾನಲಿ!

ಕೆರೆಯ ಹಿಂಬದಿ ಮೇಲೆ ಮಿಂಚಿನ ಹೊನ್ನಗಲ್ಲಂಬದಿ ಬಾನುವಲಿ
ಮಿಂಚುತಿರ್ಪುದನು ನೋಡುತ್ತಿರಲು ಬಾಳ ಕೋಮಲ ದಿನಮಣಿ!
ಉಸಿರು ಹೋಗದ ಹೊಲದ ಗಾಳಿಯು ತೀರ ತಣ್ಣಗೆ ಬೀಸುತಿದೆ,
ಕೃಷಿಕ ಹಾಡುವ ಮತ್ತ ಕೋಕಿಲ ಮಧುರಗಾನವು ಕೇಳುತಿದೆ!

ದೂರ ಬೆಟ್ಟದ ಮೇಲೆ ತೇಲುವ ಇಬ್ಬನಿಯು ಮೋಹದ ನೋಟಲಿ;
ಇದನೆ ನೋಡುತ, ಚಿಂತೆ ತೊರೆಯುತ ದೋಣಿಯು ಮುಂದೆ ಸಾಗಲಿ!
ನಾವು ಅನಂತದ ಯಾತ್ರಿ ಜೀವರು, ನಮ್ಮ ಜೀವನ ಯಾತ್ರೆಗೆ!
ನಿನ್ನೆ ನಿನ್ನೆಗೆ, ಇಂದು ಇಂದಿಗೆ, ಇರಲಿ ನಾಳೆಯು ನಾಳೆಗೆ!

ಧ್ರುವತಾರೆ

ಕಲ್ಯಾಣಿ ರಾಗ ರೂಪಕ

ಅಗಣಿತ ತಾರಾಗಣಗಳ ನಡುವೆ
ನಿನ್ನನೆ ನೆಚ್ಚಿಹೆ ನಾನು ;
ನನ್ನೀ ಜೀವನ ಸಮುದ್ರಯಾನಕೆ
ಚಿರ ಧ್ರುವತಾರೆಯು ನೀನು .

ಇಲ್ಲದ ಸಲ್ಲದ ತೀರಗಳೆಡೆ ನಾ
ತೊಳಲುತ ಬಳಲಿದರೇನು ?
ದಿಟ್ಟಿಯು ನಿನ್ನೊಳೆ ನೆಟ್ಟಿರೆ, ಕಡೆಗೆ
ಗುರಿಯನು ಸೇರೆನೆ ನಾನು ?

ಚಿರಚಂಚಲವಾಗಿಹ ತಾರಕೆಗಳಲಿ
ನಿಶ್ಚಲನೆಂದರೆ ನೀನೆ !
ಮಿಂಚಿ ಮುಳುಗುತಿಹ ನಕ್ಷತ್ರದೆಡೆಯಲಿ
ಶಾಶ್ವತನೆಂದರೆ ನೀನೆ !

೭.೧೦.೭೫

ನಿನ್ನೆಡೆಗೆ ಬರುವಾಗ.

ತೋಡಿ. — ಕುವೆಂಪು.

ನಿನ್ನೆಡೆಗೆ ಬರುವಾಗ ಸಿಂಗರದ ಹೊರೆಯೇಕೆ?
ಸಡಗರದ ಮಾತುಗಳ ಬಿಂಕವೇಕೆ?
ನಿನ್ನ ಮುಂದಿರುವಾಗ ಮಂತ್ರಗಳ ಮರೆಯೇಕೆ?
ಸಂಪ್ರದಾಯದ ಮುಸುಕು ಬಣ್ಣವೇಕೆ?

ನೂಪುರದ ಗೆಜ್ಜೆಗಳ ಕಿಂಕಿಣಿಯ ಧ್ವನಿ ನಿನ್ನ
ಸವಿಗೊರಲ ಸಿಂಚಿತವ ಕೆಡಿಸದಿರಲಿ!
ಮಂತ್ರಗಳ ಜಪನಿಕೆಯು, ದೊರೆ, ನಿನ್ನ ನಿಜದೊಂದು
ಸೌಂದರ್ಯವನು ಮುಚ್ಚುಗೆಯ್ಯದಿರಲಿ!

ನಗ್ನತೆಗೆ ನಾಚದಲೆ ಸಿಂಗಾರ ತೆಕ್ಕೆಯೊಳು
ಮುಡಿ ಸುಗ್ಗಿಯನೊಲಿದ ಹೂವಿನಂತೆ
ಸಿಂಗರದ ಹೊರೆಯುಳಿದು, ಮಂತ್ರಗಳ ಮರೆಯುಳಿದು
ಪ್ರೇಮಪಾರತಿ ಹಿಡಿದು ತೇಲಿಬರುವೆ!

೨೧-೭-೨೬. # ನಮಸ್ಕಾರ. ಕು.ವೆಂ.ಪು

ಮುಗಿಯಲಿನ್ನು ಶಿರವು ನಿನ್ನ
ಚರಣಾಬ್ಜಕೆ ತಲೆಬಾಗಿ.
ನನ್ನ ಅಹಂಕಾರವೆಲ್ಲ
ಮುಳುಗಲಶ್ರುಜಲದಲಿ !
ನನಗೆ ನಾನೆ ಪೂಜೆಗೈಯುತ
ಸೋತರನಿತ್ತಲು
ಬಿಸಿಲಿಗೆ ಬರುವ ಬವಲು ಅಂತ್ಯ
ಬರಿಯ ಕತ್ತಲು !
ಅಹಂಕಾರವಂಧಕಾರ
ಮುತ್ತುತಿಹೆ ಸುತ್ತಲು !
ನನ್ನ ನಾನೆ ಮರೆಯುವಂತೆ
ನಾನು ನಿನ್ನವ ಕರ್ತದಿ
ನಿನ್ನ ಇಚ್ಛೆ ಪೂರ್ಣವಾಗ-
ಲೆನ್ನ ಜೀವ ಧರ್ಮದಿ.
ತಣಿಯಲೆನ್ನ ಜ್ಞಾನ ನಿನ್ನ
ಚರಣಶಾಂತಿಯು ;
ಬೆಳಗಲೆನ್ನ ಪ್ರಾಣ ನಿನ್ನ
ಚರಮ ಕಾಂತಿಯು .
ನನ್ನನಳಿಸು, ನೀನೆ ನೆಲಸು
ಹೃದಯಮಂದಿರದಲಿ !

೨೯-೩-೩೧

ಬನದಲಿ ದಿನ ದಿನ

[illegible] ಕುವೆಂಪು

ಬನದಲಿ ದಿನ ದಿನ ಬಣ್ಣದ ಹೂಗಳು
ನಿನ್ನಂದವ ಬೀರುವುದ ನೋಡುತಿವೆ ;
ಕೋಗಿಲೆ ಗಿಳಿಗಳು ನಿನ್ನಿಂಚರಗಳನ
ಕಲಿತವ ಹಾಡುವುದು ಕಲಿಯುತಿವೆ ;
ತಿಳಿಯ ಕೊಳದ ತಣ್ಣನೆ ಗಾಳಿಯದು
ನಿನ್ನ ಪಿಸುದನಿಯಂತೆ ತೋರುತಿದೆ .
ಹಳ್ಳಕೊಳ್ಳದೊಳುಲಿವ ಜುಳುಜುಳು ನಿನದವು
ನಿನ್ನುಲಿಯಂದವ ಮೊಳಗುತ್ತಿದೆ ?
ಗಾಳಿಗೆ ಬಳುಕುವ ತೆಳ್ಳನೆ ಬಳ್ಳಿಯದು
ನಿನ್ನ ನಡೆಯೊಲವನು ಕಲಿಯುತ್ತಿದೆ ?
ಬನದಲಿ ಕುಣಿಯುವ [illegible]
ಕಣ್ಣನು ನೋಡುತೆ ಕಲಿಯುತ್ತಿದೆ ?
ಬನದೊಳು ನೀನೇನೋ ? ನಿನ್ನೊಳು ಬನವೇನೋ ?
ನಾನೂ ನೀನೂ ಬನದೊಳಗೇನೋ ?
ಬನವೂ ನೀನೂ ಒಂದಾದಾಗ
ಎಲ್ಲವು ನಿನ್ನಂತೆ ಮನದೊಳಗೇಕೋ ?

[illegible]

ತೇನ ವಿನಾ...

[illegible] [illegible]

ತೇನ ವಿನಾ ತೇನ ವಿನಾ
ತೃಣಮಪಿ ನ ಚಲತಿ ತೇನ ವಿನಾ.
ಮಿಡುಕೆಂಬ ಬಿಡು, ಹೇ ಮೂಢಮನಾ.
ಮೂಢಮನಾ, ಹೇ ಮೂಢಮನಾ!

ಕವಿಗಿಲ್ಲದ ಛಂದವು, ಕರೆಗಿಲ್ಲದ ಛಂದವು,
ಕಾಣಾನಿಪಕ್ಕೆ ಇರದ ಛಂದವು,
ನಿನಗೇತಕೆ ಬಿಡು, ಅಹಾ! ತೃಪ್ತಿಯನಿಡು;
ನಿನ್ನನೆ ನೃಪಕೃಪೆಗೆ ನೀಡು!
.. ತೇನ ವಿನಾ...

ಎಲ್ಲೆಲ್ಲಿಯು ಕಂಪಿತ, ಎಲ್ಲೆಲ್ಲಿಯು ಕಾಲ್
ಎಲ್ಲೆಲ್ಲಿಯು ಕರ್ ತಾನಾದ
ಸಾಕ್ ಬಿಕ್ಕೆ ಚಕ್ರಿಯು ಕಿನಿಂದ ತಿಳಿ
ಬಿಡು ದಿಕ್ಕೆ ನಿನಗೆ ವಿಧಾದ!
.. ತೇನ ವಿನಾ...

ಸದಾ

[illegible] [illegible]

ನಿನ್ನ ಆಶೀರ್ವಾದ ಹರಿವೇಷ್ಟ ಸುರಿಯುತ್ತಿರಲಿ
ನನ್ನನು ಸದಾ ;
ನನ್ನ ಭಕ್ತಿಯು ಒಳ್ಳೆ ಮುಲಾಮಂತೆ ಸುತ್ತುತಿರಲಿ
ನಿನ್ನನು ಸದಾ.
ನನ್ನ ಹೃದಯದ ತುಂಬಿ ನಿನ್ನ ಹಿಯ ಮಧುರತೆ
ತಾಳಲಿ ಸದಾ ;
ನನ್ನ ಶಾಂತತೆ ನಿನ್ನ ಸಂತತೆಯನ್ನೆ ಹೆಚ್ಚಿಸದೆ
ಬೀಳಲಿ ಸದಾ.
ನನ್ನ ಪ್ರಕೃತಿ ನಿನ್ನ ಪ್ರಕೃತಿತ್ವವಾಗದಿರದಿ
ತೇಲಲಿ ಸದಾ ;
ನನ್ನ ಕಣ್ಣುಗಳೆಲ್ಲ ನಿನ್ನ ಹಿಮತ ಮಹ್ವನೆ
ತೋರಲಿ ಸದಾ.
ನನ್ನ ನರ್ತನತೆಯೆಲ್ಲ ನಿನ್ನ ಪ್ರೀತಿಗಾಗಿ
ನೋಯಲಿ ಸದಾ ;
ನನ್ನ ನಶ್ವರವೆಲ್ಲ ನಿನ್ನ ನಿತ್ಯತೆಗಾಗಿ
ಸಾಯಲಿ ಸದಾ !

ಚಂದುಮಾಮಗೆ

ಹಾಳ್ಗಲು? ಕುವೆಂಪು.

ಚಂದಿರ ಬಾರೋ, ತೇಜೋ
ಮಂದಿರ ನೀ ಬಾರೋ.

ಮೂಡಣ ಗಗನವ ಶೋಭಿಸುತ
ಮೋಡಗಳೆಡೆಯೊಳು ರಂಜಿಸುತ
ಗಿರಿಗಳ ಬೆಳಗುತ
ತೊರೆಗಳ ತೊಳಗುತ
ನಾಡಿಗೆ ಹೆಸರಿಯ ನೆರೆಕೊಡುತ!
ಪರಿದಿರುವೆರಡನು ಸಂಧಿಸುತ
ಪರವಶಸಂಗವ ಬಂಧಿಸುತ
ಶಾಂತಿಯ ಬೀರುತ
ಕಾಂತಿಯ ತೋರುತ
ತರಳೆಯ ಮನದೊಳು ಮಂದಿಸುತ!
ಮಂದು ಮೋದವ ಮೋಹಿಸುತ
ಶಾಂತವ ಸ್ವಾಂತದಿ ನೆಲೆಯಿಸುತ
ಕಮಲವನಳಿಸುತ
ಕುಮುದವನೊಲಿಸುತ
ಮಿಥ್ಯೆಗೆ ಸತ್ಯತೆಯೀಯುತ್ತ!

ಬಿದಿಗೆಯ ಚಂದ್ರ.

'ಪ್ರೇಮ ಕಾಶ್ಮೀರ' ಕುವೆಂಪು.

ಪಡುವಣ ಬಾನಿನ ನೀಲಿಯ ಕೆನ್ನೆಯಲಿ
ಬಿದಿಗೆಯ ರೇಖಾ ಚಂದ್ರಮನು
ನವವಧು ವದನದ ಮುಗುಳ್ನಗೆಯಂದದಿ
ಮೆರೆವನು ಮೋಹವನು.

ನೈಶಾಕಾಶದ ಚಿತ್ರಕದೆದೆಯಲಿ
ಕಿಡಿಕಿಡಿ ಕೆತ್ತಿದೆ ತಾರಾಳಿ ;
ತರುವನ ಅಂಧರೆ ಧ್ಯಾನದಿ ಮುಳುಗಿವೆ
ಭಾವ ಸಮಾಧಿಯಲಿ !

ಉದ್ವೇಗವನಳಿಯುವ ಸಂತೃಪ್ತಿಯು
ನಿಲುವುದು ವೈಶಾಲ್ಯದಲಿ
ತ್ರಿಜಗಜ್ಜೀವನ ವಾಹಿನಿ ಹರಿದಿದೆ
ಸುಖಮಯ ಸುಪ್ತಿಯಲಿ.

ಧ್ಯಾನದ ಮಡಿಲಲಿ, ಕುಸುರು ದುಸಲೆಯಲಿ
ಮಲಗಿರುವೆನು ನಾನೇಕಾಂಗಿ ;
ನೀನೆಂದಿಗೆ ಬರುವೆಯೊ ಎಂಬುವ
ಚಿಂತೆಯ ನಾನಾಗಿ.

ಕುಮಾರವ್ಯಾಸ

ಪಾಂಚಜನ್ಯ

ಕುವೆಂಪು

ಕುಮಾರವ್ಯಾಸನು ಹಾಡಿದನೆಂದರೆ
ಕಲಿಯುಗ ದ್ವಾಪರವಾಗುವುದು!
ಭಾರತ ಕಣ್ಣಲಿ ಕುಣಿಯುವುದು; ಮೈಯಲಿ
ಮಿಂಚಿನ ಹೊಳೆ ತುಳುಕಾಡುವುದು!
ಆ ಕುರುಕ್ಷೇತ್ರವು ತೋರುವುದು;
ಆ ರಣರಂಗವು
ಆ ಸಂಗ್ರಾಮವು
ವೀರಕ್ಷಾತ್ರಹುಂಕಾರ ಕೇಳುವುದು!
ನೆತ್ತರ ಸರಿ ಕೇಳುವುದು!
ದ್ರೋಣೋದಯದ ಪ್ರತಿಸಂಗ್ರಾಮದಲಿ
ಕಲಿಗಳ ಕದನದ ಕೂಗುಗಳು
ಹಾರುವ ಗದೆಗಳ ಸುಂಟರುಗಾಳಿಗಳು
ರಥ ಚಕ್ರ ಧ್ವನಿ ಘೀಳಿಡ್ವಾನೆಗಳು
ಸಾಯ್ವರ ನೋವುಗಳು
ಬೀಳ್ವರ ಸಾವುಗಳು
ನೆಲ ಸೋತವರ ಕೂಗುಗಳು
ನೆರೆ ಗೆದ್ದವರಾರ್ಭಟಗಳು

ನುಗ್ಗುವ ಸೈನ್ಯದ ಹಾಹಾಕಾರದಲಿ
ಕೆನೆಯುವ ಕುದುರೆಗಳ ಹೇಷಾರವದಲಿ
ಕಿವಿ ಬಿರಿಯುವುದು!
ಎದೆ ಒಡೆಯುವುದು!
ಬಿಗಿಯುವ ಬಿಲ್ಲಿನ ಟಂಕಾರಗಳಲಿ
ಚಿಮ್ಮುವ ರಕ್ತದ ಬುಗ್ಗೆಯ ನೋಟದಿ
ಕಣ್ಕತ್ತಲೆಯುವುದು!
ಮೈ ನಡುಗುವುದು!

ಕೇಳಿರಿ! ಪಾರ್ಥನ ಸಾರಥಿಯು
ಬಾಗಿ ತೆಗೆಯುವನು,
ಬಾಗಿ ಸೆಳೆಯುವನು,
ಬಿಲ್ಲೆತ್ತುವನು ಸಮರಕೆ ಸೆಳೆಯುವನು!
ಕುರುಬಲದ ನರಸಂಹಾರದಲಿ
ಭೀಷ್ಮನು ಮಲಗಿರುವನು!
ಕೌರವರ ಬಾಣಗಳು ಮುಂದಕೆ
ದುರ್ಯೋಧನನು ಓಡಿಹೋದನು!

ನೆತ್ತರುಹೀರುತ ತಣಿಯುವನು ಭೀಮನನು,
ಅಂಥವನ ನೋಡಲ್ಲಿ!
ರಕ್ತದಿಂದ ತೊಯ್ದಿರುವನು ಕರ್ಣನನು,
ಹಾ! ಹಾ! ನೋಡಲ್ಲಿ!
ರಣಚಂಡಿಯರು ಅದೊ ಬಂದಿಹರು ಮಂಗಳು
ಶಂಖ್ಯನ ದುಂದುಭಿ ಬಾರಿಸುತಿರುವರು!
ಮಗುಳ್ದು ಕೂಗುತ ನೋಡಲ್ಲಿ
ನಿಂತಿರುವಳು ರಣಾಂಗಣದಲಿ
ದ್ರೌಪದಿ ಮುಡಿಗೆದರಿ!

ವೈಶಂಪಾಯನ ಸರಸಿಯ ತೀರದಿ,
ತೋರುವರಾರಲ್ಲಿ?
ಕೌರವದೇವನು ನಿಡಿದಾಗಿರುವನು
ಭೀಮನ ಸುಳಿಸುವಲಿ!
ವೈರಿಯ ಎದೆಯನು
ಬಡಿಯುವ ಗದೆಯನು
ಎಳೆತ್ತಿರುವನು ನೋಡಲ್ಲಿ!

ಪ್ರೇಮವನು ಬರೆದನೆ ?
ಕೊರಳ ಗೆದ್ದನೆ ?
ಮುಂದಾಗುವುದನು ಕಾಣಲ್ಲ !
ಇದಾವ ಸಾಧ್ಯವು ?
ಏನಾಶ್ಚರ್ಯವು !
ಕೃಷ್ಣನ ಕುರುಹ ನೋಡಲ್ಲ !
ಎನ್ನನು ನೋಡುವೆ ? ತಡೆಯುವೆ ಏಕೆ ?
ಕೊಳಲಾದವನು ಮಿಡಿಯುವೆ ಏಕೆ ?
ಒಯ್ಯುವನೆ, ತುರುಕರು ಕರೆದಿರುವನು !
ಕೊಳೆ ಬಾರಿಸಿರುವನು !
ಸಖಿ. ಸಖಿ ! ಬಾಳು ತುಂಬಿರುವನು !
ಕಣೆ ಬಾ ಮಾಡಿರುವನು !

ಕುಮಾರ ಸ್ವಾಮಿಯನು ಹಾಡಿಸನೆಂದರೆ ,
ಕಲಿಯುಗ ಹಾಸ್ಯಕರವಾಗುವುದು !
ಧ್ಯಾನದ ಕಣ್ಣಲಿ ಕಾಣುವುದು, ಮುಂದಿನ
ಬಂದಿರನ ಕೊಳಲ ತುಳುಕಾಡುವುದು
ಕಲಿ ಕೆಣಕ್ಕುತ್ತ ಮನವು !
ಕವಿ ಹುಚ್ಚಾಗುವನು ! ......

ಒಂದು ರಾತ್ರಿ

ಮುಗಿಲ ತೊಟ್ಟಿಲಲಿ ಮಲಗಿರುವ ಚಂದಿರನ
ಜೋಗುಳ ಹಾಡಿ ತೂಗುತ್ತಿತ್ತು.
ಗೆ ಮುದುರಿ ಮಲಗಿರುವ ಹಕ್ಕಿ ಗೂಡುಗಳಲ್ಲಿ
ಇರುಳು ಜೋಂಗನ ಹಾಡಿ ಸಾಗುತ್ತಿತ್ತು.
ಳ್ಳಿರುವ ಹೊಂದಣಿಸಲಿ ನರುಗಂಧಿ ಸುದರದಲಿ
ಗನಸಿನ ಹಾಡು ಕೇಳುತ್ತಿತ್ತು.
ಂಬುನೀಲಿನ ಹೊಳೆಮೊಳಂಬಗನ ಕಿರುದೋಣಿ
ಸಾಧನ ಗೀತೆಯನು ಹೇಳುತ್ತಿತ್ತು.
ಮುಂದಿನ ದಿನದ ನವನವೋದಯಕಾಗಿ
ತಪವಿರುವಂತೆ ತೋರುತ್ತಿತ್ತು.
ಂತರೀತಿಯೊಳಗೂ ಮೆಲ್ಲ ಮೆಲ್ಲನೆ ಉರುಳಿ
ನ ಸುಭೋದಯವ ಸಾರುತ್ತಿತ್ತು.

ವನಗಾಯಕ.

[illegible]

[illegible]
ಜಗದ ಜೀವನಕೆ ಚೇತನ [illegible]
ನಿನ್ನಯ ಗಾನದ [illegible]
[illegible] ಕೇಳುವುದು;
[illegible] ಹಾಡುವುದು.
[illegible]
[illegible]
[illegible]
[illegible] ತಣಿಸುವುದು;
ಶಾಂತಿಗೆ [illegible]
ಓ ವನಗಾಯಕ [illegible],
ನಿನ್ನ ಗಾನದ [illegible]
ಕವಿಗಳಿಗೆ [illegible]
[illegible] ನಿನ್ನ [illegible]!
[illegible]
[illegible]
[illegible] ನಿನ್ನ ಗಾನ
ನನಗೆ [illegible]

ಮುಗಿಲ ಲೀಲೆ.

(ಪ್ರೇಮಕಾಶ್ಮೀರ) ಕುವೆಂಪು

'ಬಾನಿನ ಬಗಲಿಯ ನೀಲಿಯಲಿ
ಬಿಳಿಮುಗಿಲಿನ ಕೂಸಾಡುತಿದೆ!'
'ಹಡಗಿನ ಹುಟ ರಿಂತ ಕಡಲಿನಲಿ
ಗುರಿಯಿಲ್ಲದೆ ತೇಲಾಡುತಿದೆ!'
'ಯಮುನೆಯ ನೀರಿನ ಹೊನಲಿನಲಿ
ನಿದ್ದೆಯ ಹಂಸವು ತೇಲುತಿದೆ!'
'ನೀಲಿಯ ತೈಲದ ಬಟ್ಟಲಲಿ
ಬೆಣ್ಣೆಯ ಮುದ್ದೆಯು ಹೋಲುತಿದೆ!'
'ರುಸುರನು ಹಾಸಿದ ತೊಟ್ಟಿಲಲಿ
ಬಿಳಿಗನಸಿನ ಸಿಸು ನಿದ್ರಿಸಿದೆ!'
'ಅಮ್ಮನ ಕಣ್ಣಿನ ಕಪ್ಪಿನಲಿ
ತಮ್ಮನ ಚಿತ್ರವು ಮುದ್ರಿಸಿದೆ!'
'ಮುಗಿಲಾಡುತಿದೆ!'
'ಮುಗಿಲೋಡುತಿದೆ!'

ನಾದವಿರದ ಬದುಕು

ಕೆ.ಎಸ್. ನಿಸಾರ್ ಅಹ್ಮದ್

ನಾದವಿರದ ಬದುಕೇ, ಉನ್ಮಾದ ತೋರಬೇಡ;
ಈ ನೆಲದ ಜಲದ ಸವಿದು, ರವಿ ಕರುಣೆ ಮರೆಯಬೇ

ಹಸುವಿರದ ಮನೆಕನಸಲ್ಲಿ ಬಲಿಯಾಗದಿರಲಿ ಬೆಳಗು
ಕಾಡುಬಾಳ್ವೆ ಸಂಜೆಸನ್ನಿ ಮರೆಯದಿರಲಿ ಕೆರೆಯ ನೆರಳು

ಕಣ್ಣೆ ಎಷ್ಟು ಇಷ್ಟವೇನು? ಕನವರಿಕೆ ಬಾಳ್ವೆ, ಬಾಳ್ವೆ
ಸುಳ್ಳೆ ಬಳ್ಳಿ ಹಿಂಗರಿಸದ ಕಥೆ ಮುಗಿಲಸೊಂಪು ಮಾಲೆ!

ಬಾವಯಸ್ಸುಗಳಲಿ ಲೋಕ ತಾನಲ್ಲ ಬರಿಯ ಮುಗ್ಧ;
ಕೆರೆ ನೆಡುಗಿನಲ್ಲಿ ಸುಖ ತೋರುತಾನ ಬೇಕು ಕಣ್ಣು.

ಕಾಣಿಕೆಯನ್ನು ಬೀಜ ಮಾಗಿ ಮರುತ್ತು ತುಳಿಯುತಿರಲಿ
ಹೊಸ ನಲವ ನೆಲೆಗೆ ತಾನು ನಿಲುವಂತೆ ನಡೆಯುತಿರಲಿ

ರಾಧೆ ನನ್ನ ಕೆನ್ನೆಗೆ.

'ಪ್ರೇಮ ಕಾಶ್ಮೀರ'

ಕು.ವೆ.

ಹೊಂಬಿಸಿಲೊಳೆಂತು ಗರುಕೆ ಮೇಲೆ
ಚಿಮ್ಮಿ ಹುಲ್ಲೆ ಮುಂದಿಂತು ಪ್ರೋಲೆ
ನನ್ನನೊಪ್ಪಿ ರಾಧೆಯಪ್ಪಿ
ಚುಂಬಿಸಿದಳು ಕೆನ್ನೆಗೆ!

ಎಲ್ಲ ಬರೆದುಕೊಳುವ ವಿಧಿ
(ನಲ್ಲೆ ಗಾಜ್ಞೆ ಪುಣ್ಯನಿಧಿ!)
ನಿನಗೆ ನನ್ನದೊಂದು ಮೊರೆ:
ಮುತ್ತು ಕೊಟ್ಟ ದಿನವ ಬರೆ,
'ರಾಧೆ-ನನ್ನ-ಕೆ-ನ್ನೆ-ಗೆ'.

'ಇವನು ಕೋವಿ, ಇವನು ಪಾಪಿ'
ಸುಳ್ಳನೆ ಬರೆ, ನಿನಗೆ ಮುಕ್ತಿ!
'ಇವಗೆ ಮೋಹ, ಭ್ರಾಂತಿ, ಭ್ರಮೆ!
ಹ್ಞಾ, ಆಗಲಿ! ಅದೂ ಕ್ಷಮೆ!
ಆದರೆನ್ನದೊಂದೆ ಮೊರೆ:
ಮುತ್ತು ಕೊಟ್ಟ ದಿನವ ಬರೆ,
ರಾಧೆ ನನ್ನ ಕೆನ್ನೆಗೆ!

ಆತ್ಮ ನಿವೇದನ.

[illegible] ಕುವೆಂಪು.

'ಬೃಂದಾವನಕೆ ಹಾಲನು ಮಾರಲು
ಹೋಗುವ ಬಾರೇ ಬೇಗ, ಸಖಿ!'
'ಬೃಂದಾವನದಿ ಹಾಲನು ಕೊಳ್ಳುವ-
ರಾರಿಹರೇ ಹೇಳಿಂದುಮುಖಿ?'

'ಗೋವನು ಕಾಯುವ ಗೋವಿಂದನಿಹನೇ
ಹಾಲನು ಕೊಳ್ಳುವ, ಕೇಳ್ ಸಖಿ!
ಚಿನ್ನವ ಕೊಡನೇ, ರನ್ನವ ಕೊಡನೇ,
ತನ್ನನೆ ಕೊಡುವನು ಬಾರೆ, ಸಖಿ!'

ಕಣ್ಣನು ನೋಡುತ ಪೀತಾಂಬರವನು,
ಬಣ್ಣದ ಬಳೆಗಳ ಧರಿಸು, ಸಖಿ;
ಚೆನ್ನನ ಮೋಹಿಸುವೆವೆಂದು ನಾವು
ಸಿಂಗರಿಸಲಿ, ಹೇ ನಳಿನಮುಖಿ!
ಘಲ್ಘಲ್ಲೆನ್ನಲಿ ನೂಪುರ, ಗೋಪಿ,
ಕುಣಿಯೊಳು ಚೆಂದನ ರಂಜಿಸಲಿ!
ತೊಂಡೆಯ ಕಣ್ಣನು ತುಟಿಗಳ್ ನಗಲಿ.
ನವವನ [illegible] ಕಲ [illegible]!'

'ಯಮುನಾ ತೀರ ಹೊಳ್ಳಲೆಯುವ ಬಾರೇ
'ಹಾಲು ಬೇಕೆ ಹಾಲೆ' ಎನು ಸಖಿ,
ಹಾಲನು ಮಾರುವ ನೆವದಿಂದ ಹರಿಯ
ನೋಡಲಿಸಿ ಕರೆಯುವ ಬಾರೆ, ಸಖಿ!

ಹಾಲ ನಿವೇದಿಸಿ ಆತ್ಮವನರ್ಪಿಸಿ
ಮುಕ್ತಿಯ ಹೊಂದುವ, ಸೌಮ್ಯಮುಖಿ!
ಹಾಲನು ಮಾರಿ ಹರಿಯನು ಕೊಳ್ಳುವ
ನಾವೇ ಧನ್ಯರು, ಕಮಲಮುಖಿ!

ನಮ್ಮ ಲಾಭವ ಮೀರುವ ಲಾಭವು
ಬೇರಿನ್ನಿಹುದೇ, ಇಂದುಮುಖಿ?
ಬೃಂದಾವನಕೇ ಹಾಲನು ಮಾರಲು
ಹೋಗುವ ಬಾರೇ ಬೇಗ, ಸಖಿ!'

ಜಿ. ಎಸ್. ಶಿ.

ನನ್ನ ಹೃದಯವು ಮಿಡಿಯಿತು ಹಾಡು ನನ್ನ ನಿನ್ನ ಮೋಹದ
ಸುರಿಸು ಎಂದೆ ಸಿಡಿಯುವರಿತು ತಕ್ಕ ಭಾವ ರಾಗದೆ।

ತಂತಿ ತಂತಿ ಮಿಡಿತದಲ್ಲಿ
ಮಿಡಿತವಿರಲು ಬೆರಳಿಗೆ
ಗತ್ತು ಗತ್ತಿನಲ್ಲಿ ತಾಳ-
ವಿರಲು ನಾದಲಹರಿಗೆ.

ಎನಗೆ ಗೊತ್ತು ಎನಗೆ ಹೃತ್ತು
ತಾಳ ಎನಗೆ ಮುಕ್ತಿಗೆ.

[illegible]

ತಂತು ಮುಕ್ತಿಗೆ.

ತಂತಿ ತಂತಿ ಮಿಡಿತದಲ್ಲಿ ಮಿಡಿತವಿರಲು ಬೆರಳಿಗೆ
ಗತ್ತು ಗತ್ತಿನಲ್ಲಿ ತಾಳವಿರಲು ನಾದಲಹರಿಗೆ
ನಾದಲಹರಿಯಲ್ಲಿ ಮಿಕ್ಕ ವಾಗ್ದೇವಿ ಸೊಗಸು
ಸುಳಿ ಸುಳಿಯ ತಾಳಗಳ ಬೆಳಕು ತೂಗಿದ ಸ್ವಾಗತ॥
ನನ್ನ ಜೀವಮಾನದಲ್ಲಿ ತುಂಬಿ ಬಂದ ಹಾಡಿಗೆ
ನನ್ನ ತಂತಿ ಮೊಳಗಿದಲ್ಲಿ ಬೆಳಗು ಬಂದ ಬೆಸುಗೆ
ಎನಿಸು ಮಿಡಿತವರಿತು ಹಾಡು ನನ್ನ ಹಾಡ ಸೊಗಸಿಗೆ
ಸ್ವಾತಿ ಸ್ವರವ ಬೆರಸಿ ಎರಡು ಬಿಸಿಲ ಬಿಂದು ರಾಗದೆ॥

—•—

ವೀಣಾಗಾನ.

ಪ್ರೇಮಕಾಶ್ಮೀರ | ಕು. ವೆಂ.

ನಾನೆ ವೀಣೆ, ನೀನೆ ತಂತಿ
ಅವನೆ ವೈಣಿಕ;
ಮಿಡಿದನೆನಲು ರಸದ ಹೊನಲು
ಬಿಂದು ಬಿಂದು ಸೇರಿ ಸಿಂಧು
ನಾದ ಕೌತುಕ.

ಭುವನವೆಲ್ಲ ಸುಳಿವ ಸೊಲ್ಲ
ಕುಣಿವ ಗಾನ:
ನನ್ನ ನಿನ್ನ ಹೃದಯಮಾನ-
ಕಲ್ಲಿ ಜೀವ ಸೊಗದ ಸ್ನಾನ;
ಅಮೃತ ಪಾನ.

ತಂತಿಯುಂಚಿಕರದ ವಿರಂಚಿ
ರಸ ಪ್ರಳಯನೆ
ನನ್ನ ನಿನ್ನ ಜೀವಮಾನ
ತಾನ ತಾನ ತನನ ತಾನ
ಪ್ರಾಣ ಪುಳಕನೆ.

ಎಂತು ನಿನ್ನನು ಗೆಲುವೆ?

'ಪ್ರೇಮ ಕಾಶ್ಮೀರ' ಕುವೆಂಪು

ಕೆಂಪು ಗುಲಾಬಿಯಂತು ಚೆಂದುಟಿ ಚೆಲುವೆ,
ಎಂತು ನಿನ್ನನು, ಹೇಳು, ಗೆಲುವೆ?

ಸುಗ್ಗಿಯ ಹೊಸ ಸಿರಿ ಹೂಗಳ ಕೊಯ್ದು
ತರಲೇನೊಂದಿನಿ ಮಾಲೆಯ ನೆಯ್ದು?
ಕಾಜಾಣಾವ ಕೋಗಿಲೆಗಳ ಬೇಡಿ
ಕಲಿತಿಂಚರದಿಂ, ನಿನ್ನನೆ ನೋಡಿ,
ತುಟಿಯಿಂ ಸೋರುತಲಿರೆ ಸವಿ ಜೇನು
ಮುದ್ದಿನ ಹೆಸರನು ಕರೆಯಲೆ ಏನು?
ಸೊಬಗಿನ ಕದನದಿ ಮದನನ ಕೊಂದು,
ಸುರಲೋಕದ ವರಗಂಗೆಂತು ಮಿಂದು,
ನಂದನದಮೃತದ ಫಲವದ ತಿಂದು,
ನಿನ್ನೆಡೆ ನಿಂತರೆ 'ರತಿ, ಬಾ!' ಎಂದು?
ದಾನವೊ ಮಾನವೊ ಪ್ರಾಣವೊ ಏನು?
ಯಾವುದರಿಂದೆನಗೊಲಿಯುವೆ ನೀನು?

ಕೆಂಪು ಗುಲಾಬಿಯಂತು ಚೆಂದುಟಿ ಚೆಲುವೆ
ಎಂತು ನಿನ್ನನು, ಹೇಳು, ಗೆಲುವೆ?

ಮುಳುಗಿದರೇನ್ ಸಾವೆ?

ಶ್ರೀಮುಕ್ತಾಕ್ಷೀಗೆ

ಕುವೆಂಪು.

ಬೆಳ್ದಿಂಗಳು ಹಾಲ್ ಚೆಲ್ಲಿದ
ಹುಣ್ಣಿಮೆಯಿರುಳಲ್ಲಿ
ಬನದಂಚಿನ ಹೊಳೆ ತುಂಗೆಯ
ಸಕ್ಕರೆ ಮರಳಲ್ಲಿ
ಓ ಹೋಮರ್‌ನ ನಾವಿಕರು
ಸಿಂಗಾರದಿ ಕೂಡಿ
ನಲಿದಾಡುವ ಬಾ ನಲ್ಲಳೆ,
ರಸದೋಕುಳಿಯಾಡಿ.

ಮೇಗಡೆ ಬಾನ್, ಕೆಳಗಡೆ ಕಾನ್,
ಜೊನ್ನದ ಜೇನ್ ನಡುವೆ;
ನಿನ್ನೊಳು ನಾನ್, ನನ್ನೊಳು ನೀನ್,
ನಮಗಿನ್ನೇನ್ ಗೊಡವೆ?
ಹೊನ್ನೊಲುಮೆಯು ಹೊಂಬೊನಲಲಿ
ತೇಲುವ ಬಾಳ್ ನಾವೆ
ಆಲಿಂಗನದಾವರ್ತದಿ
ಮುಳುಗಿದರೇನ್ ಸಾವೆ?

ಯಾವ ಜನ್ಮದ ಮೈತ್ರಿ

'ಕೃತ್ತಿಕೆ' ಕುವೆಂಪು

ಯಾವ ಜನ್ಮದ ಮೈತ್ರಿ, ಈ ಜನ್ಮದಲಿ ಬಂದು
ನಮ್ಮಿಬ್ಬರನು ಮತ್ತೆ ಬಂಧಿಸಿಹುದೋ ಕಾಣೆ!
ಎಲ್ಲಿದ್ದರೇನಂತೆ, ನಿನ್ನನೊಲಿಯುವೆ ನಾನೆ.
ಗುರುದೇವನಾಣೆ, ಓ ನನ್ನ ನಚ್ಚಿನ ಬಂಧು!
ಅನ್ಯಜೀವನವೊಂದು ಪಾರಮಾರ್ಥದ ಸಿಂಧು:
ಮೇಲೆ ತೆರೆ ನೊರೆಯೆದ್ದು ಹೋಗಿ ಬರುತಿರೆ ಕೇಳ,
ಅಂತರಂತರಾಳದಲಿ ಗುಪ್ತಗಾಂಭೀರ್ಯವಿದೆ.
ಹೃದಯಗಳು ನಿಲ್ಲುತಿವೆ ಪ್ರೇಮತೀರ್ಥದಲಿ ಮಿಂದು!
ಅಂತರ್ಧೃತಿಗಳು ಸ್ನೇಹಕೆ ತಿರುಳು;
ವ್ಯರ್ಥ ಹಂಬಲಿಸಲೇಕೆ ಕಾಲಹರಣವದೇಕೆ?
ಕುರುಡನಾಗದೆ ಜಾರಿಯುರ್ಧ ತಿಳಿಯದೆ ಬೇಕೆ!
ಕಾಡಿ ನಾಗರಿಕರಾದರು! ಬರುವುದೆಲ್ಲ ಬರಲಿ!
ಕಾದಿರುವೆ, ಮುದು ಬಂಧು, ಜೀವನ ಸಮುದ್ರದೊಳಗಾವು
ಒಂದಾಗಿ ಮುಳುಗುವ ಸಂಯಮದ; ಬಂದಿರಲಿ ಸಾವು!

ಅ. ಪಿ.

ನೇರ ನೇರ ನೇರ ನಿನ್ನ ಅರಸಿ ಬಂದೆ ಹೇ ವಿಭೋ
ಬೇಗ ನಿನ್ನ ಬಳಿಗೆ ಬರುವ ತವಕದಿಂದಲಿ.

ದೂರ ದೂರ ದೂರದಿಂದ ಸಾಗಿ ಬಂದೆ ಹೇ ವಿಭೋ
ದಾರಿ ಎಡರ ದಾಟಿ ಬಂದೆ ನಿನ್ನ ಸೇರಲು
ದಾರಿ ದಾರಿ ದಾರಿ ಇನಿತು ಸವೆಯುದಾಯ್ತು ಹೇ ಪ್ರಭೋ
ದಾರಿ ಕಂಡಿತೆಷ್ಟು ದೂರ ದೂರ ನಡೆದರೂ...

ತೀರ ತೀರ ತೀರ ಬಳಲಿ ಕಡೆಗೆ ಬಂದೆನೈ ವಿಭೋ
ದಾರಿ ಕೊನೆಯ ಕಂಡಿತಿಲ್ಲ ನಿನ್ನ ಪಾದದಿ
ಹಾರಿ ಹಾರಿ ಹಾರಿ ಹಗುರ ಬಾರದಾದೆನೈ ಪ್ರಭೋ
ಘಾಸಿಪಟ್ಟೆನೆಂದು ಪೇಳ್ವ ಲಜ್ಜೆ ತಾಳ್ದೆನೈ.

ಪೂರ ಪೂರ ಪೂರ ನಿನ್ನ ನಂಬಿ ಬಂದೆ ಹೇ ವಿಭೋ
ನಿನ್ನ ಕೃಪೆಯದೊಂದು ಮಾತ್ರ ಕಾಯುತೆನ್ನನು
ಕಾವ ಕಾವ ಕಾವರಾರು ಬೇರೆಯಿಲ್ಲವೈ ಪ್ರಭೋ
ಕಾವ ತಂದ ಭಕ್ತಿ ಎನಗೆ ಒಂದೆ ಆಸರೆ.

ನಲವು.

ಕೆ.ಎಸ್. ನಿಸಾರ್

ನನ್ನ ನಲವಿನ ಬೆಳ್ಳಿ ಪುಟ್ಟದುಂಬಿ ನಲಿವಾಗ
ಲೋಕವೇ, ಹಾರಾಡಿರು ಹೂಗಿಡಂಗಳಲು ಹೂವ ;
ಬಾಳಿನ ಕಷ್ಟಗಳ ಬಲು ಹೊರೆಯ ತುಂಬಾಗಲಿ
ಬಿಗಿದೊಂದೆ ಕನಸಿಸುವೆ, ಬೆಳಗದಿರು ನೋವ.

ಸುವಿಶಾಲದ ಕ್ಷಿತಿಗೆ, ಬಿಂದು ಮೆಲ್ಲನೆ ಬಳಿಗೆ
ಪಲ್ಲವಿಸುತಿದೆ ಎಂದೆಂದು, ಒಕ್ಕೈತ್ತದಂತೆ ;
ಬಿಂದು ನಾ ಪುಟ್ಟ ಮರೆತು, ಬೆಳಗುವೆ ಸೊಗ ಬೆರೆತ
ಆಸೆಗಳ ಬಿಡುವುದಿರು ಚಿಕ್ಕುಂಡುಂತೆ.

ಆಗಸಕೆ ಎಸೆದಿರುವ ಕಲ್ಲನಂತೇರುವೆನು
ಗಾಳಿಯಲಿ ತೇಲುವೆನು - ಗಂಧದಂತೆ ;
ಮತ್ತೆ ಬೀಳುವೆನಿಲ್ಲ, ಚಿಂತೆಗಳ ಕೆಸರಲ್ಲಿ —
ಬಿಟ್ಟುಬಿಡು ಈಗೆನ್ನ ಮುಕ್ತನಂತೆ.

ಹೃದಯ ಸಮುದ್ರ

ಹೃದಯ ಸಮುದ್ರ ಬೇಂದ್ರೆ

ಬಂಗಾರ ನೀರ ಕಡಲಾಚೆಗೀಚೆಗಿದೆ ನೀಲ ನೀಲ ತೀರಾ
ಮಿಂಚು ಬೆಳಗ ತೆರೆತೆರೆಗಳಾಗಿ ಒಲೆಯುತ್ತಿರುವುದು ಪ್ರತ್ಯಕ್ಷ ಪೂರಾ.
ಅದು ನಮ್ಮ ಊರು, ಇದು ನಿಮ್ಮ ಊರು, ತಂತಮ್ಮ ಊರು ಧೀರಾ
ಅದರೊಳಗೆ ನಾವು, ನಮ್ಮೊಳಗೆ ತಾವು, ಅದು ಇಲ್ಲವಲ್ಲ ದೂರಾ.

ಕರೆ ಬಂದಿತಲ್ಲ, ತೆರೆ ಬಂದಿತಲ್ಲ, ನೆರೆ ಬಂದಿತಲ್ಲ ಒಳಗೆ.
ಹಿಂದಿತ್ತ ಭಾವ, ಮುಂದಿತ್ತ ಜೀವ ಅದರೊಳಗೆ ಬೆಳಗ ಬೆಳಗೆ.
ಇಡಿ ಸಮಯವಲ್ಲ, ಇದೆ ಸಮಯ ತಮ್ಮ ನನ್ನ ನಿಮ್ಮ ಚಿತ್ತಗಳಿಗೆ.
ಅಂಬಿಗನು ಬಂದ ನಂಬಿಗನು ಬಂದ ಬಂಧುರ ದಿವ್ಯಗಳಿಗೆ.

ಇದು ಉಪ್ಪುನೀರ ಕಡಲಲ್ಲ, ನಮ್ಮ ಒಡಲಲ್ಲು ಇದರ ನೆಲೆಯು
ಕಂಡವರಿಗಲ್ಲ, ಕಾಣದವರಿಗಲ್ಲ, ತಿಳಿದವರ ಇದರ ಬೆಲೆಯು.
ಸಿಕ್ಕಲ್ಲಿ ಇಲ್ಲ, ಸಿಕ್ಕದಲ್ಲೆ ಮಾತ್ರ ಒಡೆಯುತ್ತಿರುವುದು ಇದರ ಸೆಲೆಯು
ಕಣ್ಣು ಕಳ್ಳದಾಗ ತನ್ನ ಹೊರಳ್ಳಾದಾಗ ಹೊಳೆಯುತ್ತಿರುವುದು ಇದರ ಕಳೆಯು.

ಬಂದವರ ಬಳಿಗೆ ಬಂದ್ಯಾಕ ಮತ್ತ ನಿಂದವರ ನೆರೆಗ
ಬಂದ್ಯಾ ಹೋ ಬಂದ್ಯಾಕ.
ನಮ್ಮನುಮ್ಮ ಬಂದ ಹೊಸ ಧ್ವಜಗಳಿಗೆ ಹೊರಟಾಗ ಬಿಟ್ಟ
ಹೊಂಟ್ಯಾ ಹೋ ಹೊಂಟ್ಯಾಕ.

ಮೊರಯೂಕಿನ್ನರಿ.

[illegible] [illegible]

ಮರುಳ್ಳು ಮೂಡಾಕ ಹೋಗಿ ಮರುಳ್ಳಸಿದ್ಧನ ನಾರಿ
ಮರುಳ್ಯಾಗ ಸಾಗ್ಯಳ ಜಂಗಮಯಂತ್ಯಗ
ಕಿನ್ನರಿ ಆಗ್ಯಳ ಕೈಯಾಗ
ಸುಡಿದಾಳ ಬಂದ್ಯಾಂಗ ಮೈಯಾಗ ||

ಅಂತಾಪರಾತ ಬಂದು ಸಿಂಗಾರಹೊಳ್ಳಿ ದಾಂಗ
ದಾರಿಲೆ ಕಿವಿಗಳ್ಳ ಕಡಿದ್ಯೇನ
ನಾರಿ ತಪ್ಪಿಸಿಕೊಂಡ ಗುಂಡಿಂದು ಹೆಳ್ಳಿದಾಂಗ
ಗುಡುಗುಡು ಗೋಗುಳ್ಳಿ ನುಡಿದ್ಯೇನ
ತನ್ನ ಜೆಂಯನ ಕೂಡ ಬತ್ತಿನ್ನಾಟ ನಡಿಸಿದ
ಹುಸ್ಸಿ ಹುಸಿಗುಡುವಾಟ ಆಡಿದ್ಯೇನ
ಮುಬ್ಬಿದರ ಮುರಕುತ ಮಂಯುಕ್ತ ಕಲಿತಿಲ್ಲ
ಸುಳ್ಳನ ಸಿಡಿಮಿಡಿ ಸಿಡಿದ್ಯೇನ.

ಎದೆಗೊತ್ತ ಅಡಿದರು ಮುತ್ತಿನ ಮುತ್ತಿನ
ಮುಳ್ಳುಮುಳ್ಳು ಸುಮ್ಮನೆ ಅತ್ತೇನ
ಕೈಯಂಮಾಡಿಸಿದಂತೆ ಮೈ ಕಮ್ಮ ನಡುಗುವಿ
ಇದು ಹೊಸ ಗಮುಕದ ಗತ್ತೇನ
ಮೊದಲ ಭೆಟ್ಟಿಗೆ ಬಂದ ಮುಟ್ಟಿನ್ನು ಮಾಡಿದಾಂಗ
ಮುಂಕೊಟ್ಟು ತದವತಿಸಿ ತಡದೇನ.

ತಂತ್ಯಲ್ಲ; ಜೀವದ ತಂತು ನೀ ಅಂತ್ಯದ
ಶ್ರುತಿ ಹಿಡಿದು ಜತಿ ಹಿಡಿದು ನಡದೇನ.
ಕಂಕಣ ಕಾಲುಂಗರ ರಕ್ತ ಮೆಲ್ಲುಸಿರ ನಂದಕ
ಕುಣಿತಾನ ನಡೆಧಾಂಗ ಕಾಲ್ಯಾಗ
ಕರಗಿ ಬಾ, ಅರಗಿ ಬಾ, ಎರಗಿ ಬಾ, ಸ್ವಾಗಿ
ಸಕ್ಕರಿ ಬೆರೆಧಾಂಗ ಹಾಲ್ಯಾಗ
ನಂಬಿಸಿ ರಂಬಿಸಿ ಚುಂಬಿಸಿ ಎದೆಗೊಂಬಿ
ಬಿಂಬೀಸಿ ಎದೆಯೊಳಗ ಅಂಧ್ಹಾಂಗ
ಝಣಝಣ ಮಿಡಿದಾವ ತಂತಿ; ಗೆಜ್ಜಿ ತ್ರಿಭುವನ ಕಬ್ಬ
ಮಾಯಿಯಂತೆ ಮೈಯೊಳಗ ಬಂಧ್ಹಾಂಗ.
ಅಗಲದ ಇನಿಯನ ಪಕ್ಕ್ಯಾಗೆ ನೋಡುತ
ಬಸಿರ ದ್ಹಾ ಕುಲುಕುಲು ನಕ್ಕ್ಹಾಂಗ
ನಲ್ಲ ಮುಟ್ಟಿದ ನಲ್ಲ, ನಲ್ಲೆಯ ಮೈಯೆಲ್ಲ
ಹಿಗ್ಗಿನ ಮುಳ್ಳಿಗೆ ಸಿಕ್ಕ್ಹಾಂಗ
ಝುಂಝುಮು ರುಂಝುಮು ಗುಂಯಗುಣು ಘುಂಘುಮು
ನಾದದ ನದಿಯೊಂದು ನಡೆದ್ಹಾಂಗ
ಗಲ್ಲಗಲ್ಲಕೆ ಮುಟ್ಟಿ ನಲ್ಲನಲ್ಲೆಯರಿರುಳು
ಗುಜುಗುಜು ಗುಲುಗುಲು ನುಡಿದ್ಹಾಂಗ.

ರೆಕ್ಕೊಂದು ಜೀವನ್ನು ಮುದ್ದಾಡಿ ಕಟ್ಟ್ಯಾದಿ
ಹೊಂಬೇನ ಹೂವಿನ ತುಂಬಿದ್ದಾನಂಗ
ಮುಂದಾಗಿ ಮುಂದಾದ ಮನದ [illegible]
ಮೊಗ್ಗಿಗೆ [illegible] ಬಿಡಿಸಿದ್ದಾನಂಗ
ಸುಂಟರಗಾಳಿ [illegible]
ಗಾಳಿ-ಹುಳ್ಳಿಗೆ ಪ್ರೀತಿ ಕಲಿಸಿದ್ದಾನಂಗ
ಸಸ್ಯಸಂಕುಲ ನಾಟಕದ [illegible]
ಹಾಡಿನ [illegible] ಬರೆದಿದ್ದಾನಂಗ.
ಪ್ರತಿ [illegible] ಅನಂತನೆಂದು
ಅನಂತ [illegible] ನಿಂದಾನಂಗ
ನಾಡಿನ ನುಡಿನುಡಿ ತಾನೇನ ತಾನೆ ತಾ
ತಾನಾಗಿ ತನನ್ನನ ಬಂದಾನಂಗ
[illegible]
[illegible] ನುಡಿದ್ದಾನಂಗ
[illegible]
[illegible] ಇಟ್ಟಿದ್ದಾನಂಗ.
ಪ್ರಕೃತಿ ಪುರುಷನ ಸೋತು ಪ್ರಾಣಿ [illegible]
ಅನುಭವದ [illegible] ಇದ್ದಾನಂಗ

ಜಾಣರ ಜಾತ್ರೆಲಿ ಕೃಷ್ಣಪ್ಪನ ಕಿನ್ನರಿ
ನೆರೆಮಂದಿಯೆಲ್ಲ ನೂಲ ಕೋದ್ಯಾಂಗ
ಜೀವದ ಸಖ ಹಾದಿ ತುಂತುರು ಮಳೆಯಾಗಿ
ತಂಪಿಲ್ಲದು ತುಂಬಿಲ್ಲ ಶಿಡಿದ್ಯಾಂಗ
ಮನುಷ್ಯ ಶರೀರದ ಪ್ರೀತಿ-ಕಿನ್ನರಿಯಾಗಿ ಶಿಕ್ಷ
ಮಾವಿನ ಮೈಗೆ ಪೈರು ಸುರಿದ್ಯಾಂಗ.

ತುಂಬಿ ಬಂದಿತ್ತು.

ಬೇಂದ್ರೆ

[illegible]

ತುನನ ತುನನ ತುನನ ತುನನ ತುನನ ತುನನ ತುನನ ತುನನ

ತುಂಬಿ ಬಂದಿತ್ತು ತಂಗಿ

ತುಂಬಿ ಬಂದಿತ್ತು ||ಪ||

[illegible] ಇತ್ತು [illegible]

[illegible] ಇತ್ತು [illegible]

[illegible] ತಂಗಿ

[illegible] ತುಂಬಿ ಬಂದಿತ್ತು

[illegible] ||ತುನನ ತುನನ||

[illegible] [illegible]

[illegible] [illegible]

[illegible] ತಂಗಿ [illegible]

ತುಂಬಿ ಬಂದಿತ್ತು ||ತುನನ ತುನನ|| [illegible]

[illegible]

[illegible] ಇತ್ತು [illegible]

[illegible] ಇತ್ತು [illegible]

[illegible] ತುಂಬಿ ಬಂದಿತ್ತು [illegible]

[illegible] [illegible]

[illegible] ತಂಗಿ ತುಂಬಿ ಬಂದಿತು

ಒಕ್ಕಿತ್ತಿಂದು ಮಳೆಂದು ಸುಂಜೆ.

ಕುರುಡು ತ್ರಿಲತಿಂದು ಹಾಂಗ .
ಕುರುಡು ಒಕ್ಕಿತ್ತಿಂದು ಮಳೆಂದು
ಮುಗುಳು ನಗಿ ಸುತ್ತುರುಳಿಸಿ
ಸುರದ್ಯತ್ತ ಸುರದಾವ .
ಎತ್ತೇನೋ ಬಿತ್ತೇನೋ
ಮಿಂಚಿನ ಮುತ್ತೇನೋ
ಕಣ್ಣುಬಿಟ್ಟು ತೆರೆವ್ರುದಾಗ
ಹರದ್ಯಾರಿಗೆ ಹರದಾವ .
ಇಳಿದು ಗುಡ್ಡದ ತಲೆಗೆ
ಮೋಡ ಮುಸುಕೆಳೆದಾಗ
ಬದಿಂದು ಗುಡ್ಡದ ಮ್ಯಾಲೆ
ಬಿಸಿಲು ಮೈ ಚಾಚ್ಯಾವ .
ಗಿಡಬಳ್ಳಿ ಎಲಿ ಎಲಿ
ತೊಯ್ದು ತೆಂಗಿನ ಗರಿ
ಬೆಳ್ಳಿ ಸುಳ್ಳಿ ಬರೆದಾಂಗ
ಮಿತಿಮ್ಯಾರಿ ಮಿಂಚ್ಯಾವ .
ಹನುಮಲಕ ಮುಗಿದ ಕರಣ
ಮುಂಡಲಕ ಬಿಟ್ಟುಕೊಂಡು

ಅಂಬಿಗಾ ಕುಂಕುಮ ತಂದು
ಮರದ್ಮಳಿಗೆ ಹಂಚ್ಯಾವ .
ಸಂಜೆ ಸೂರ್ಯನ ಹಗಲ
ಜರದ ಸುದ್ದೇದ ಸೋಗಿ
ನವಿಲನೊರಳಿನ ಮುಗಿಲ
ನೆರಗೆ ಬೀಸ್ಯಾವ .
ಕ್ಯಾಲದಂಚಿನ ಹಸಿರ ಬಯಲು
ಮುತ್ತಿನ ಸೋಸೆ ತಳೆದು
ಜುತಿಪದರ ಪಾದಕ್ಕಂತ
ಹದಕ ಹಾಸ್ಯಾವ .
ದಿನಗೂಲಿಗೆ ದುಡಿದು ದಣಿದು
ತಣಿದು ಹೊರಟವರ ದಾರಿ
ಎದುರುತ್ತಾರೆ ಒಳ್ಳೆಗೆ ಕಳಸ
ಇಟ್ಟ್ಯಾಂಗ ಮೆರೆದಾವ .
ಹದಕ್ಕ ಹದನಾಗಿ ಬಂದ
ಮಳೆಗೆ ನೆನೆನೆನೆದು ನೆನಸಿ
ಬರುವ ಹಾಡಿಯ ಚಿತ್ರ
ಅವರ ಚಿತ್ತ ಬಳೆದಾವ .

ಗದ್ದೆ ಗದ್ದೆಯ ಹಾದಿ
ಕೆನ್ನೀರಿನ ಹಸಿರ ಹಾಸಿ
ಇಳಿಯ ಬಿಸಿಲಿನ ಸಾಲುವೆ
ತೋಳ್ಗಳು ಎಸೆದ್ದಾನ.

ಬಂಗಾರದಲ್ಲಿಯ ಸೊಬಗು
ಸೊಗಸಿ, ಬೆಳಕಿಗೆ ಮುಗ್ಧ ;
ಸೋತ ಸಾರಂಗ ಕಣ್ಣು
ಮನಸು ಕೆಡ್ಡಾನ.

ಬಿಸಿಲ ಜೋಳದ ತೆನೆಯು
ಎರಡು ಬದಿಗೆ ಸೊಬಗು
ಹಿಂದಿನ ಮುಗಿಲಿನ ಮುಖಕ್ಕೆ
ಹಿಡಿದ ಎತ್ತಿದಾನ.

ಹಗಲು ಮಲ್ಲಿಗೆ ಕಳೆದು
ಇರುಳು ಎರಡಿನಂತೆ
ಬೆಳ್ಳಕ್ಕಿ ತೋರಣಗಳ್ಳಿ
ಬೆಳ್ವಲಕ್ಕೆ ನಡೆದಾನ.

ಬಂದಲು ಗುಡಿಸಲಿನ ಬೆಳ
ಹಾದು-ಗುಡಿಸಿ ಹಕ್ಕಿ
ತನ್ನ ಗೂಡಿಗೆ ಮರಳಿ
ಸೋಬಾನೆ ಹಾಡ್ಯಾವ.

ಮುಕ್ಕಣ್ಣ ಮಲಗ್ಯಾನ
ಬೆಳದಿಂಗಳಂತೆ ಹರಿಯಿತು
ತೇಲಿ ಬರುವಂತೆ ನಾಡು
ಕುಂದಾಗಿ ಹೇಳ್ಯಾವ.

ಹುಬ್ಬಳ್ಳಿಯಾಂವಾ.

[illegible] ಬೇಂದ್ರೆ

ಇನ್ನೂ ಯಾಕ ಬರಲಿಲ್ಲವ್ವಾ ಹುಬ್ಬಳ್ಳಿಯಾಂವಾ
ವಾರದಾಗ ಮೂರ ಸರತಿ ಬಂದು ಹೋದಾಂವಾ ||ಪಲ್ಲವಿ.

ಭಾರಿ ಜರದ ವಾರಿ ರುಮಾಲು ಸುತ್ತಿಕೊಂಡಾಂವಾ
ತುಂಬು ಮೀಸಿ ತಿರುವಿಕೋತ ಹುಬ್ಬು ಹಾರಿಸ್ಯಾಂವಾ
ಮಾತು ಮಾತಿಗೆ ನಕ್ಕು ನಗಿಸಿ ಆಟ ಆಡಿಸ್ಯಾಂವಾ
ಏನೋ ಅಂದರ ಏನೋ ಕಟ್ಟಿ ಹಾಡ ಹಾಡಾಂವಾ
ಇನ್ನೂ ಯಾಕ...

ತಾಳಿಮಣಿಗೆ ಬ್ಯಾಳಿಮಣಿ ಸರಗಿ ಬೇಕೇನಂದಾಂವಾ
ಬಂಗಾರ-ಹುಡಿಲೇ ಭಂಡಾರಾನ ಬೆಳ್ಳಿಬೇಕೇನಂದಾಂವಾ
ಕಸಬಾರ ಕಸ್ತೂರು ಬಸವೇಶ ಬಿಟ್ಟು ದಾಟಿ ಬಂದಾಂವಾ
ಜೋಗತೇರಿಗೆ ಮೂಗುತಿ ಅಂತ ನಕ್ಕು ನಗ ಅಂದಾಂವಾ
ಇನ್ನೂ ಯಾಕ...

ಇದು ಅಂದರ ಬರತೇನಂತ ಎದ್ದು ಹೊರಟಾಂವಾ
ಮಾಡಿ ತೈಲಗ ಹಾಕಿತೆಂದರ ಇದ್ದು ಬಿಟ್ಟಾಂವಾ
ಕಿಡಿಲಾರಿಲೆ ಹೊಕ್ಕು ತಗದು ಕಿಟಿ ಕಿಟಿ ಅನ್ನಾಂವಾ
ಬರೇ ಆಟ ಹೃ ಮಾಡಿದರ ಬಿಕ್ಕಿ ಬಿಟ್ಟಾಂವಾ
ಇನ್ನೂ ಯಾಕ...

ಬಿಸಾಡಾಕ ಹೋದಾಗ ಬಿಸಾಡಾಕ್ಷಾಂಗ ನೀ ಸೆಳಗಂಡಾರಂದೆ
ಬಿತ್ತಿದಂತಲ್ಲ ನೀ ಬಿಡಾದ ಮಾತಿನಂತೆ ಹಸ್ಯಕ್ಕೆ ಬಂದಾರದೆ
ಬೆಳದಿಂಗಳಾ ಮಾತಿನಾಗ ಮನಸೊಳಗೆ ಬಿಟ್ಟಿದ್ದಾನಾ
ಹೆಣ್ಣಿನಾಗಿನ ಹೊಂಬಾಳೆ ಬಾಂದ ಎದುರ್ಗೆ ನಿಲ್ಲದಾನಾ

ಇನ್ನೂ ಯಾಕೆ…

ಕೃಷ್ಣಾ ಯಮುನಾ ನದಿ ತೀರದಾಗ ಮುರಳಿ ಹಿಡಿದಾನಾ
ಕಂಡ ಹೆಣ್ಣಿನ್ ಜಡೆ ಎಳ್ದ ಮರೆಯಲ್ಲಿ ಕೆಣಕ್ಯಾನಾ
ಬಲ್ಲವಲ್ಲಕ ನೀರ್ ಬಿಟ್ಟು ಬಳುಕೀಸಿಕೊಂಡಾನಾ
ಎದುರ್ಗಿನ ನಿಂತ ಮಾತಿ ಇಟ್ಟ ಹೊಂದಾದಾನಾ

ಇನ್ನೂ ಯಾಕೆ…

ಅಯ್ಯೋ! ಹುಚ್ಚ! ದಾರಿ! ದಾರಿ! ನೋಡಲಿಲ್ಲೇ ಕೃಷ್ಣಾ?
ಬಂದೆ! ಹೊಂದೆ! ನಾನಂತಾದೆ! ಎಲ್ಲಾನ ನನ್ನಾಂದಾ?
ಹೆಣ್ಣಿನ ಕೃಷ್ಣನ ತೊಟ್ಟಿಲೊಂದಿದ್ದಾದಾ ಹಿಂತ ನನ್ನ ಜೀವಾ
ನಾವೇ ಬೀಳಲಿ ಕೃಷ್ಣಕೃಷ್ಣೆ ಬಿಟ್ಟ ಎಲ್ಲಾ ದ್ಯಾನಾ

ಇನ್ನೂ ಯಾಕೆ…

ಪ್ರಶ್ನೆಗೆ ಉತ್ತರ

ಮೈಸೂರುಮಲ್ಲಿಗೆ? ಕೆ.ಎಸ್.ನ.

ಒಂದಿರುಳು ಕನಸಿನಲಿ ನನ್ನವಳ ಕೇಳಿದೆನು
ಚೆಂದ ನಿನಗಾವುದೆಂದು —
ನಮ್ಮೂರು ಹೊನ್ನೂರೊ, ನಿಮ್ಮೂರು ನವಿಲೂರೊ
ಚೆಂದ ನಿನಗಾವುದೆಂದು.
ನಮ್ಮೂರು ಚೆಂದವೋ, ನಿಮ್ಮೂರು ಚೆಂದವೋ
ಎಂದೆನ್ನ ಕೇಳಲೇಕೆ?
ನಮ್ಮೂರ ಮುಂಚೆಯಲಿ ನಿಮ್ಮೂರ ಕನಸಿದನು
ವಿಸ್ತರಿಸಿ ಹೇಳಬೇಕೆ? —
ನಮ್ಮೂರು ಚೆಂದವೋ, ನಿಮ್ಮೂರು ಚೆಂದವೋ
ಎಂದೆನ್ನ ಕೇಳಲೇಕೆ? — ಎನ್ನರಸ,
ಸುಮ್ಮನಿರಿ ಎಂದಳಾಕೆ.

ತೌರೂರ ದಾರಿಯಲಿ ತೆಂಗುಗಳು ತಲೆಬಾಗಿ,
ಬಾಳೆಗಳು ತೋಳ ಬೀಸಿ;
ಮಲ್ಲಿಗೆಯ ಮೊಗ್ಗುಗಳು ಮುಳ್ಳುಬೇಲಿಯ ಮರೆಯ
ಬಳ್ಳಿಕುಡಿ ಕೆಂಪು ಸೂಸಿ;
ನಗುನಗುತ ನಮ್ಮೂರ ಹೆಣ್ಣುಗಳು ಬರುತಿರಲು
ನಿಮ್ಮೂರ ಸಂತೆಗಾಗಿ,

ನಮ್ಮೂರಿಗಿಂತಲೂ ಹೊನ್ನೂರೆ ಸುಖವೆಂದು
ತಿಳಿಸಿತು ಪ್ರೇಮ ಕೂಗಿ. —
ನಮ್ಮೂರು ಚೆಂದವೋ, ನಿಮ್ಮೂರು ಚೆಂದವೋ
ಎಂದೆನ್ನ ಕೇಳಬೇಕೆ? — ಎನ್ನರಸ,
ಸುಮ್ಮನಿರಿ ಎಂದಳಾಕೆ.

ನಿಮ್ಮೂರ ಬಂಡಿಯಿಂದಲಿ ನಮ್ಮೂರ ಬಿಟ್ಟಾಗ
ಓಡಿದುದು ದಾರಿ ಬೇಗ;
ಪುಟ್ಟ ಕಂದನ ಕೇಕೆ ತೊಟ್ಟಿಲನು ತುಂಬಿತ್ತು —
ನಿಮ್ಮೂರ ಸೇರಿದಾಗ.
ಊರಬಾಗಿಲಿಗೆ ಬಂದು, ನೀವು ನಮ್ಮನು ಕಂಡು
ಕುಶಲವನು ಕೇಳಿದಾಗ,
ತುಟಿಯಂಚಿನಲೇನೋ ನಿಂದು, ಕಣ್ಣಲೇನೋ ಬಂದು
ಕೆನ್ನೆ ಕೆಂಪಾದುದಾಗ.
ನಮ್ಮೂರು ಚೆಂದವೋ ನಿಮ್ಮೂರು ಚೆಂದವೋ
ಎಂದೆನ್ನ ಕೇಳಬೇಕೆ? — ಎನ್ನರಸ
ಸುಮ್ಮನಿರಿ ಎಂದಳಾಕೆ.

—

ನೀ ಬರುವ ದಾರಿಯಲಿ

ನೀ ಬರುವ ದಾರಿಯಲಿ
ಹಗಲು ತಂಪಾಗಿ
ಬೇಲಿಗಳ ಸಾಲಿನಲಿ
ಹಸಿರು ಕೆಂಪಾಗಿ
ಹಿಮದ ಮಣಿಯಿರುವ ತನಕ
ಎಳೆಬಿಸಿಲ ಮೂಡಿ ತನಕ
ಸಾಲುಮರಗಳ ಮೇಲೆ ಸೊಬಗ ಸುರಿದಿರಲಿ!
ನೀ ಬರುವ ದಾರಿಯಲಿ
ಹಕ್ಕಿಗಳು ಹಾಡಿ
ಬೆಳ್ದಿಂಗಳಿಂದಿನಲಿ
ತಾರೆಗಳು ಮೂಡಿ
ಕನಸು ಹಬ್ಬಲಿ ನಿನ್ನ
ಕಣ್ಣ ಬಳಿ, ಚಿನ್ನ,
ಹತ್ತಾರು ಗಳಿಗೆಯಲಿ ಹಾದಿ ದಾರಿಯಲಿ!
ನೀ ಬರುವ ದಾರಿಯಲಿ
ಬನದೆಲರು ಸುಳಿದು
ಸಂತಸದ ಇರುಳಿನಲಿ
ಆ ದುಗುಡನು ನುಡಿದು
ಮುಂದೆ ಕಾದಿಹ ನಂದು
ಹರುಷಗಳ ಕದ ತೆರೆದು
ಹಿಮಗಾನ್ವೊ ನಿಲುಗಡೆಯು ನನ್ನಿರುವ ದಾರಿಯಲಿ

ನಿನ್ನೊಲುಮೆ.

"ಇರುವಂತೆ" ಕೆ. ಎಸ್. ನ.

ನಿನ್ನೊಲುಮೆಯಿಂದಲೇ ಬಾಳು ಬೆಳಕಾಗಿರಲು
ಚಂದ್ರಮುಖಿ ನೀನೆನಲು ತಪ್ಪೇನೆ?
ನಿನ್ನ ಸೌಜನ್ಯವೇ ದಾರಿ ನೆರಳಾಗಿರಲು
ನಿತ್ಯಸುಖಿ ನೀನೆನಲು ಒಪ್ಪೇನೆ?

ನಿನ್ನ ನಗೆಮಲ್ಲಿಗೆಯ ಹುಣ್ಣಿಮೆಯ ಜಾತ್ರೆಯಲಿ
ಚೆಲ್ಲಿ ನಗುವ ಅಮೃತ ನೀನೇನೆ!
ನನ್ನ ಕನಸುಗಳಲ್ಲಿ ಕೈಗೊಳ್ಳುವ ಯಾತ್ರೆಯಲಿ
ಚಿಮ್ಮಿಸುವ ಧನ್ಯತೆಯು ನೀನೇನೆ!

ನಿನ್ನ ಕಿರುನಗೆಯಿಂದ, ನಗೆಯಿಂದ, ನುಡಿಯಿಂದ
ಚಿತ್ರದ ಮನೆ ನನ್ನ ಬದುಕೇನೆ!
ಚಂದ್ರನಲಿ ಚಿತ್ರಿಸಿದ ಚೆಲುವಿನೊಳಗುಡಿಯಿಂದ
ಗಂಗೆ ಬಂದಿಳಿದು ಇದ್ದ ಕಡೆಗೇನೆ!

ಶ್ರೀಕೃಷ್ಣನಂತೊಂದು ಮುಗಿಲು.

೨ ರು[illegible] ಜಿ.ಎಸ್.ಎಸ್.

ಶ್ರೀಕೃಷ್ಣನಂತೊಂದು ಮುಗಿಲು
ರಾಧೆಯಂತಿನ್ನೊಂದು ಮುಗಿಲು
ಹೊಳೆದಾರಿ ಕಾಯುವ ಮುಗಿಲು
ಜಲಧಾರಿ ಸೆರಗಿನ ಮುಗಿಲು.
ಬೆಣ್ಣೆಯ ಗಿರಿಯಂತೆ ಮುಗಿಲು ಅಲ್ಲಿ
ಬಳುಕುವ ಯಮುನೆಯ ಮುಗಿಲು
ಗೋಪಿಯರ ತಂಡದ ಮುಗಿಲು ಬಳ್ಳಿ
ಹರಿಗೋಲು ಕೃಷ್ಣನ ಕೊಳಲು.
ಬೆಳ್ಳಿಯ ಮನೆಯಂತೆ ಮುಗಿಲು ಅಲ್ಲಿ
ಹುಲ್ಲಿಂದು ಹಾಡಿನ ಕುಯಿಲು
ಹೆಣ್ಣಿಗೆ ಎತ್ತೊಂದು ಬಗಿಲು ನಿಲ್ಲಿ
ಕೆನ್ನೆಗೆ ಹೂಬಿನ ನೆಳಲು.
ಕಿರುತಾರೆ ಮುಡಿದೊಂದು ಮುಗಿಲು ತನ್ನ
ಚಿಕ್ಕೆಲುಬಿಗೆ ಬೆರಗಾದ ಮುಗಿಲು
ಕೊಳಲನು ತುಟಿಗಿಟ್ಟ ಮುಗಿಲು ನಿನ್ನ
ತುಟಿ ನನ್ನ ಕೊಳಲೆನುವ ಮುಗಿಲು.
ಬಾ ಬಾರೆ ಎನ್ನುವ ಮುಗಿಲು ಅಲ್ಲಿ
ಬರಲಾರೆನೆನ್ನುವ ಮುಗಿಲು

ಕೆನ್ನೆ ಕೆಂಪಾದೊಂದು ಮುಗಿಲು ಎಲ್ಲೊ
ಇನ್ನೊಂದು ಮುತ್ತಿನಂಥ ಮುಗಿಲು.
ಶ್ರೀಕೃಷ್ಣನಂತೊಂದು ಮುಗಿಲು
ರಾಧೆಯಂತಿನ್ನೊಂದು ಮುಗಿಲು
ಅಲ್ಲೊಂದು ಇಲ್ಲೊಂದು ಮುಗಿಲು
ಮುಗಿಲೆಲ್ಲ ಕೃಷ್ಣನ ಕೊಳಲು.

నగుమోము గలవాని నా మనోహరుని
జగమేలు శూరుని జానకీవరుని ।
దేవాదిదేవుని దివ్యసుందరుని
శ్రీవాసుదేవుని సీతారాఘవుని ।
నిర్మలాకారుని నిఖిలాఘహరుని
ధర్మాది మోక్షంబు దయచేయు ఘనుని ।
బోధతో పలుమారు పూజించి నేనా-
రాధింతు శ్రీ త్యాగరాజ సన్నుతుని ॥

ಕೆ ಎಸ್ ನ.

ಇವಳು ಯಾರು ಬಲ್ಲೆ ಏನು
ಇವಳ ಹೆಸರ ಹೇಳಲೇನು
ಇವಳ ದನಿಗೆ ತಿರುಗಲೇನು
ಇವಳು ಏತಕೋ ಬಂದು ನನ್ನ ಸೆಳೆದಳು.
ಅಡಿಯ ಮುಟ್ಟ ನೀಳ್ದ ಜಡೆ
ಮುಡಿಯ ತುಂಬ ಹೂವ್ವ ಹೊರೆ
ಇವಳು ಅಡಿಯನಿಟ್ಟ ಕಡೆ
ಹೆಜ್ಜೆ ಹೆಜ್ಜೆಗೆ ಒಂದು ಮೊಲ್ಲೆ ಮಲ್ಲಿಗೆ.
ಅಂಗಾಲಿನ ಸಂಜೆಗೆಂಪು
ಕಾಲಂದುಗೆ ಗೆಜ್ಜೆ ಇಂಪು
ಮೋಹದ ಮಲ್ಲಿಗೆಯ ಕಂಪು
ಕರೆದುದೆನ್ನನು ,..
ನಾನು ಹಿಡಿಯ ಹೋದೆನು.
ಬಂಗಾರದ ಬೆಳಕಿನೊಳಗೆ
ಮುಂಗಾರಿನ ಮಿಂಚು ಮರೆಗೆ
ಇಳೆಗಿಳಿದಿಹ ಮೋಡದೊಳಗೆ
ಇವಳು ಮರೆಯುತಿದ್ದಳು,
ನನ್ನ ಕರೆಯುತಿದ್ದಳು.

ನಿಲಲ ಸಲ್ಲ ಹಿಲ್ಲಿಂದು ಉಂಗುರ
ಭಾವಿ ಮೇಲೆ ಹಾವಿ ಸುಂಗುರ
ಮನ ನೆಲ್ಲೆದ ಸಲ್ಲ ಕೊಟ್ಟ ಸಲ್ಲ
ಕೆಕ್ಕ ಮೇಲೆ ಪ್ರೀತಿ ಮುಂಗುರ.
ಹಿಂದು ಗಂಡು ಹಾಲ ಸುಂಗುರ
ಹಿದರ ದಾನಿ ಮಿಟ್ಟು ಸುಂದರ
ತಗುಪ್ಪ ಲತೆಂಬುಗ ಸೇಲದ ಕತ್ತಿಂದು
ತಸುವ ಬಳ್ಳಿ ತೇಳ್ಳಿ ಸುಂಗುರ
ಮುಟ್ಟಿ ಸಲ್ಲ ಕಂಡ ಉಂಗುರ
ಹೊಣ್ಣ ನಾಟಿ ಗಿಲದ ಮುಂಗುರ
ಬೆಳ್ಳಿ ಸಿಂದ ಬಿಲಿಬಿ ಮುಂಗುರ
ಹಣ್ಣ ನೆಲ್ಲದ ಹುರುಳ್ಳಿ ಸುಂಗುರ
ಹಿನೆ ನಿನ್ನ ಕೈಯ ಹಿಂದಿಕ್ಕರ
ನಿನ್ನ ಹೃದಯ ಸ್ಕಂದು ಬೆಂಗುರ
ನಾನು ಸುಖಿಂದ ಕಮಿಂದಿಳ್ಳುಟ್ಟರ
ನಗೆಂದು ಮೇಲೆ ಬೆವರಿ ಸುಂಗುರ,

ಉಂಗುರ.

ಕೆ.ಎಸ್.ನ.

ಗಾಳಿ ಆಡಿದರೆ ಬಿಸಿಲೂ ಆಡಿ
ಹೂವಿನುಂಗುರ;
ಮುಗಿಲ ಮೂಡಿದರೆ ಕೆರೆಯು ಆಡಿ
ನೀರಿನುಂಗುರ;
ತಾರೆ ಮುಡಿದರೆ ಬಾನಿನ ಬಾನೆ
ಬೆಳಕಿನುಂಗುರ;
ಕಣ್ಣು ತುಂಬು ಬರೆ ನಿದ್ದೆಯು ಬಳಿಯಲಿ
ಕನಸಿನುಂಗುರ;
ತುಂಬಿದ ಬಿಸಿಲಿನ ತಾಂಬೂಲದ ತುಟಿ
ಚೆಂದುಟಿಯುಂಗುರ;
ಬಾಳ್ವ ತಾರಾದ ಕಲ್ಲ ಕಣ್ಣಿನಲಿ
ಮುತ್ತಿನುಂಗುರ;
ಬಿಲ್ಲಿನ ಬೆಳ್ಳಿನ ಸುಳ್ಳಿನ ಬಂಡುಕೆಗೆ
ಎಲ್ಲೋ ಸರಸ
ಕನಸು ಸೂಡಿರುವ ಕೊರಳಿನ ಬೆರಳಿಗೆ
ಆಸೆಯುಂಗುರ.
ಏನೆಂದು ಕಟ್ಟಲಿಂದು ಹೊಂದಿಸಲಿ, ಕೆಮಿಲಾ.
ವಜ್ರದುಂಗುರ;
ನಿನ್ನ ಕೆನ್ನೆಯಲಿ ಮೆಲ್ಲಗೆ ನನ್ನ
ಪ್ರೇಮದುಂಗುರ.

ಮದುವೆ

ನಿಸಾರ್

ಇಂದು ಗೆಳೆಯನ ಮದುವೆ;
ಹೊಸ ನೀರಿಗಿಳಿಯುತ್ತಿರುವ ಅವನ ನಾವೆ.
ಉತ್ತರಾಯಣಕೆ ಇಂದು ತೀರಿ ನೆರಿಗೆಯ ಗಂಟು;
ಹಗುರಾಗಿ ಹಬ್ಬುತ್ತಿರುವ ಹೊಸತು ನಂಟು.
ಕಣ್ಣು ಆಸೆಯ ಬೆಳಕೆ, ಬಿಳುಪೆ ಕಿಲಕಿಲ ನಗೆ
ಹಸೆಸೇರಲಿಚ್ಛುವಗೆ ಗಿಲುಪ್ಪ ಗಂಟು.
ಗರತಿಯರ ಆರ್ತ್ಯಕೆ, ಗುರುಜನರ ಹಾರೈಕೆ
ಬೆಳ್ದಿಂಗಳಿನ ನೆರಳು ಅದಕೆ ಬಿಸಿಲು.
ಹೆಣ್ಣ ತಾಯಿಯ ಕಣ್ಣು ಹನಿಯುತ್ತಿರುವುದು ನೀರಲ್ಲ,
ಪನ್ನೀರು; ಉಪ್ಪಲ್ಲ, ಸಿಹಿಯ ಹಾಲು.
ಲಾಭವೆಲ್ಲರಿಗಿಂದು: ಭಾರವಿಳಿಸಿದ ಹಗುರ
ಮನಸು ಹೆಣ್ಣನು ಹೆತ್ತು ಹೊತ್ತವರಿಗೆ.
ಗಂಡಿಗೋ ಈ ಹೆಣ್ಣು ಮುಳುಗುವವನಿಗೆ ಬೆಂಡು;
ನೆಮ್ಮದಿಯ ಗುಡಿ ಹೆಣ್ಣು ಕಣ್ಣ್ಸೋಲ್ವಗೆ.
ತಲೆಮಾರ ಬೀಜಕ್ಕೆ ಬೆಳಕು ಬಿತ್ತಿದ ಹಬ್ಬ,
ನನ್ನ ಗೆಳೆಯನ ತಾಯಿ ತಂದೆಯರಿಗೆ.
ನೆಂಟರಿಷ್ಟರಿಗೆಲ್ಲ ನನ್ನಂಥ ಮಿತ್ರರಿಗೆ
ಲಾಭ: ಬಿಸಿಬಿಸಿಯಾಗಿ ಕಾದ ಅಡುಗೆ.

ಪುಟ 150 ಕ್ಕೆ

ಗೃಹಲಕ್ಷ್ಮಿ

ಮೈಸೂರ ಮಲ್ಲಿಗೆ. ಕೆ.ಎಸ್.ನ.

ನನ್ನವಳು ನನ್ನೆದೆಯ ಹೊನ್ನಾಡನಾಳುವಳು
ಬೆಳಗುತೆನ್ನೆಯ ಚೆನ್ನೆ ನನ್ನ ಮಡದಿ ;
ಹೊಳೆಯ ಸುಳಿಗಳಿಂತ ಆಳ ಕಣ್ಣಿನ ಚೆಲುವು
ಅವಳೊಮ್ಮೆ ಹೆರಳ ಕೆದರಿ
ಕಪ್ಪುಗುರುಳನು ಬೆನ್ನ ಮೇಲೆಲ್ಲ ಹರಡಿದರೆ
ದೂರದಲಿ ನಿಂತು ನೋಡೆ
ಇಳಿದಂತೆ ಇರುಳ ಮಾಲೆ.

ಕರೆದಾಗ ತೌರುಮನೆ - ನೆನೆದಾಗ ನನ್ನ ಮನೆ -
ಹಳ್ಳಿಯರಸರ ಮುದ್ದು ಬಳ್ಳಿಯವಳು.
ಮುಚ್ಚುಮರೆಯಿಲ್ಲದೆಯೆ ಅಚ್ಚ ಮಲ್ಲಿಗೆಯಂತೆ
ಅರಳುತಿರುವುದವಳ ಬದುಕು.
ಬಂಗಾರದೊಡವೆಗಳ ಬಯಸಿಲ್ಲ ಮನಸಿನಲಿ
ಬಂಗಾರದಂಥ ಹುಡುಗಿ
ನನ್ನೊಲವೆ, ನನ್ನ ಬೆಡಗಿ.

ಹಸುರುಸೀರೆಯನುಟ್ಟು, ಕೆಂಪು ಬಳೆಗಳ ತೊಟ್ಟು
ತುಂಬುದನಿಯಲಿ ಕರೆವಳೆನ್ನ ಚೆಲುವೆ ;

ರಸೋಂಯ್ನಾಳ್ಮುಪ್ರಸವಳ್ಗೆ ಕುಂಕುಮದ ನಿಡುಬೊಟ್ಟು
ಲಕ್ಷ್ಮಿಯುವಸ್ತ್ರೀಸ್ಥ ಮನೆಗೆ.
ನಮಗಿದುವೆ ಸೊಗಸು ಬದುಕಿನ ಬಣ್ಣಗಳ ಸಂತೆ
ನಮಗಿಲ್ಲ ಸಾರು ಚಿಂತೆ;
ನಾವು ಗಂಧರ್ವರಂತೆ.

ತೆಂಗುಗರಿಗಳ ಜೊತೆ ತುಂಬು ಚಂದಿರ ಬಂದು
ಬೆಳ್ಳಿ ದಾರಗಳ ಹಾಲು ಕರೆಯುತಿಂದು
ಅಂಗಳದ ನಡುವೆ ವೃಂದಾವನದ ಬಳಿ ನಿಂದು
ಹಾಡುವೆವು ನಿರಂತು ಕಂಡು.
ತಾರೆಗಳ ಎಣಿಸುವೆವು, ಚಂದಿರನ ಹಾಡುವೆವು
ಬಲು ಜೊಂಪಿನೊಳಗೊಂಡು ನಾವು;
ನಮಗಿಲ್ಲ ನೋವು. ಸಾವು.

ಬಾರೆ, ನನ್ನ ಶಾರದೆ!

ಮೈಸೂರ ಮಲ್ಲಿಗೆ. ಕೆ.ಎಸ್.ನ.

ಮದುವೆಯಾಗಿ ತಿಂಗಳಿಲ್ಲ,
ನೋಡಿರಮ್ಮ ಹೇಗಿದೆ!
ನಾನು ಕೂಗಿ ಜಾಗಟೆಲ್ಲ
ಬರುವಳೆನ್ನ ಶಾರದೆ!
ಹಿಂದೆ ಮುಂದೆ ನೋಡದೆ,
ಎದುರು ಮಾತನಾಡದೆ.
ಕೋಣೆಯೊಳಗೆ ಬಿದ್ದುದು ಸದ್ದು!
ನಗುವರತ್ತೆ ಬಿದ್ದು, ಬಿದ್ದು!
ಸುಮ್ಮನಿರಲು ಮೂದಲಿಪರು,
'ಬಳಿಗೆ ಅಕ್ಕ, ಭಾವನವರು'
ಎಂದು ತುಂಟ ಹುಡುಗನು,
ಗುಟ್ಟು ಬಯಲಿಗೆಳೆವನು!
ಬಂದು ಹೆಣ್ಣಿಗೊಂದು ಗಂಡು
ಹೇಗೊ ಸೇರಿ ಹೊಂದಿಕೊಂಡು,
ಬಾಳದೊಂದು ಕನಸ ಕಂಡು,
ಮಾತಿಗೊಲಿಯದಮೃತವುಂಡು,
ದುಃಖ ಹಗುರವೆನುತಿರೆ,
ಪ್ರೇಮವೆನಲು ಹಾಸ್ಯವೆ?

ಯಾರು ಕಣ್ಣು ಮುಚ್ಚಿದರೇನು ?
ಬಾರದೆ ಬಣ್ಣ ಕುಣಿದರೇನು ?
ಜನರ ಬಾಯಿಯಲ್ಲಿ ಬರಲಿ
ಕೈ ಬಳೆ ಕೊಟ್ಟನೆ ಪ್ರೇಮದಾಗ
ಇಂಥ ಕೊರಗುಗಳಿವೆ ,
ಬೆಳಗಿ , ಬದುಕ ನಡೆದಿದೆ .
ನನ್ನ ಮನದ ದಾಮಾಜಾನಿ ;
ಬದುಕೆನಿಸಿತು, ಮಹಾತ್ಮಾ !
ಗಂಡಸೊಬ್ಬನೆ ಗಂಡಸೊಬ್ಬನೆ
ಬಾಳ ಬೆಂಬಲ ಬೇಡಕೊಳ್ಳುತ್ತೆ
ಹಗೆಯಾದ ಬಾಗಿಲೆ ,
ನಾನು , ನನ್ನ ನೋಡಲೆ ?
ಬದುಕು ನೆಲದ ಬಿಸಿಲ ದಾರಿ
ಮುತ್ತು ಕಳ್ಳು ಬಿಟ್ಟಂತೆ
ಗೊಂಬೆ ತೊಟ್ಟರು, ಯಾರ ದಾರಿ-
ಗೆಳ್ಳು ಕೊನೆಯು ! ಇಂದಿನಂತೆ
ನಾಳೆ ಬಿನ್ನ ಬಾಗಿಲು ,
ಇತ್ತ ಸಿರಿಯದು ಬಿಲ್ಲದು ;
ಮತ್ತೆ ಬಿಟ್ಟು ಹೋದರು :

ಇಂದೆ ಅದಕೆ ಕರೆವುದು
ನನ್ನ ಹುಡುಗಿ ಎನುವುದು
ಹೂವ ಮುಡಿದಿ ನಗುವುದು
ಅಪ್ಪಿ ಮುತ್ತನಿಡುವುದು.-
ಬಾರೆ ನನ್ನ ಶಾರದೆ
ಬಾರೆ ಅಕ್ಕ ನೋಡದೆ!

ತಿಂಗಳಾಯಿತೆ ?

ಕೆ. ಎಸ್. ನ.

ಮೆಯ್ತುಣಿಸುವ ವೇಳೆಯಲಿ ಬಂದು ಅಡಿಗೆರಗಿ
ಮುಂದೆ ನಿಂದಳು ನನ್ನ ಕೈ ಹಿಡಿದ ಹುಡುಗಿ.
ಇನ್ನೆಂದು ಬರುವಿರೆಂದೆನ್ನ ಕೇಳಿದಳು ;
ಇನ್ನೊಂದು ತಿಂಗಳಿಗೆ ಎಂದು ಹೇಳಿದೆನು.

ಕೆನ್ನೆ ಕೆಂಪಾಗಿರಲು ಸಂಜೆ ಮುಗಿಲಂತೆ
ಕಣ್ಣಿರಲು ತಿಳಿಬಾನ ಕಿರುತಾರೆಯಂತೆ
ಮೆಯ್ಯಿರಲು ವಸಂತ ಪುಷ್ಪವನದಂತೆ
ಮನಸು ಬಾರದು ನನಗೆ ಅಡಿಯನಿಡೆ ಮುಂದೆ.

ಅಲ್ಲಲ್ಲಿ ನಿಂದವಳ ನೋಡುತಡಿಗಡಿಗೆ
ತೆರಳಿದೆನು ವಿರಹದಲಿ ನಿಲ್ದಾಣದೆಡೆಗೆ —
ದಾರಿಯಲಿ ಕಂಡೊಬ್ಬ ಹಣ್ಣು ಮಾರುವನು
ಹೊರಟು ಹೋಯಿತು ಬಂಡಿ ಎಂದು ಹೇಳಿದನು.

ಹಿಂತಿರುಗಿ ಬಂದೆನ್ನನೊಂದೆ ಮಾತಿನಲಿ,
'ತಿಂಗಳಾಯಿತೆ?' ಎಂದಳೆನ್ನ ಹೊಸ ಹುಡುಗಿ !

ನಕ್ಕು ನಗಿಸು.

ಮೈಸೂರ ಮಲ್ಲಿಗೆ. ಕೆ. ಎಸ್. ನ.

ಒಮ್ಮೆ ನಕ್ಕು ನನ್ನ ನಗಿಸು
ಬಿಮ್ಮನುತಿಹುದೆನ್ನ ಮನಸು,
ಮುನ್ನಿಲ್ಲದ ಚಿನ್ನಗನಸು
ನಿನ್ನ ತಾನೆ ಕೈಗೂಡಿತು.
ತಣ್ಣನೆ ಕಡಲಂತೆ ನಗು,
ಬಣ್ಣದ ಮುಗಿಲಂತೆ ನಗು,
ಹುಣ್ಣಿಮೆಯಿರುಳಂತೆ ನಗು;
ನನ್ನೊಲುಮೆಯ ಹೆಣ್ಣ ನಗು
ಅತ್ತು ಸುತ್ತು ಹೋದ ಬದುಕ-
ನೆತ್ತಿ ತುಂಬಿ ಜೀವಕಳೆಯ
ಮುತ್ತನಿಟ್ಟು ರೆಪ್ಪೆಯತ್ತಿ
ಕಣ್ಣನೊಳಗೆ ದೀಪ ಹಚ್ಚು,
ಎದೆಯ ಹೊರೆಯನಿಳುಹಿ, ಮೇಲೆ
ಬರುವ ನಗುವ ಬದುಕ ಚೆಲೆ.
ನಕ್ಕು ನಗಬಲ್ಲದಿಲ್ಲೆ.
ಕೆನ್ನೆ ಕೆನ್ನೆಯೊಂದು ಮಾಡಿ
ನಗುವ ನನ್ನ ನಿನ್ನ ನೋಡಿ

ಕನ್ನಡಿಯಲ್ಲಿ ಬಂದು ಹೋದವಿ

ನಕ್ಕು ಅಳಲು, ಒಮ್ಮೆ ನಗು.

ನಕ್ಕು ಅಳಲು. ಅಕ್ಕ ಮುತ್ತು

ಸುರಿದು ಹೋಗಲಿ;

ನಕ್ಕು ನಿಂತಲ್ಲೆ ನಕ್ಕು ಅಳಲು;

ಅಂತೆ ಹೋಗಲಿ.

ಕೋಗಿಲೆ!

ಸಂಗ್ರಹ. ಕೆ. ಎಸ್. ನ.

ತುಂಬು ತಿಂಗಳಿನ ಮಲ್ಲಿಗೆ ಹಂಬಿನ
ಸಂಜೆಯ ಬೆಳಕಿನ ಸೆರಗಿನಲಿ,
ತುಂಬಿ ತುಂಬಿ ಬಿಡು ನಾಡಿನ ಹಾಡಿನ
ತುಂಬು ಹಾಸೆಗಳ ಕೊರಗಿನಲಿ —
ಅಕ್ಕ ಓ ಕೋಗಿಲೆ!
ಚಿಕ್ಕ ಹೂ ಕೋಗಿಲೆ.
ಮರದ ಮೇಲೆ ತೂಗಾಡುವ ಹಾಡಿಗೆ
ಹೆಸರು ಬಂದಿತೆ ಕೋಗಿಲೆ?
ಸೊಕ್ಕಿ ಬರುವ ಸುಮ್ಮಾನದ ಕೂಗಿಗೆ
ಸುಖದ ಊರ ಹೆಬ್ಬಾಗಿಲೆ
ತೆರೆಯುವೆ, ಕೂಗಲೇ?
— ಹಾಗೇ ಕೋಗಿಲೆ!
ಅಲ್ಲೇ ಇರು ನೀನಿಲ್ಲೇ ಇರು ನೀ
ಎಲ್ಲೇ ಇರು ನೀ ಬಂದಿತು ದನಿ!
ಎಲ್ಲಿ ನಾದದ ತುಷಾರ ವಾಹಿನಿ;
ಎತ್ತರದುತ್ತರ ನಿನ್ನ ದನಿ!
— ಬಾನ ಹೂ ಕೋಗಿಲೆ;
ಮುಗಿಲ ಮುತ್ತಾಗಲೆ!

ದೂರವು ಇಲ್ಲದ ಎಲೆಯು ಇಲ್ಲದ
ಬನದ ಹುಲ್ಲು ಈ ಕೊಳಲಿದೆ!
ಎದೆಯ ಗಾಯಕನು ಮೆಲ್ಲನೆ ಸುಳಿಯುವ
ಹನಿಯು ನೋಡಲಿದೆ ಕೊಳಲಿದೆ?
— ಹಾಡಿತೆ, ಕೊಳಲಿದೆ?
ಇಲ್ಲವೆ, ಹಸುರಿದೆ.

ಒಂದು ಸಂಜೆ.

[illegible] [illegible]

ಮಸಾನ ತಬ್ಬಿತು ನೆಲದ, ಹುಣ್ಣಿಮೆ ಹೂಬಿಸಿಕೊಂಡಿತು ಧಾರಿಣಿ; ನೋಡಿ ನಾಚಿತು ಬಾನು; ನೀರಿತು ಕೆಂಪು ಸಂಜೆಯ ಕದಪಲಿ. ಹಕ್ಕಿಗಳಾಟದ ಸುಗತಗಾನಕೆ ಬಗಿಯು ನಸುವೇ ನಡೆಯಿತು; ಚಿಕ್ಕ ಚಿಕ್ಕ ನೆಯುಡಿ ಸಂಗದ ಗಾಳಿ ಮೆಲ್ಲನೆ ತೆವಳಿತು.

ಇರುಳ್ಕಪ್ಪಿನ ನೆಳಲು ಚಾಚಿತು, ಬಾನು ತೇಲಿತು ಕಣ್ಣನ ನೋಟ, ತಳೆಯಿತು, ಬೆಳಕು ಹಸಿಯಿತು; ಬಾಳ್ವ ನಸೆಳಿತು ಹುಲ್ಲನು ಮಸಣ ಬಂದಿತು, ಹೊಸಬೆಳಕಿತ್ತು; ಗಾಳಿ ಬಿಸಿಯಾಗಿ ನಿಲ್ಲಿತು, ತೆಂಗುಗಳಂಗಳ ಚಾಮರಕೆ ಹಾಸಿತು ಮಸಾನವು ಮಲಗಿತು.

ಮೋಹನ ಮುರಲಿ.

ಗೋಪಾಲಕೃಷ್ಣ ಅಡಿಗ.

ಯಾವ ಮೋಹನ ಮುರಲಿ ಕರೆಯಿತು ದೂರ ತೀರಕೆ ನಿನ್ನನು?
ಯಾವ ಬೃಂದಾವನವು ಸೆಳೆಯಿತು ನಿನ್ನ ಮಣ್ಣಿನ ಕಣ್ಣನು?

ಹೂವು ಹಾಸಿಗೆ, ಚಂದ್ರ, ಚಂದನ, ಬಾಹುಬಂಧನ, ಚುಂಬನ;
ಬಯಕೆ ತೋಟದ ಬೇಲಿಯೊಳಗೆ ಕರಣಗಣದೀ ರಿಂಗಣ;
ಒಲಿದ ಮಿದುವೆದೆ, ರಕ್ತಮಾಂಸದ ಬಿಸಿದುಸೋಂಕಿನ ಪಂಜರ;
ಇಷ್ಟೆ ಸಾಕೆಂದಿದ್ದೆಯಲ್ಲೋ! ಇಂದು ಏನಿದು ಬೇಸರ?
ಏನಿದೇನಿದು ಹೊರಳುಗಣ್ಣಿನ ತೇಲುನೋಟದ ಸೂಚನೆ?
ಯಾವ ಸುಮಧುರ ಯಾತನೆ? ಯಾವ ದಿವ್ಯದ ಯಾಚನೆ?
ಮರದೊಳಡಗಿದ ಬೆಂಕಿಯಂತೆ ಎಲ್ಲೊ ಮಲಗಿದೆ ಬೇಸರ;
ಏನೊ ತೀಡಲು ಏನೊ ತಾಗಲು ಹೊತ್ತಿ ಉರಿವುದು ಕಾತರ!
ಸಪ್ತಸಾಗರದಾಚೆಯೆಲ್ಲೋ ಸುಪ್ತ ಸಾಗರ ಕಾದಿದೆ,
ಮೊಳೆಯದಲೆಗಳ ಮೂಕ ಮರ್ಮರ ಇಂದು ಇಲ್ಲಿಗು ಹಾಯಿತೆ?
ವಿವಶವಾಯಿತು ಪ್ರಾಣ; ಹಾ! ಪರವಶವು ನಿನ್ನೀ ಚೇತನ;
ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದೆ ಜೀವನ?

ಯಾವ ಮೋಹನ ಮುರಲಿ ಕರೆಯಿತು ಇದ್ದಕಿದ್ದಲೆ ನಿನ್ನನು?
ಯಾವ ಬೃಂದಾವನವು ಚಾಚಿತು ತನ್ನ ಮಿಂಚಿನ ಕೈಯನು?

ಇದು ಬಾಳು!

ಅಡಿಗ.

ಅಳುವ ಕಡಲೊಳೂ ತೇಲಿ ಬರುತಲಿದೆ ನಗೆಯ ಹಾಯಿದೋಣಿ
ಬಾಳ ಗಂಗೆಯ ಮಹಾಪೂರದೊಳೂ ಸಾವಿನೊಂದು ವೇಣಿ
ನೆರೆತಿದೆ, ಬೆರೆತಿದೆ, ಕುಣಿವ ಹೊನಲ ತೆರೆತೆರೆಗಳೊಳ್ಳೊಯ್ಯಲ್ಲಿ
ಜನನಮರಣಗಳ ಉಬ್ಬುತಗ್ಗು ಹೊರಳುರುಳು ಸಾಗುವಲ್ಲಿ!

ಆಸೆಬೂದಿ ತಳದಲ್ಲಿ ತೆರಳುತಿಹ ಕಿಡಿಗಳಿಲ್ಲಿ ನಿತ್ಯ ಮರಳಿ,
ಮುರಿದು ಬಿದ್ದ ಮನಮರದ ಕೊರಡೊಳೂ ಹೂವು ಹೂವು ಅರ-
ಕೂಡಲಾರದೆದೆಯಾಳ್ದದಲ್ಲಿ ಕಂಡೀತು ಏಕಸೂತ್ರ;
ಕಂಡುದುಂಟು ಬೆಸೆದೆದೆಗಳಲ್ಲಿ ಭಿನ್ನತೆಯ ವಿಕಟಹಾಸ್ಯ

ಎತ್ತರೆತ್ತರಕೆ ಏರುವ ಮನಕೂ ಕೆಸರ ಲೇಪ, ಲೇಪ;
ಕೊಳೆಯ ಕೊಳ್ಳದೆಯಲಿ ಮುಳುಗಿ ಕಂಡನೋ ಬಾನಿನೊಂದು ಸೊ-
ತುಂಬುಗತ್ತಲಿನ ಬಸಿರನಾಳುತಿದೆ ಒಂದು ಕಿಚ್ಚ ಮಿಂಚು;
ತಮದಗಾಧ ಘನದಲ್ಲಿ ಹೊಳೆಯುತಿದೆ ಸತ್ಯವೊಂದು ಬಿ-
ಇರುಳರಿತೆನೆಂದೆ; ಆ ಅರಿವು ಕಿರಣವನೆ ನುಂಗಿತೊಂದು ಮೆ-
ಆ ಮುಗಿಲ ಬಸಿರನೇ ಬಗೆದು ಬಂತು ರವಿಕಿರಣವೊಂದದೋ
ಒಡೆದ ಹೊನ್ನೆ ಮುಗ್ಗೂಡು! ಮತ್ತೊಮ್ಮೆ ಹೊಳೆದು ದುಂಬಿ ?
ಇದು ಹೀಗೆ ಎಂದು ನಂಬುಗೆಯ ಊರೆಗೋಲಿಲ್ಲ ಇನ್ನು, ಆ!

ಆಸೆಯೆಂಬ ತಳವೊಡೆದ ದೋಣಿಯಲಿ ದೂರತೀರಯಾನ
ಯಾರ ಹಾರೈಕೆಗೋ ಯಾರೊ ಏನೋ ಗುರಿಯಿರದೆ ಬಿಟ್ಟ ಬಾಣ
ಇದು ಬಾಳು ನೋಡು; ಇದ ತಿಳಿದೆನೆಂದರೂ ತಿಳಿದ ಧೀರನಿಲ್ಲ
ಹಲವುತನದ ಮೈಮರೆಸುವಾಟವಿದು; ನಿಜವು ತೋರದಲ್ಲ!
ಬೆಂಗಾಡು ನೋಡು ಇದು; ಕಾಂಬ ಬಯಲು ದೊರೆತಿಲ್ಲ ಆದಿ-ಅಂತ
ಅದ ಹುಡುಕಿದೆನೆಂದ ಹಲರುಂಟು; ತಣಿದೆನೆಂದವರ ಕಾಣೆನಯ್ಯ
ಆರಿ ಬೆಳಕಿನಲ್ಲಿ ಬಾಳಲ್ಲಿ ಭಕ್ತಿ ನಾವೆಕೊ ಮುಳುಗಿತು, ಮುರಿದು
ಕೊನೆಗೆ ಕರಗುವವು ಮರಣಾತೀರ್ಥಸಮಯದಲ್ಲಿ ಬೆರೆತು

ಎಂಥ ಕಣ್ಣು

ಅಡಿಗ.

ಎಂಥ ಕಣ್ಣು, ಎಂಥ ಕಣ್ಣು,
ಎಂಥ ಕಣ್ಣು ನಿನ್ನದೆ!
ಅದರ ಹೊಳ್ಪಿನೆಳೆಗಳಲ್ಲಿ
ಜೋಲುತಿಹುದು ನನ್ನೆದೆ,
ಅದರ ಕಪ್ಪಿಂದು ಕಡಲಿನಲ್ಲಿ
ತೇಲುತಿಹುದು ನನ್ನೆದೆ.

ಇಂದುವ ಧವಳ್ಪ ತೆರೆಯೊಳ್ಗು ತೋಳ್ಗಳು-
ನೆರವು ನೀಲಮಣಿಗಳ್ಗೆ,
ಕಮಲಗರ್ಭದಿಂದಲಗಾಳು ಕು-
ತಿರುವ ತುಂಬಿ ಮರಿಗಳ್ಗೆ,
ಒಡಲ ಕಡೆಯಿಂದ ಬಂದ
ಅಮೃತವೆರಡು ಹನಿಗಳ್ಗೆ,
ಒಲವಿನೊಳ್ಗಗು ನುಡಿಗಳ್ಗೆನಿತೊ
ತಳೆವ ಹೊನ್ನ ಗಣಿಗಳ್ಗೆ?

ಎಂಥ ಕಣ್ಣು, ಎಂಥ ಕಣ್ಣು,
ಎಂಥ ಕಣ್ಣು ನಿನ್ನದೆ!
ಅದರ ನೆನಹುನಾಡಿನಲ್ಲಿ
ತಿರುಗುತಿಹುದು ನನ್ನದೆ!

ಬಾರೊ ಸಾಧನಕೇರಿಗೆ

[illegible] ಬೇಂದ್ರೆ

ಬಾರೊ ಸಾಧನಕೇರಿಗೆ ।
ಮರಳಿ ನಿನ್ನೀ ಊರಿಗೆ ॥

ಮಳೆಯು ಎಳೆಯುವ ತೇರಿಗೆ
ಹಸಿರು ಏರಿದೆ ಏರಿಗೆ
ಹಸಿರು ಚಾಚಿದೆ ದಾರಿಗೆ
ಹಸಿರು ಹೇರಿದೆ ಊರಿಗೆ
ನಂದನದ ತುಣುಕೊಂದು ಬಿದ್ದಿದೆ
ಸೋಜಿಗ ಹೇಳದು ಯಾರಿಗೆ ?
॥ ಬಾರೋ...

ಮುಗಿಲು ಮೊಗವೇ ಹೊರಳಿದೆ
ಕೋಕಿಲಕೆ ಸವಿ ಕೊರಳಿದೆ
ಬೇಲಿಗೂ ಹೂ ಬೆರಳಿದೆ
ನೆಲಕೆ ಹರೆಯವು ಮರಳಿದೆ
ಭೂಮಿತಾಯಿಯೆ ಒಡಮುರಿದು ಎದ್ದಳೊ
ಶ್ರಾವಣದ ಸಿರಿ ಬರಲಿದೆ
॥ ಬಾರೋ...

ಮೋಡಗಳ ನೆರಳಾಟವು
ಅಡವಿ ಹೂಗಳ ಕೂಟವು
ಕೋಟಿ ಜೇನ್ನೊಣ ಕೂಟವು
ಯಕ್ಷಿ ಮಾಡಿದ ಮಾಟವು
ನೋಡು ಬಾ ಸುಂಯ್ಯಾಗಿ ಪಾತರ-
ಗಿತ್ತಿ ಕುಣಿಯುವ ತೋಟವು
|| ಬಾರೆಲೆ...

ಮರವು ಮುಗಿಲಿಗೆ ನೀಡಿದೆ
ಗಿಡದ ಕೊಂಬೆಗಳು ಹಾಡಿದೆ
ಗಾಳಿ ಎಲ್ಲ ಆಡಿದೆ
ಹುಗುಡ ಇಲ್ಲಿಂದೋಡಿದೆ
ಹೇಳು ಗೆಳೆಯ ಬೇರೆ ಎಲ್ಲೀ
ತೆರದ ನೋಟವ ನೋಡಿದೆ ?
|| ಬಾರೆಲೆ...

ಬೆಳಗು ಜಾವ

ಬೇಂದ್ರೆ

ಬೆಳ್ಳಿ ಚುಕ್ಕಿ, ಬೆಳಗಾಯ್ತು ಅಣ್ಣಾ, ಮೂಡಲವು ತೆರೆಯಿತು ಕಣ್ಣಾ.
ನಕ್ಷತ್ರ ಜಾತಿ ತಮವೆಲ್ಲ ಸೋತಿ, ಮಿಗಿಲಹುದು ಬಾನ ಬಣ್ಣ.
ಜೇನ್ನೊಣದ ಹದೆಗೆ ಹೂಬಾಣ ಹೂಡಿ ಝುಂ ಎಂದು ಬಿಟ್ಟ ಮಾರ
ಗುರಿಗೋಪುರಕ್ಕೆ ಬಲೆ ಬೀಸಿ ಬಂದ ಅಗೋ ಬೆಳಕು - ಬೇಟೆಗಾರ.

ನಿಶೆಯುಳಿದ ಉಷೆಯು ಎಳ್ಳನಗೆಯು ಬಗೆಗೆ ಸೋತಿರಲು ಜಗವು ಸವಿಗೆ
ಕಣ್ಣ್ದೆರು ಬಿಂದು ಕಿಚ್ಚಿತ್ತು ಕನಸು, ಕೂಗೊಂದು ಬಂತು ಕಿವಿಗೆ:
ಮಕ್ಕಳಿರ ಕೇಳಿ. ಕನಸು ಕುಡಿಯಲೇಳಿ, ಹುಸಿನಿದ್ದೆ ನಿದ್ದೆ ಸಾಕು.
ಈ ತುಂಬಿಬಾಳು ತುಂಬಿರುವ ತನಕ ತುಂತುಂಬಿ ಕುಡಿಯಬೇಕು.

ಯಾವಾಗೊ ಕೋಳಿ ಕೂಗಿಹುದು ಮಳ್ಳ, ತಡವೇಕೆ ಪಾನಕೇಳಿ.
ಮೊದಲಾಗಲೀಗ, ಅಂಗಡಿಯು ಕದವ ಈ ಕ್ಷಣಕೆ ತೆರೆಯ ಹೇಳಿ.
ಜೀವನದ ನದಿಗೆ ಸೆಳವಿಹುದು. ಮರಣ ಬಂದೀತು ಕ್ಷಣವು ಉರುಳಿ
ಹೋದವರು ತಿರುಗಿ ಬಂದಾರೆ, ಅವರು ಬರಲಿಕ್ಕೆ ಇಲ್ಲ ಮರಳಿ.

ಬಾನ್ ಹೊಗರಲುಂಟು, ಮರ ಚಿಗುರಲುಂಟು, ಬರಲುಂಟೆ ಸುಗ್ಗಿ ಮತ್ತೆ?
ಮುಳುಗಿರಲಿ ಮುಪ್ಪು ಚಿಂತನದಿ ತಾನು ಹರೆಯಕ್ಕೆ ಚಿಂತೆ ಯಾತೆ?

ಭಾವ ಗೀತ

ಬೇಂದ್ರೆ

"ಭೃಂಗದ ಬೆನ್ನೇರಿ ಬಂತು ಕಲ್ಪನಾವಿಲಾಸಾ"
ಮನದ ಗಾಳಿ ಪುಕ್ಕ ಪಡೆಯುತಿತ್ತು ಸಹಜ ಪ್ರಾಸಾ
ಮಿಂಚು ಮಾಯವಾಗುತಿತ್ತು ಬಿಂದು ಸುಂದರಾಸಾ...
ಏನು ಏನು? ಜೇನು ಜೇನು? ಏನೆ ಗುಂಗುಂ ಗಾನಾ
ಓಂಕಾರದ ಶಂಖನಾದಕಿಂತ ಕಿಂಚಿದೂನಾ
ಕವಿಯ ಏಕತಾನ ಕವನದಂತೆ ನಾದಲೀನಾ...
ಬಿಸಿಲ ನೂಲಿನಿಂದ ನೇಯುವಂತೆ ಜೇಡ ಜಾಲಾ
ತನ್ನ ಸ್ವಪ್ನದಲ್ಲೆ ಬೆಳೆಯುವಂತೆ ತಾನೆ ಬಾಲಾ
ಉಸಿರಿನಿಂದೆ ಹುಡುಕುವಂತೆ ತನ್ನ ಬಾಳ ಮೇಲಾ...
ತಿರುಗುತಿತ್ತು ತನ್ನ ಸುತ್ತು ಮೂಕಭಾವ ಯಂತ್ರಾ
ಗರ್ಭಗುಡಿಯ ಗರ್ಭದಲ್ಲಿ ಮಿಡಿನುಡಿಯುವ ಮಂತ್ರಾ
ಮೂಡಿ ಮೂಡಿ ಮುಳುಗಿ ಮುಳುಗಿ ಮೇಲೆಗುವುದು ಸ್ವತಂತ್ರಾ...
ಎಲ್ಲೆಲ್ಲು ಸೃಷ್ಟಿದೇವಿಗಿಷ್ಟ ಧೂಪ ಧೂಮಾ
ಲಹರಿ ಲಹರಿ ಕಂಪುಬಳ್ಳಿ; ಚಿತ್ರರಂಗ ಭೂಮಾ
ದಾಂಗುಡಿಗಳ ಬಿಡುತಲಿತ್ತು ಅರಳಲಿತ್ತು, ಪ್ರೇಮಾ...

ವಜ್ರಮುಖದ ಬಾಚಿ ಮುತ್ತುತಿತ್ತು ಹೂವ ಹೂವಾ
ನೀರ ಹೀರಿ ಹಾರುತಿತ್ತು ನೀರಸವಾ ಜಾವಾ
ಅಂತ್ಯ ನೋವೆ! ಅಹಹ ಸಾವೆ! ವಿಫಲ ಸಫಲ ಜೀವಾ...
ಗಾಳಿಯೊಡನೆ ತಿಳಿಯಾಡುತಾಡುತದರ ಜೀವಾ.
ದಿಕ್ತಟಗಳ ದಾಂಟುತಿತ್ತು; ಅದರ ಬದಿಗೆ ನೋಟಾ
ನಕ್ಕ ನಗುವ ಚುಕ್ಕಿಯೊಡನೆ ಬೆಳಗುತಿತ್ತು ಕೂಟಾ...
ಅಂತು ಇಂತು ಪ್ರಾಣತಂತು ಹರಿಯುತಿತ್ತು ಬಾಳಾ
ಅಲ್ಲಿ ಇಲ್ಲಿ ಚಿಲುಮೆ ನಿಂತು ಹಾಕುತಿತ್ತು ತಾಳಾ
'ಬಂತೆಲ್ಲಿಗೆ?' ಕೇಳುತಿದ್ದನೀಯನಂತ ಕಾಲಾ ...
ಮಾತು ಮಾತು ಮಥಿಸಿ ಬಂದ ನಾದದ ನವನೀತಾ
ಹಿಗ್ಗ ಹೀರಿ ಹಿಗ್ಗಲಿತ್ತು ತನಗೆ ತಾನೆ ಪ್ರೀತಾ
ಅರ್ಥವಿಲ್ಲ ಸ್ವಾರ್ಥವಿಲ್ಲ ಬರಿಯ ಭಾವಗೀತಾ...

ಹೊಸದಿನ ಹುಡುಗಿ.

ಸೊಗಸಿಗಿಂತ ಮನೋಹರ ಅವಳ ಕೂಗು;
'ಸೊಗಸು ಬೇಕೆ ಸೊಗಸು' ಎಂಬ ದನಿಯ ರಾಗು!
'ಸೊಗಸು ಬೇಡ' ಎಂಬುದುಂಟೆ? ಕೇಳೆ, ಹೋಗೆ:
ಕೊಡುವೆ ಸುಖದ ಸೊಗಸು ಕೊಂಡು ಧನ್ಯನಾಗು!

ಅನಂತ ಪ್ರಯಾಣ

ಉತ್ತರ ಧ್ರುವದಿಂ ದಕ್ಷಿಣ ಧ್ರುವಕೂ
ಚುಂಬಕ ಗಾಳಿಯು ಬೀಸುತಿದೆ.
ಸೂರ್ಯನ ಬಿಂಬಕೆ ಚಂದ್ರನ ಬಿಂಬವು
ರಂಜಿಸಿ ನಗೆಯಲಿ ಮೀಯುತಿದೆ.
ಭೂರಂಗಕೆ ಅಭಿಸಾರಕೆ ಕರೆಯುತ
ತಿಂಗಳು ತಿಂಗಳು ನವೆಯುತಿದೆ
ತುಂಬುತ ತುಳುಕುತ ತೀರುತ ತನ್ನೊಳು
ತಾನೇ ಸವಿಯನು ಸವಿಯುತಿದೆ.
ಭುವನ ಕುಸುಮಿಸಿ ಪುಲಕಿಸಿ ಮರಳಿಸಿ
ಕೋಟಿ ಕೋಟಿ ಸಲ ಹೊಸೆಯಿಸಿತು.
ಮಿತ್ರನ ಮೈತ್ರಿಯು ಒಸಗೆ ಮಸಗದಿಸೆ
ಮರುಕದ ತಾರೆಂದು ಮನೆಯಿಸಿತು.
ಅಕ್ಷಿನಿಮೀಲನ ಮಾಡದೆ ನಕ್ಷ-
ತ್ರದ ಗಣ ಗಗನದಿ ಹಾರದಿದೆ.
ಬಿದಿಗೆಯು ಬಿಂಬಾಧರದಲಿ ಇಂದಿಗು
ಮಿಲನದ ಚಿಹ್ನವು ತೋರದಿದೆ.

ಅಲ್ಲಿ - ಇಲ್ಲಿ.

ಬಾಲ ಗಾನ.

ಜಿ. ಎಸ್. ಶಿವರುದ್ರಪ್ಪ

ಉದಯಗಗನ ನೀಲಿಮಾಂತ
ಚಂದ್ರ ಸುಶೋಭಿತ
ದಿವ್ಯಾಂಬರ ಸುಂದರಾರಿ.
ಕಣ್ಣ ನೀರಸಲಿ
ಮಣ್ಣ ಧೂಳಿಸಲಿ
ಹೊರಳುತ್ತಿರುವರ ಸುದಂತಾರಿ!
ಕೋಟಿ ಸೂರ್ಯಕರ
ತೇಜಪುಂಜತರ
ವಿದ್ಯುದ್ರಾಜಿತ ರಥಗಾಮಿ
ಉಜ್ಜುತಿರು ಕೀರ್ತನ
ನೇಗಿಲ ಸಾಲಿನ
ಮಣ್ಣಿನ ರೇಖಾಪಥಗಾಮಿ!
ಬಾಂದಳ ಚುಂಬಿತ
ಶುಭ್ರ ಹಿಮಾವೃತ
ತುಂಗಶೃಂಗದಲಿ ಗೃಹವಾಸಿ
ದೀನ ಅನಾಥರ
ದುಃಖ ದಾರಿದ್ರ್ಯ
ಮುರುಕು ಗುಡಿಸಲಲಿ ಉಪವಾಸಿ!

ನೆಲದ ಕರೆ

ಎಲ್ಲಿ ಹೋಗುತಿಹಿರಿ ನಿಲ್ಲಿ, ಮೋಡಗಳೆ
ನಾಲ್ಕು ಹನಿಯ ಚೆಲ್ಲಿ.
ದಿನ ದಿನವು ಕಾದು ಬಾಯ್ದೆರೆದು ನಿಂದೆ
ಬೇಗೆಯಿದ ತಾಳದಲ್ಲಿ.
ನನ್ನೆದೆಯ ಹಸಿರ ಉಸಿರು ಕುಗ್ಗಿದುದು
ಬಿರುಬಿಸಿಲ್ಲಿ ನಿಮಗೆ ಕರೆದೆ.
ನನ್ನ ಹೃದಯದಲಿ ನೋವು ಮಿಡಿಯುತಿದೆ
ನಾನು ನಿಮಗೆ ಕರೆದೆ.
ಬರಡಾದ ನನ್ನ ಬಡತನದ ನೋವು
ನಿಮಗರಿವು ಆಗಲಿಲ್ಲವೆ ?
ನೀಲಗಗನದಲಿ ತೇಲಿ ಹೋಗುತಿಹ
ನಿಮ್ಮ ನೆಳಲಿಂದು ಬರದುದೆ ?
ಬಾಯ್ದುಂಬು ನಗೆಗೆ, ಕೂಗುತ್ತ ನಾ
ನಿಮ್ಮನಿಂದು ಬೇಡುವೆನು –
ನೀವು ಕರುಣೆಯಲಿ ನನ್ನ ಹಸಿರೆದೆಯ
ಉಸಿರುವುದ ತೋರುವೆನು.
ಓ ಬನ್ನಿ ಬನ್ನಿ, ಓ ಬನ್ನಿ ಬನ್ನಿ,
ನನ್ನೆಡೆಗೆ ತಂದು ತನ್ನಿ.
ನೊಂದ ಜೀವಗಳಿಗೆ ತಂಪನೀಯುವುದೆ
ಮರೆಯ ತೃಪ್ತಿಯನ್ನಿ !

ಬೆಳಗು ಬಾ.

[illegible] [illegible]

ಬೆಳಗಿಸು ಬಾ ರಾತ್ರೆಯನು
ನನ್ನೆದೆಯ ಗುಡಿಯಲ್ಲಿ
ದಿವ್ಯ ದೀಪಾವಳಿಯ ಶುಭ ಘಳಿಗೆಯಲ್ಲಿ;
ಬೆಳಗು ಬಾ ಓ ಜ್ಯೋತಿ
ನಿನ್ನ ಬೆಳಕಿನ ಕಾಂತಿ
ಶತಮಾನಗಳ ಕತ್ತಲ ಮುಸುಕಿದ ಮಂದಿರದ
ಎದೆಯಾಳದಲ್ಲಿ.

ಬೆಳಗು ಬಾ ದೀವಿಗೆಯ
ನನ್ನೆದೆಯ ಗುಡಿಯಲ್ಲಿ
ದಿವ್ಯ ದೀಪಾವಳಿಯ ಶುಭ ಲಗ್ನದಲ್ಲಿ;
ಎದೆಯ ಕಸವನು ಗುಡಿಸಿ
ರಂಗವಲ್ಲಿಯನಿರಿಸಿ
ದಿಂಗಳಕು ನನ್ನೆದೆಯ ನಿನ್ನ ಪ್ರೇಮದ ಅಮೃತ
ಸಿಂಚನದಲ್ಲಿ.

ಬೆಳಗು ಬಾ ಜ್ಯೋತಿಯನು
ಎದೆಯ ಮಂದಿರದಲ್ಲಿ

ಜಗಕೆ ಬೆಳಕಾಗುತಿಹ ಸೂರ್ಯನ ಕಿರಣಗಳಲ್ಲಿ
ಇನಿತು ದಿನ ಇದ್ದ ನಾನು ;
ಇಂದೆ ಚೇತನ ನೀನು .
ನಿನ್ನ ಶಕ್ತಿಯಿಂದ ಬಾಳುವ ವ್ಯಕ್ತಿಯಾಗಿಹೆನು ನಾನು
ಈ ಲೋಕದಲ್ಲಿ .

ಬೆಳಗು ಬಾ ಜಗವೆಂದೆನು
ನನ್ನೆದೆಯ ಗುಡಿಯಲ್ಲಿ
ಚಿರಕಾಲ ಪ್ರಜ್ವಲಿಸಿ ಬೆಳಗುವಂತೆ ;
ನೀನು ಬಂದು ಹರಸಿದ
ನನ್ನೆದೆಯ ಆನಂದ
ನಿತ್ಯನೂತನ ಶೋಭಿಸುತಿಹ ಮುಕ್ತಿಯಂದ ಮುಮುಕ್ಷುವಿನ
ಮುಂಬೆಳಗಿನಂತೆ .

ರಾಗಾನ್ವೇಷಣೆ.

ಯಾವ ರಾಗಕೊ ಏನೊ ನನ್ನೆದೆ ಬಿಗೆ ಮಿಡಿಯುತ ಸರಳಿಸೆ
ಬಂದು ಸೇರುತಿರುವಾ ರಾಗಕೊಪ್ಪದೆ ಬೇರೆ ರಾಗಗಳಿಲ್ಲವೆ.

ಉದಯ ಸನ್ನೆಗಳೆದೆಯ ಬೆಳಕೆ ಮುಸುಕಿನ ಹುಡುಕಿತು ರಾಗದ
ಬಿಸಿಲ ಬೇಗೆಗೆ ಕಮಲದಂತಿಗೆ ಹುಡುಕಿ ನೀರಿಕ್ಷಿಸಿ ಬಳಲಿತು,
ಬಿಳಿಯ ಬಾನ ಬಿಸುಗಳ್ಳುಪ್ಪ ನಡೆದಿಗೆ ತಂಪಿನ ಜೊಂಪಿಸಿ
ಇದರ ರಾಗದ ತನ್ನ ಮಿಡಿತವನರಿಯದೆ ಬಳಲಿತು.

ಮುಗಿಲ ತಾರೆಯು ರಜತನಂದನದಲ್ಲಿ ದನಿಯನು ಹುಡುಕಿತು
ಹರ್ಷವಿಹಗಗಳ ಕೋಕಕೋಕಕೆ ಸುಗ್ಗಿ ತೃಪ್ತಿಯನರಸಿತು.
ಏನು ಆದರು ದೊರೆಯದಾದುದು ಮನದ ಬಯಕೆಯ ರಾಗವು
ಬಂದು ವೇದನೆ ಎದೆಯ ತುಂಬಿದೆ, ಮೂಕವಾಗಿದೆ ಹೃದಯವು —

ಮತ್ತೆ ದಿನವೂ ಎಂದಿನಂತೆಯೆ ಮೂಕಗೀತೆಯ ಮಿಡಿದಿದೆ!
ಯಾವ ರಾಗವ ಮುಟ್ಟಿದರೆ ಜಗವೆಲ್ಲ ರಾಗವು ಎಲ್ಲವೂ,
ಅಂಥ ರಾಗವನರಸಿ ತೊಳಲುತ ದಿನವು ತವಕವ ನೀಗಿದೆ.
ಹೊನ್ನ ನೀಲಾಕಾಶವೆತ್ತರದೆಡೆಗೆ ಮರೆಯುತ ಹಾಡಿದೆ —

ಸಂಧ್ಯಾರಾಗ

ಕಣ್ಗಳ ತುಂಬ ಈ ಕೆಂಪಿನಲಿ
ಸುಂದರ ಸಂಧ್ಯಾರಾಗದಲಿ.

ನೆರೆಹೊರೆಯ ನಾನಾಕೃತಿಯ ನೋಡಿ
ಕೊಳ್ಳೆಯಾಗಿರುವ ಕಣ್ಗಳ ಜೋಡಿ
ಸುಮರಸರಾಗಕೆ, ಕೆಂಪಿನಲ್ಲಿ
ಸುಂದರ ಮಂಗಳ ರಾಗದಲಿ.

ಹಿಗ್ಗಿದ ಹೃದಯಗಳ ಮುಕ್ಕುವ ತೆರದಿ
ಬಾನ ಮುಸ್ಸಂಜೆ ಈ ಕತ್ತಲ ಸೆರೆ
ಕಣ್ಗಳ ತುಂಬ ಈ ಕೆಂಪಿನಲಿ
ಮಂಗಳಕರವಾದ ನೋಟದಲಿ.

ಕೆಂಪಿನ ಕತ್ತಲೆ ಸುಂದರ ಮುಸ್ಸಂಜೆ.
ಸುಮರಸ ತಾರೆಗಳು ಚೆಲ್ಲಿರುವ ಮುಸ್ಸಂಜೆ
ಕಣ್ಗಳ ತುಂಬ ಈ ಕೆಂಪಿನಲಿ
ಸುಂದರ ಸಂಧ್ಯಾರಾಗದಲಿ.

ನೆನಪಿದೆಯೆ ನಿನಗೆ? 97

ಮ.ಗಾ.ನ ೪.೬.೭೩

ನಾವಿಬ್ಬರೂ ಒಂದು
ಹೊಳೆಯ ದಡದಲಿ ನಿಂದು
ಮರಳುಮನೆಗಳ ಕಟ್ಟಿ
ಆಟವಾಡಿದ ದಿವಸ ನೆನಪಿಹುದೆ ನಿನಗೆ?
ಮುಂಗಾರುಮಳೆ ಹೊಯ್ಯಲು
ನಾವಿಬ್ಬರೂ ಕೊಂಡುಯ್ದು —
ನಿಂತಾಗ ಮರಳುಮನೆ
ಕೊಚ್ಚಿ ಹೋದಾ ದಿವಸ ನೆನಪಿದೆಯೆ ನಿನಗೆ?
ಈ ಮರಳು ನನಗೆಂದು
ಆ ಮರಳು ತನಗೆಂದು
ಹೊಡೆದಾಡಿ 'ಟೂ ಕೆ' ಬಿಟ್ಟು
ಆಟವಾಡಿದ ದಿವಸ ನೆನಪಿದೆಯೆ ನಿನಗೆ?
ಮರುದಿವಸ ಒಂದಾಗಿ
ಮರಳು ಮನೆಗಳ ಕಟ್ಟಿ
ಕೈಯ್ಯ ಚಪ್ಪಾಳೆ ತಟ್ಟಿ
ಹಾಡಿ ಕುಣಿದಾ ದಿವಸ ನೆನಪಿದೆಯೆ ನಿನಗೆ?
ಒಂದು ಕ್ಷಣದಾ ಜ್ವಾಲೆಯು
ಇಂದಿಗೂ ಕಾಡುತಿದೆ;
ಬಾಗಿಲೆಯ ಮುತ್ತಿನಲಿ ಆಟವಾಡೋಣಾ,
ಬಾಲ್ಯದುದ್ಯಾನವನು ಮರಳ ಕಟ್ಟೋಣ!

ತೃಪ್ತಿ

ಎದೆ ತುಂಬಿ ಹಾಡಿದೆನು ಅಂದು ನಾನು,
ಮನವಿಟ್ಟು ಕೇಳಿದಿರಿ ಅಲ್ಲಿ ನೀವು.
ಇಂದು ನಾ ಹಾಡಿದರು ಅಂದಿನಂತೆಯೆ ಕುಳಿತು
ಕೇಳುವಿರಿ ಸಾಕೆನಗೆ ಅದುವೆ ಬಹುಮಾನ.
ಹಾಡುಹಕ್ಕಿಗೆ ಬೇಕೆ ಬಿರುದು ಸನ್ಮಾನ?

ಎಲ್ಲ ಕೇಳಲಿ ಎಂದು ನಾನು ಹಾಡುವುದಿಲ್ಲ,
ಹಾಡುವುದು ಅನಿವಾರ್ಯ ಕರ್ಮ ನನಗೆ.
ಕೇಳುವವರಿಹರೆಂದು ನಾ ಬಲ್ಲೆನದರಿಂದ
ಹಾಡುವೆನು ಮೈದುಂಬಿ ಎಂದಿನಂತೆ.
ಯಾರು ಕಿವಿ ಮುಚ್ಚಿದರು ನನಗಿಲ್ಲ ಚಿಂತೆ.

ಹಕ್ಕಿಯ ಹಾಡು.

ಹಾಡು ಹಕ್ಕಿಯು ಹಾಡಲೇನು
ಭಾವ ನವನವೀನ
ಎದೆಯ ಭಾವ ಹೊಂದುವುದಕೆ
ಭಾವಕೆ ಬಿಡದು ಮನಸ್ಸೆ.

ಹಕ್ಕಿಯು ಹಾಡ ಹಾಡುತ್ತಿ
ಇದನೆ ಕೇಳ್ತಾ ತಣಿಯುವೆ
ಹಕ್ಕಿಯ ಹಾಡಿನಂತ ಹೊನಲು
ಜೀವನದಲೆ ಕಾಣ್ವೆ.

ಹಾಡನೊಲವು ಕೇಳ್ತುದಿತು
ಸುಬ್ಬಿಯುತ್ತೆ ನನಗಿದೆ
ಇದಕೆ ಹಾಡು; ಹಾಡು ನೀನು
ಇದನೆ ಕೇಳ್ತಾ ನಲಿಯುವೆ.

ಹಕ್ಕಿ ಬಿಡುವು ಒಂದು ಇಲ್ಲ
ಹಾಡು, ಹೃದಯ ತೆರೆದಿದೆ
ಹಾಡಿನಲ್ಲಿ ಲೀನವಾಗ -
ನನ್ನ ಮನಸ್ಸು ಕಾದಿದೆ.

ಸಂದೇಶ.

[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]

ರತ್ನನ್ ಪರ್ಪಂಚ

'ರತ್ನ'

ಯೋಳ್ಕೊಳ್ಳಾಕ್ ಒಂದ್ ಊರು
ತಲೆಮೇಗ್ ಒಂದ್ ಸೂರು
ಮಲಗಾಕೆ ಬೂಮ್ತಾಯಿ ಮಂಚ.
ಕೈ 'ಇಡಿದೋಳ್' ಪುಟ್ನಂಜಿ
ನಗನಗತ ಉಪ್ಗಂಜಿ
ಕೊಟ್ರಾಯ್ತು ರತ್ನನ್ ಪರ್ಪಂಚ!
ಅಗಲೆಲ್ಲ ಬೆವರ್ ಅರ್ಸಿ
ತಂದದ್ರಲ್ಲ್ ಒಸಿ ಮುರ್ಸಿ
ಸಂಜೇಲಿ ಪುಳ್ಳಿ ಯೆಂಡ ಚೊಂಚ
ಯೀರ್ತ ಮೈ ಝುಂ ಅಂದ್ರೆ
ವಾಸ್ನೆ ಘಂ ಘಂ ಅಂದ್ರೆ
ತುಂಬ್ಹೋಯ್ತು ರತ್ನನ್ ಪರ್ಪಂಚ!
ಏನೋ ಕುಸಿಯಾದಾಗ
ಮತ್ತೆ ಎಚ್ಚಿ ಓದಾಗ
ಅಂಗೇನೆ ಪರಪಂಚದ್ ಅಂಚ
ದಾಟ್ಕೊಂಡಿ ಆರಾಡ್ತ
ಕನ್ನಡದಲ್ ಪದ ಆಡ್ತ
ಇಗ್ಗೋದು ರತ್ನನ್ ಪರ್ಪಂಚ!

ಹುಟ್ಟಿಲ್ಲ ಸಾವಿಲ್ಲ
ನಮಗೆ ಹಿಂದಾಗ ತಾವಿಲ್ಲ
ನಾವೆ ಕಂಡಿಲ್ಲ ಆ ಕಂಬದ ಮಂಚಕೆ;
ನಮ್ಮಣ್ಣಕ್ಕೆ ನಾನಾಗಿ
ಇಬ್ಬರಿಬ್ಬರೂ ಒಂದಾಗಿ
ಮಾಡೋಣು ರಕ್ಷಣೆ ಹರಸಂಚಕೆ!
'ಬಡತನ ಸಿರಿತನ
ಏನಿಸ್ತೇನೆ? ನಿಜತೇನ
ಬಂಗಾರ ಇದ್ದ್ಯಾಡ್ವೆ ಹಿಡಿಕ್ಕೆ!'
ಹಿಂದ್ಯುಂದೆ ನುಡಿದಾಗ
ಕಣ್ಣಕೆ ನೆಗೆದೆಡಾಗಿ
ನೆಗೆಂದೋಣೆ ರಕ್ಷಣೆ ಹರಸಂಚಕೆ!
ಜೇನ್ನು ಎನ್ನು ಹೊಡಲಿಲ್ಲ
ಕೊಡಿಸಿದ್ರು ಬಡವಲಿಲ್ಲ
ನಾವೆಲ್ಲ ಒಡನಾಡಿ ಬಾಳ್ವ!
ಒವನೆ ಅಕ್ಕನೆ ತಾಯ್ತಂದೆ
ತಗ್ಗಿ ಮುಡಿಕೊಂಡ ಎಲ್ಲರಿಗೆ
ಹುಡುಕುಂದೆ ರಕ್ಷಣೆ ಹರಸಂಚಕೆ!

ಪ್ರಾರ್ತನೆ.

'ರತ್ನ'

ಬ್ರಮ್ಮ! ನಿಂಗೆ ಜೋಡಿಸ್ತೀನಿ
ಯೆಂಡ ಮುಟ್ಟಿದ್ ಕೈನ!
ಬಾಯಾರ ಉದ್ದ್ಕ ಬೊಗ್ಗ್ತೀನಿ
ಯೆಂಡ ತುಂಬ್ಕೊಂಡ್ ಮೈನ!
ಬುರ ಬುರ ನೊರೆ ಬುಸಿಯೋವಂತ
ಬೆಳ್ಳಿ ಪ್ರಳ್ಳಿ ಯೆಂಡ
ಕೊಟ್ಟೀನ್ ನನ್ನ ಪ್ರಾರ್ತ್ನೆ ಕೇಳು
ಪುರಸೋತ್ತಮ್ನ್ ಗಂಡ !
ಪುರಸೋತ್ತಮ್ಮ ಮನಸ್ಕೊಂಡಾಳೆ
ನೀನಾರೆ ಒಸ್ಸ ಯೋಳು;
ಕುಡುಕ್ಬುಟ್ ಆಡ್ದ್ರೆ ತೋಲ್ದಾದನ್ನ
ನಾಲ್ಗೆ — ಬಾಳ ಗೋಳ್ನು !
ಅಪ್ಪಾನೆಲ್ಲಾ ಪುರಸೋತ್ತಮ್ಮ
ತುಟ್ಟಾಗ್ ಇಡಕೊಂಬುಟಿಟ್ಟ
ಮುನಿಯು ಎಂದ ಬುಡೋವಂಗೇನೆ
ಬುಡತಾಳ್ಕೆ — ಬಿಲ್ಕ್ ಕೈ ಗಟ್ಟಿ!
ಮುನಿಯಂಗಾಳ ಕಾಸ್ ಓಗ್ತತೆ
ಯೆಚ್ಕೆ ಯೆಂಡ ಬುಟ್ರೆ;

ಪುರುಷೋತ್ತಮನ್ಗೆ ಎಷ್ಟೋ ಆಗುತ್ತೆ
ಮಾತೆ ಸುಲಭಾನ್ಗೆ ಕೊಟ್ರೆ ?

ನಂಗೆ ನೀವು ಲಾಯಕ್ಕಾಗಿ
ನನ್ ಕೆಲ್ಸ ಗಿಲ್ಸ ಕೊಟ್ರೆ
ಮಾತ್ರೇನಮ್ಮ ನಿನ್ ಪ್ರೆಸ್ಟೀಜ್ನ
ಪುಳ್ಳ ಒಂದಕ್ಕೆ ಹೊಂಟ್ರೆ !
ಕಮಲದೆ ಲಾವಿನ ಕುಡ್ಕೆ ಮಗ್ಳಿಗೆ
ಜೋಕಾಗ ಕುಂತ್ರು ನೀವು !
ನಾಕೂ ಬಾಂಡ್ಯಾ ನಾಕು ಬಂಡೆ
ಒಂದು ತತ್ತಿನೆ ನಾನು !
ಪುರುಷೋತ್ತಮನ್ಗೆ ಒಳ್ಳಾಕಿಲ್ಲ —
ನೀನೇನೆ ಎದ್ಕೋಳ್ ಬೇಡ ;
ಕೇಳ್ದ ಮಹಾನ್ ಒಂದಿನ್ನೊಟ್ರೆ —
ತಕ್ಕೊ ! ಒಂದದ ಶೋದ !

ನಂಜಿ ರತ್ನ ತ್ವಾಟಕ್ಕ ಓಗಿದ್ರು.

'ರತ್ನ'.

ನಂಜಿ ರತ್ನ ತ್ವಾಟಕ್ಕ ಓಗಿದ್ರು
ಒಂದಾರೆ ಮಾತಾಡ್ಲಿಲ್ಲ ;
ಓಗೋರ್ಳ್ಗೆ ಮಾತಾಡ್ಲಿಲ್ಲಾಂತಲ್ಲ —
ಆಡೋಕ್ಕೆ ಮನಸಾಗ್ಲಿಲ್ಲ.

ನಂಜಿ ರತ್ನಂಗ್ ತೋರಿಸ್ದೊಂದು
ದುಂಬಿ ತಬ್ಬಿದ್ ಊವ!
ರತ್ನನ್ ಮನಸಿನ್ ಅರಗ್ ಸೇರ್ತು
ನಂಜಿ ಮನಸಿನ್ ರೂವ!

ಮನಸಿನ್ ಜೋಡಿ ಯಾಕೆ ಮುಂದೆ
ಬಾಯಿನ್ ಬುಡುಬುಡುಕೇನ!
ಮಾತೆ ಇಲ್ದೇನೆ ಅರ್ತ ಆಗ್ದ್ರೆ
ಆ ಜೋಡಿನ್ ಮನಸ್ನ? ಜ್ಞಾನ!

ದೂರ ದೂರ ದೂರ ಗಗನಕೆ
ದೂರ ದೂರ ದೂರ ಕ್ಷಿತಿಜಕೆ
ಹಾರೋಣ ಬಾ, ಹಾರೋಣ ಬಾ...
ಗರಿಗಳ ಕೆದರಿ ಚುಂಚವ ಚಾಚಿ
ಬೆಟ್ಟ ತಪ್ಪಲು ಅಡವಿ ಬಯಲು
ದಾಟಿ ದಾಟಿ ದೂರ
ಹಾರೋಣ ಬಾ, ಹಾರೋಣ ಬಾ...
ಕೆರೆ ಕೊಳ ಸರೋವರ ನದಿ ನದ ಸಾಗರ
ಮೂಡಲು ಪಡುವಲು ತೆಂಕು ಬಡಗು
ತಿರುಗಿ ತಿರುಗಿ ದೂರ
ಹಾರೋಣ ಬಾ, ಹಾರೋಣ ಬಾ...
ಗಿಡದಲಿ ಹಣ್ಣನು ತಿಂದು
ತೊರೆಯಲಿ ನೀರನು ಕುಡಿದು
ಆಕಾಶ ಛತ್ರಿ ಗಾಳಿ ತೇರು
ಏರಿ ಏರಿ ದೂರ
ಹಾರೋಣ ಬಾ, ಹಾರೋಣ ಬಾ...

ಯಾರಿಗೂ ಹೇಳೋಣು ಬ್ಯಾಡಾ.

ಯಾರಿಗೂ ಹೇಳೋಣು ಬ್ಯಾಡಾ — ಯಾರಿಗೂ ||
ಹಾರಗುದರಿ ಬೆನ್ನ ಏರಿ
ಸ್ವಾರರಾಗಿ ಕೂತು ನಾವು
ದೂರ ದೂರ ಹೋಗೋಣಂತ । ಯಾರಿಗೂ
ಹಣ್ಣು ಹೂವು ತುಂಬಿ ಸಂತಿ
ನಿನ್ನ ತೋಟ ಸೇರಿ ಹಿಂದ
ತಿನ್ನೋಣಂತ ಬಸರ ಹೆಸರು । ಯಾರಿಗೂ
ಕುಣಿದಾಡೋಣಂತ ಕೂಡಿ ಕೂಡಿ
ಮಣಿದಾಡೋಣಂತ ಬಿಸಿಲು ನಾರಿ
ದಣಿಯುತ್ತ ನ ಬಿಡೋಣಂತ । ಯಾರಿಗೂ
ಮಲ್ಲಿಗಿ ಮಂಟಪದಾಗ
ಗಲ್ಲ ಗಲ್ಲ ಹತ್ತಿ ಕೂತು
ಮೆಲ್ಲ ದನಿಲೆ ಹಾಡೋಣಂತ । ಯಾರಿಗೂ
ಹಾಲಿನಾ ಮರಿಯಾಗಿ ಬಿಳ್ಳ
ನಾವುನೂ ನಿದಿಯಾದಿನೋಣು
ಹೂವೆ ಹೂವು ಹುಸಿ ಹಸಿರು । ಯಾರಿಗೂ
ನಿದ್ದೆ ಮಾಡಿ, ಮೈಮರೆತು ಬಿಟ್ಟು,
ಮುದ್ದುಮುಖದ ಕನಸು ನೋಡಿ
ಸುದ್ದಿ ಮಾಡದೆ ನಾವೋಣಂತ । ಯಾರಿಗೂ

ರಾಗರತಿ.

ಗರಿ — ಬೇಂದ್ರೆ

ಮುಗಿಲ ಮಾರಿಗೆ ರಾಗರತಿಯ ನಂಜ ಏರಿತ್ತ
– ಆಗ – ಸಂಜೆಯಾಗಿತ್ತ ;
ನೆಲದ ಕೆಂಪಿಗೆ ಮಂಜಿನ ಮುಸುಕು [illegible]
[illegible] .
[illegible]
[illegible] ;
[illegible]
ಸಂಸಾರದ [illegible] .

[illegible]
[illegible] ;
[illegible]
[illegible] .
[illegible]
[illegible] ;
[illegible]
[illegible] .

ನೀ ಹೀಂಗ ನೋಡಬ್ಯಾಡ ನನ್ನ.

ನೀ ಹೀಂಗ ನೋಡಬ್ಯಾಡ ನನ್ನ
ನೀ ಹೀಂಗ ನೋಡಿದರ ನನ್ನ ತಿರುಗಿ ನಾ ಹ್ಯಾಂಗ ನೋಡಲೇ ನಿನ್ನ!

ಸಂಸಾರಸಾಗರದಾಗ, ಲೆಕ್ಕವಿಲ್ಲದಷ್ಟು ದುಃಖದ ಬಂಡಿ
ನಾ ಬಲ್ಲೆ ನನಗೆ ಗೊತ್ತಿಲ್ಲದಿದ್ದರೂ ಎಲ್ಲಾ ಹಡಗೊಡೆಯುವ ದಂಡಿ
ಮುಳುಗಿಸುವ ಸುಳಿ ಮುಳುಗಿಸಲು ಇಲ್ಲ, ಮುಂದುವರಿದು ಹೋದರ ಚಿತ್ತ
ನಾ ತಿಳಿಲಾರೆ ಇದು, ಯಾಕ ನೋಡತಿ ಮತ್ತ ಮತ್ತ ನೀ ಇತ್ತ?

ತಂಬುಲ ಹಾಕದ, ತುಂಬ ಕೆಂಪು ಗಿಣಿಗಡಕ ಹಣ್ಣಿನ ಹಾಂಗ
ಇದ್ದಂಥ ತುಟಿಯು ಬಾಡಿತ್ತ ಹ್ಯಾಂಗ? ಯಾವ ಗಾಳಿಗೆ, ಹೀಂಗ
ಈ ಗದ್ದ, ಗಲ್ಲ, ಹಣೆ, ಕಣ್ಣು, ಕಂಡು ಮಾರೀಗೆ ಮಾರಿಯ ಚಿತಿ
ಸಾವಿನ್ಯ ತನ್ನ ಕೈ ಸವರಿತ್ತ, ಜೀವನದ ಇಳಿಕ ಸ್ಥಿತಿ.

[illegible] ನನೆದ ಕೈ ಹಿಡಿದ ನೀನು, ತವರ್ಯಾಗ ಸಿಂಗದ ತೆಕ್ಕೆಯು
ಇರುವಲ್ಲಿ ಇನ್ನೂ, ಯಾರ ಮುಟ್ಟಿದ ಕೆಂದ [illegible]
ಮುಗಿಲ್ಯಾನ ಕಪ್ಪಿನ ನೆಲಕ ಇಳಿದ್ಹಾಂಗ ನೆಲಕ ನೀಲ ಎಲ್ಲಿದ್ದ
ಈ ಗಾಢವಾತು ಸಂಜಿ, ನಾನು ದೇವರ ತಿಳಿದಿಲ್ಲೇನ ನೀ ನನ್ನ

[illegible]
[illegible]
[illegible]
[illegible] !

[illegible] ?
[illegible]
[illegible] ?
[illegible]

ಸ್ವಾತಂತ್ರ್ಯದ ಹಣತೆ.

ನಿಸಾರ್

ಸದಾ ಉರಿಯುತಿರುವ ಹಾಗೆ ಸ್ವಾತಂತ್ರ್ಯದ ಹಣತೆ
ದುಡಿಮೆ ತೈಲವೆರೆಯುತಿರಲು ಬಿಡುವಿಲ್ಲದ ಜನತೆ
ಎಂತು ಕುಂದಬಹುದು ನಮ್ಮ ತಾಯ್ನಾಡಿನ ಘನತೆ.?

ಮುಳ್ಳಿನಿಂದ ಅರಿವೆ ಬಿಡಿಸಿದಂತೆ ಬಂತೆ ಮುಕ್ತಿ?
ಹುಲಿಯ ಬಾಯ ಮೇವ ಕಸಿಯುವಂತೆ ಧೀರಶಕ್ತಿ,
ಪಡೆಯಿತದನು ಜನತೆ- ಬಾಳ ಬೆಸೆಯೆ ನಾಡಭಕ್ತಿ..

ಸ್ವಾತಂತ್ರ್ಯದ ಜೊತೆಗೆ ಬಂದು ಕೂಡಲಿಲ್ಲ ಗಳಿಕೆ,
ವ್ಯಕ್ತಿ ವ್ಯಕ್ತಿ ಬೆವರ ಬೀರಿ, ಮೊದಲಾಗಿದೆ ಮೊಳಕೆ;
ಮೇಲೇರಿದ ಹಾಗೆ ಭದ್ರ ಬಾಂದುಪುಂಟು ದೃಢಕೆ.

ಬಾಗಿದಂತೆ ಸಲ್ಲುತಿರಲಿ ಸಾಧನೆಂಬುದೆ ಗಮನ,
ಪ್ರಾಣವನ್ನೆ ತೆಗೆಯುತಿಹವರಿಗೆಮ್ಮ ನಮನ;
ತಾಯ ಮುಡಿಗೆ ದಿನವೂ ಏರುತಿರಲಿ ಪುಷ್ಪ, ಸುಮನ.

ನನ್ನ ಕೈಯು ಬರಿದಾಗಿದೆ!

೧೦

ನನ ಕೈಯು ಬರಿದಾಗಿದೆ ಬಿಳುಪು ಸುಂಗಿ ನಗು ಒಮ್ಮೆ
ನಾನು ನು ನಕ್ಕೆಲವನ್ನು
ಇಲ್ಲದಕ್ಕೆ ನಿನ ಬಿಳುಪ ರುಚಿಷ್ಟು ಹಳ್ಳದ ಕಳ್ಳು
ಹುದುಲಾಗ ಬಿಕ್ಕಿಲನ್ನು
ಜನಜಾನ ವರುವಾದ ನೆರಳು ಬಿಳ್ಳಿ ಬಾಗ
ಹನಲಯಳು ಇಗಾದಾ
ಎಡಬಲನ್ನು ಬಡಬಲನ್ನು ಹರಲು ಬಡಿಬಲನ್ನು
ನಕ್ಕವಾ ಗೆದ್ದವಾ!

ಕುಳಿನಗುತ ಬಂದೆವ ನಸುನಗುತ ಬಾಳ್ಗೆಲಿ
ತುಡುನಗುತ ತೆರಳ್ಗೆಲಿ
ಬಡ ನಗು ಮಹುತ್ತಾನ ಹರುಷದ ಹೆಳ್ಗೆಲಿ
ವರುಹಾದೆ ಕೆರಳ್ಗೆಲಿ!
ಬದತನ ಒಡೆತನ ಕಡೆತನ ಕುಳ್ಳಿತಾವಿದನ
ಎದೆಬಗ್ಗು ಕೈಬೆ ಮುಟ್ಟ
ಬಾಳ್ಪನ ಕದಲಾಗ ಓದನ ಮುಳ್ಳು ಸಿಗಬ್ಯಾಗ
ಕಡೆಗೆಲು ಬರಿ ಕೈಯ್ದು!

ಕಾರಿಹೆಗ್ಗಡೆಯ ಮಗಳು.

ಶ್ರೀ

ಹುಡುವ ದಿಬ್ಬದ ಗೌಡನೊಬ್ಬನು
ಬಿಡದೆ ತೊರೆಯನ ಕೂಗಿಕೊಂಡನು
ತಡೆಯದೀಗಲೆ ಗಡುವ ಹಾಯಿಸು
ಕೊಡುವೆ ಕೇಳಿದ ಹೊನ್ನನು.
ಆರು ನೀವೀ ಕರುಗಿ ಮೊರೆಯುವ
ನೀರ ಕಾಯಲ ಹಾಯುವವರು ?
ಹುಡುವ ದಿಬ್ಬದ ಗೌಡ ನಾನೀ
ಮಡದಿ ಕಾರಿಂತು ಕುವರಿಂತು.
ಓಡಿ ಬಂದೆವು ಮೂರು ದಿವಸ
ಜಾಡ ಹಿಡಿದು ಹಿಂದೆ ಬಂದರು
ನಮ್ಮನೀ ಕಣಿವೆಯಲಿ ಕಂಡರೆ
ಚಿಮ್ಮುರುವುದು ನೆತ್ತರು.
ಹತ್ತಿ ಕುದುರೆಯ ತರುಬಿ ಬರುವರು
ಮುತ್ತಿಕೊಂಡರೆ ನನ್ನ ಕೊಲುವರು
ಘೋರದುಃಖದ ನಾರಿಯನು ಬಳ-
ಕಾರು ನಗಿಸಲು ಬಲ್ಲರು ?

ಆಗ ಅಂಜದೆ ತೋರೆಂಬನೆಂದನು
ಬೇಗ ಜೀಯ, ಓಡ ತರುವೆನು
ಸುತಲಿ ಪೋಸ್ಟು. ಬೆಡಗಿ ನಿನ್ನೀ
ಮಡದಿಗೋಸುಗ ಬರುವೆನು.
ಆದುದಾಗಲಿ ಮುಬ್ಬಿನಸರಗಿನೊ-
ಗಾದ ಗಂಡವ ಕಾದು ಕೊಡುವೆನು
ಕಡಲು ನೊರೆಗಡೆದೆದ್ದು ಕುದಿಯಲಿ
ಗಡುವ ಹಾಯಿಸಿ ಬಿಡುವೆನು.
ತೂರುಗಾಳಿಗೆ ಕಡಲು ಕುದಿಯಿತು,
ನೀರ ದೆಪ್ಪೆಗಳುರುಚಿಕೊಂಡವು
ತೆಪ್ಪ ಮೊಗದ ಹುಬ್ಬುಗಂಟಿಗೆ
ಕಪ್ಪಗಾದುವು ಮುಖಗಳು.
ಕೆರಳಿ ಕೆರಳಿ ಗಾಳಿ ಬಿಕ್ಕಿತು
ಇರುಳ ಕತ್ತಲೆ ಕವಿದು ಕೊಂಡಿತು
ಕಣಿವೆಯುದ್ದಕ ಕುದುರೆ ಕತ್ತಿಯ
ಖಣಿಖಣಿ ಧ್ವನಿ ಕೇಳ್ವತು.
ಏಳು, ಬೇಗೇಳ್ಯಣ್ಣಾ ಎಂದಳು
ಹೂಳಿಕೊಳ್ಳಲಿ ನನ್ನ ಕಡಲು.
ಮುಳಿದ ಮುಗಿಲ ತಡೆಯಬಲ್ಲೆ
ಮುಳಿದ ತಂದೆಯ ತಡೆಯೆನು.

ಇತ್ತ ಕರೆಮೊರೆ ರಿಂದಕಾಯಿತು
ಅತ್ತ ತೆರೆಮೊರೆ ಸುತ್ತಿಕೊಂಡಿತು
ಆಳ ಕೈಯಲಿ ತಾಳಬಲ್ಲುದೇ
ಎಳು ಬಾಳಿನ ಕಡಲದು !
ಅಲೆಗಳಬ್ಬರದಲ್ಲಿ ಎರಡು
ಮುಳುಗುತಿದ್ದರು, ಏಳುತಿದ್ದರು
ಕರೆಗೆ ಬಂದ ಕಾಂಠದೆಗ್ಗದೆ
ಕರಗಿ ಮುಳುಗಿದ, ಅತ್ತನು.
ತೊಂದು ತೆರೆಗಳ ಮುಸುಕಿನಲ್ಲಿ,
ಕಂದು ಮುಗಿಲು ಕರಗಿ ಹೋದ —
ಬಂದು ಕೈ ನೀಡಿದಳು ನೆರವಿಗೆ,
ಬಂದು ತಬ್ಬಿತು ನಲ್ಲನ !
ಮರಳು, ಮರಳು, ಮಗಳೆ ಎಂದ
ನೊರೆವ ಕಾಂತುಲ ಗಂಟಲಿಂದ :
ಮರೆತೆ, ಬಿಟ್ಟೆನೆ ನಿನ್ನ ನಲ್ಲನ,
ಮರಳು ಕಂದಾ ಎಂದನು.
ಮರಳಬಲ್ಲುದೆ ! ಹೋಗಬಲ್ಲುದೆ ?
ಕರೆಯ ತೆರೆಯಪ್ಪುಗೆಯ ಹೊಯಿಲು
ಹೊರಳಿ ಹೋದವು ಮುಗಿಲ ಮೇಲೆ
ಕೊರಗಿನಲಿ ಅವನುಳಿದನು.

ನಗೀ ನವಿಲು

ಗತಿ

ಬೇಂದ್ರೆ

ನಾರೀ ನಿನ್ನ ಮಾರೀ ಮ್ಯಾಗ
ನಗೀ ನವಿಲು ಆಡುತಿತ್ತ
ಆಡತಿತ್ತ ಓಡತಿತ್ತ
ಮುಗಿಲ ಕಡೆಗೆ ನೋಡತಿತ್ತ.

ಮಿನಮಿನ ಮಿನ ಮಿಂಚತಿತ್ತ
ಮೂಡತಿತ್ತ ಮುಳುಗತಿತ್ತ
ಮುಳುಗುತಿತ್ತ ತೊಳಗತಿತ್ತ
ನೆಲಾ ಜಲಾ ಬೆಳಗತಿತ್ತ.

ಕಣ್ಣಿನ್ಯಾಗ ಬಣ್ಣದ ನೋಟ
ತಕ್ಕ ತಕ ಕುಣಿದಾಡತಿತ್ತ
ಕುಣೀತಿತ್ತ ಮಣೀತಿತ್ತ
ಒನಪಿಲೆ ಒನದಾಡತಿತ್ತ.

ಮನದ ಮಾಮರದ ಕೊನೆಗೆ
ಕೋಕಿಲೊಂದು ಕೂಡುತಿತ್ತ
ಕೂಡತಿತ್ತ ಹಾಡ ಬಿಚ್ಚ
ಬರೇ ನಿನ್ನ ನೋಡತಿತ್ತ.

ಒಂದು ಜೀವಾ ನೊಂದುಕೊಂಡು
ಹಗಲಿರುಳು ಮಿಡುಕಾಡುತಿತ್ತ

ಮಿಡುಕತಿತ್ತ ತೊಡಕತಿತ್ತ
ಏನೋ ಒಂದ ಕುಡಕತಿತ್ತ.
ಕಣ್ಣೀರಿನ ಮಳೆಯು ಕೂಡ
ತನ್ನ ದುಃಖ ತೋಡತಿತ್ತ
ತೋಡತಿತ್ತ ಬೇಡತಿತ್ತ,
ದೊರಕದ್ದಕ್ಕ ಜಾಡತಿತ್ತ.

ಗೆಜ್ಜೆ ಘಲ್ ಘಲ್ ಎಂಬ ಹೆಜ್ಜೆ ಹಾಕ.
ಸದ್ದ ಗದ್ದ ಶೃಂಗಾರವು ಲಜ್ಜೆ ಇನ್ನು ಯಾಕ.
ಕುಲುಕಿ ಬಳುಕಿ ತುಳುಕಿ ನಡೆವ ರಂಗುರಂಗು ಎಂತೆ
ಆಕಾಶದಲ್ಲಿ ಹೊಳೆವ ಕಾಮನ ಬಿಲ್ಲಿನಂತೆ.
ಮೋಡ ಕವಿದು ಮುಂಚು ಹರಿದು ಸುರಿಸುತಿರಲು ಎಲ್ಲೆಲ್ಲಿ
ಕೇಳಬಹುದು ಕೇಕೆಯುಲಿಯು, ಕುಣಿವ ನವಿಲಿನ ಸೊಲ್ಲು
ಕುಣಿವ ಕುಣಿತ ಮಣಿವ ಮಣಿತ ಹೊಳೆವ ಹವಳದಂತೆ
ಕಣ್ಣಿಗೆ ಸೂರೆಗೊಳ್ಳುವುದಾಗ। ಸ್ವರ್ಗಲೋಕದಂತೆ॥

ಅಂಥಿಂಥ ಹೆಣ್ಣು ನೀನಲ್ಲ !

ಕೆ.ಎಸ್.ನ.

ಅಂಥಿಂಥ ಹೆಣ್ಣು ನೀನಲ್ಲ,
ನಿನ್ನಂಥ ಹೆಣ್ಣು ಇನ್ನಿಲ್ಲ.

ಹೆಡೆಹೆಡೆಯ ಸಾಲು ತುರುಬೆಲ್ಲ,
ಗುಡಿಸಿಂದ ಹೂವು ಮೊಲೆಯೆಲ್ಲ,
ತೆರೆತೆರೆಯ ಹೊರಳು ಕುರುಳೆಲ್ಲ,
ಸುಳಿಯುಂಟು ಕಣ್ಣು ಹೊರಳೆಲ್ಲ !
ಅಂಥಿಂಥ ಹೆಣ್ಣು...

ಮಣಿಮಾಲೆ ಕೊರಳ ದನಿಯೆಲ್ಲ
ಹೊಂಬಾಳೆ ಆಸೆ ಒಳಗೆಲ್ಲ
ಒತ್ತಾಯವಿಲ್ಲ : ಒಲವೆಲ್ಲ!
ನಿನ್ನಂಥ ಹೆಣ್ಣು ಹಲವಿಲ್ಲ.
ಅಂಥಿಂಥ ಹೆಣ್ಣು...

ಎದೆ ಮುಚ್ಚ ನಿಂತ ಹೂಬಳ್ಳಿ
ಎತ್ತೊಂದು ಹೂವು ಅದರಲ್ಲ !
ಉಸಿರುಸಿರು ಮೊಗ್ಗು ಹೂವೆಲ್ಲ :
ನೀ ಬಳ್ಳಿ ಬೆಳಕು ಬದುಕೆಲ್ಲ !
ಅಂಥಿಂಥ ಹೆಣ್ಣು...

ನಡು ಬೆಟ್ಟದಲ್ಲಿ ನಿನ್ನೂರು ;
ಅಲ್ಲಿರುವ ನವಿಲು ಮುನ್ನೂರು
ಮುನ್ನೂರು ನವಿಲು ಬಂದಂತೆ
ನೀ ಬಂದರೆನಗೆ ; ಸಿರಿವಂತೆ
ಅಂಥಿಂಥ ಹೆಣ್ಣು ...
ನಡುದಾರಿಯಲ್ಲಿ ನನ್ನೂರು
ಕುಡಿಮಿಂಚಿನೂರು ಹೊನ್ನೂರು
ಮುನ್ನೂರು ಮಿಂಚು ಹೊಳೆದಂತೆ
ನೀ ಬಂದರೆನಗೆ ಸಿರಿವಂತೆ
ಅಂಥಿಂಥ ಹೆಣ್ಣು ...
ಬಲುದೂರ ದೂರ ನೀನಾಗಿ ,
ಹೊಂಗನಸು ನಡುವೆ ದನಿತೂಗಿ ,
ಕಾದಿರಲು ನಾನು ನಿನಗಾಗಿ
ನೀ ಬರುವೆ ಚೆಲುವೆ ಹೊಳೆಯಾಗಿ
ಅಂಥಿಂಥ ಹೆಣ್ಣು ...
ಎನಂಥ ಚೆಲುವೆ ನೀನಲ್ಲ
ನೀನಲ್ಲ ! ಚೆಲುವೆ ಇನ್ನಿಲ್ಲ !
ಹಾಡಲ್ಲ ನೀನು ಕನಸಲ್ಲ
ನಿನ್ನಿಂದ ಹಾಡು ಕನಸೆಲ್ಲ.
ಅಂತಿಂಥ ಹೆಣ್ಣು ...

೫. ಎಸ್. ೭

ಹಾಡೇನೇ ಉಮಾ ಹಾಡೇನೇ
ಜನರೆನ್ನುವುದಿದು ನಿಜವೇನೇ ?
ಹೊಟ್ಟೆ ಬಟ್ಟೆಗು ಗತಿಯಿಲ್ಲದೆ
ಊರೂರು ತಿರುಗುವವನಂತೆ !
ಮಸಣಗಾಡ ಬೂದಿಯಿಂದ ಮೈಗೆ ಬಳಿದು
ಶಿವ ಎಲ್ಲೆಲ್ಲೂ ತಿರುಗುವನಂತೆ
ನೀನು ಕೂಡ ಬಂಗಾರದ ಮೈಯನ
ಆ ಬೂದಿಯನ್ನೇ ಬಳಿಯುವುದಂತೆ !
ನಿನ್ನ ತಾಯಿ ನಾನಾಗಿರೆ ತಪ್ಪಿಗೆ
ಸಹಿಸಲಾರೆನೇ ಇದನೆಲ್ಲವನು
ಮತ್ತೆ ಶಿವ ನಿನ್ನ ಕರೆಯಲು ಬರಲು
ಮನೆಯೊಳಗಿಲ್ಲ ಉಮೆ ಎನ್ನುವೆನು !

ನೀಲಾಕಾಶದ ತಾರೆಯು ನೀನು
ನಿನ್ನನೆ ನೋಡುತ ಚಪ್ಪಾಳೆ ಇಕ್ಕುವ
ಮರ್ತ್ಯದ ಮಣ್ಣಿನ ಶಿಶು ನಾನು.

ದಿವ್ಯ ಬೃಹತ್ ವೈಣಿಕ ನೀನು
ನಿನ್ನಯ ವಿಪಂಚಿ ಝಂಕರವಾಲಿಸಿ
ಮೈ ಮರೆಯುವ ಹರಿಣಿಯು ನಾನು.

ಬಂಧುರ ಮಂದಾನಿಲ ನೀನು
ನಿನ್ನಯ ಸ್ಪರ್ಶಕೆ ಪೊಂಪುಳಿ ಪೋಗುವ
ಲಾಸ್ಯವನಾಡುವ ಲತೆ ನಾನು.

ತೆಗ್ಗದ ಹೊಂಬಿಸಿಲಿನ ಕೃಪೆ ನೀನು
ನಿನ್ನಯ ಸ್ಪರ್ಶಕೆ ಎದೆಯನು ತೆರೆಯುವ
ಸುಂದರ ಹೊಂದಾವರೆ ನಾನು.

ಭುವನಾಕರ್ಷಣ ಶಕ್ತಿಯು ನೀನು
ನಿನ್ನಯ ಸುತ್ತಲು ದಿನ ದಿನ ಸುತ್ತುವ
ಅಗಣಿತ ಹೂತೆಂಡೊಳಗೊಂದಾನು.

ಧ್ವಜ ವಂದನೆ

ತೆ. ಎಲ್. ಎಸ್.

ತ್ಯಾಗಜೀವನದ ಸುಂಧ್ಯಾರಾಗವೇ, ಧ್ವಜವಂದನೆ ನಿನಗೆ
ಆಸೇತು ಹಿಮಾಚಲ ಧವಳ ಕಾಂತಿಯೇ, ಧ್ವಜವಂದನೆ ನಿನಗೆ
ದುಡಿವ ನಾಡ ಮೈತುಂಬಿದ ಉಸಿರೇ, ಧ್ವಜವಂದನೆ ನಿನಗೆ
ಯುಗಯುಗ ಭಾಗ್ಯದ ಚಿರಂಜೀವಿಯೇ, ಧ್ವಜವಂದನೆ ನಿನಗೆ
ಭೂತ ಭವಿಷ್ಯತ್ ವರ್ತಮಾನ ಶಿವ ಸುಂಧ್ಯಾ ಗೋಪುರವೇ
ನೀಲಗಗನತಲ ನೀರದ ವಿತಾನದ ತಾರಾಮಣಿ ಹುದ ನೂಪುರವೇ
ಅಶೋಕ ಚಕ್ರಗಳ ಅನಂತ ಯುಗಗಳ ನಾದ ನಾಥ ಚಕ್ರ ಧ್ವನಿಯೇ
ಸುತ್ಯಾಗ್ರಹಿಗಳ ವೀರ ಸ್ವರ್ಗದ ಮುಂದಾಳು ಮುಂಜಾಣಿಯೇ
ಸುಕುಲ ಲೋಕ ಸಜೀವನ ಕಾಂತಿಯ ಪ್ರತಿಭಾ ಜನದರ್ಶನವೇ,
ರಾಜ್ಯ ಧರ್ಮಗಳ ಉನ್ನತ ಕೀರ್ತಿಯೇ, ಧ್ವಜವಂದನೆ ನಿನಗೆ,
~~ಯುಗಯುಗ ಭಾಗ್ಯದ ಚಿರಂಜೀವಿಯೇ, ಧ್ವಜವಂದನೆ ನಿನಗೆ,~~
ಬುದ್ಧ ಗಾಂಧಿಗಳ ಕರುಣಾಮೂರ್ತಿಯೇ, ಧ್ವಜವಂದನೆ ನಿನಗೆ
ಪ್ರಬುದ್ಧ ಭಾರತ ರಚನೋತ್ಸಾಹದ ಸಹಸ್ರ ಬಾಹು ಪ್ರದರ್ಶನವೇ,

ಜಯ ಜಯ ಜಯ ರಘುವೀರ್
ಹರ ಹರ ಹರ ಮಹದೇವ್.
ಮೂಡುಗಡಲಿನ ತೆರೆ ಪದಗಳ ಬಡಿದು
ಕರೆಯುತ್ತಿಹುದು ಜಯಭೇರಿಯ ಹೊಡೆದು
ದಾಟುತಲಿರುವುದು ನಾವಾಲಿಸುವಾ
ಎಲ್ಲರ ಕಂಠವ ಜತೆಗೂಡಿಸುವಾ.
ಗಡಗಳ ನಡುವಿನ ಹೆಗ್ಗಾಡಿನಲಿ
ಮೊರೆಯುವ ಬಿರುಗಾಳಿಯ ಹುಯ್ಲಿನಲಿ
ಕಗ್ಗಲ್ಲಿನ ನೀರವ ಸುಯ್ಲಿನಲಿ
ಏನದು ಕೇಳ್ವುದು ಪ್ರತಿಧ್ವನಿಗಳಲಿ.
ಶಿವನೃತ್ಯದ ರಣ ಕುಣಿತದ ಗೀತ
ಸ್ವಾಮಿ ಸಮರ್ಥರ ಸುರ ಸಂಗೀತ
ರಣವಾದ್ಯಂಗಳ ವೀರೋದ್ಘೋಷ
ಸಂನ್ಯಾಸಿಯ ಒಲವಿನ ಸದ್ಘೋಷ.
ಇಂದು ಸ್ವಾತಂತ್ರ್ಯದ ಕ್ರಾಂತಿಪದ
ಪಠಿಸಿಯ ನುಡಿ ಜಾಗೃತ ಭಾರತದ
ಘೋಷದಲಿ ನಿರಾಶೆಯ ಓಡಿಸುತ
ವೈರಿಯ ಎದೆ ಗಡ ಗಡ ನಡುಗಿಸುತ.

ದಾದಾ ದಾದಾ ವಿಶ್ವ ಜಯಂತಿಕೆ
ಸ್ವಾಭಿಮಾನ ಭರಿತ [illegible].

ಸ್ವತಂತ್ರ ಜನತೆಯಗಳು [illegible]
ಮಾತೃ[illegible] [illegible] [illegible] [illegible]
[illegible] [illegible] [illegible] [illegible] [illegible] [illegible] [illegible]
[illegible] [illegible] [illegible] [illegible] [illegible] [illegible]
[illegible] [illegible] [illegible] [illegible] [illegible]
[illegible] [illegible] [illegible] [illegible].

[illegible] [illegible] [illegible] [illegible] [illegible]
[illegible] [illegible] [illegible] [illegible] [illegible]
[illegible] [illegible] [illegible] [illegible] [illegible]
[illegible] [illegible] [illegible] [illegible] [illegible].
[illegible] [illegible] [illegible] [illegible] [illegible]
ಸ್ವಾತಂತ್ರ್ಯ [illegible] [illegible]
[illegible] [illegible] [illegible] [illegible] [illegible]
[illegible] [illegible] [illegible] [illegible] [illegible] [illegible].

ನಾನು ಬಡವಿ.

ಬೇಂದ್ರೆ

ನಾನು ಬಡವಿ ಆತ ಬಡವ
ಒಲವೆ ನಮ್ಮ ಬದುಕು
ಬಳಸಿಕೊಂಡೆವದನೆ ನಾವು
ಅದಕು ಇದಕು ಎದಕು.

ಹತ್ತಿರಿರಲಿ ದೂರವಿರಲಿ
ಅವನೆ ರಂಗಶಾಲೆ
ಕಣ್ಣು ಕಟ್ಟುವಂಥ ಮೂರ್ತಿ
ಕಿವಿಗೆ ಮುಟ್ಟುವೋಲೆ.

ಒಕ್ಕಳಿಗೆ ಬಿಸಿಲಗೊಂಡ ಹದನ
ಅವನ ಮೈಯ ಮುಟ್ಟಿ
ಅದೇ ಗಳಿಗೆ ಮೈಯು ತುಂಬಿ
ನನಗೆ ನವಿರು ಬಟ್ಟೆ.

ಆತ ಕೊಟ್ಟ ವಸ್ತ್ರ ಒಡವೆ
ನನಗೆ ಅವೆ ಗೊತ್ತು
ತೋಳುಗಳಿಗೆ ತೋಳಬಂದಿ
ಕೆನ್ನೆ ತುಂಬ ಮುತ್ತು.

ಕುಂದು ಕೊರತೆ ತೋರಲಿಲ್ಲ
ಬೇಕು ದೆಟ್ಟಗಳನು?
ಹೊಟ್ಟೆಗಿತ್ತ ಜೀವಫಲವ
ತುಟಿಗೆ ಹಾಲು ಜೇನು.

ಬೆಳಗು

ಗತಿ!

ಮೂಡಲ ಮನೆಯಾ ಮುತ್ತಿನ ನೀರಿನ
ಎರಕ್ಕವ ಹೊಯ್ದಾ
ನುಣ್ಣ-ನ್ನೆರಕ್ಕವ ಹೊಯ್ದಾ
ಬಾಗಿಲ ತೆರೆದೂ ಬೆಳಕೂ ಹರಿದೂ
ಜಗವೆಲ್ಲಾ ತೊಯ್ದಾ
ಹೋಯ್ತೋ - ಜಗವೆಲ್ಲಾ ತೊಯ್ದಾ.

ರತ್ನದ ರಸದಾ ಕಾರಂಜಿಯೂ
ಪುಟಪುಟನೇ ಪುಟಿದು
ತಾನೇ - ಪುಟಪುಟನೇ ಪುಟಿದು
ಸುತ್ತುಮುತ್ತಿನಾ ಮುಗಿದ ಮೊಗ್ಗೆ
ತಟತಟನೇ ಒಡೆದು
ತಾನೇ - ತಟತಟನೇ ಒಡೆದು.

ಎಲೆಗಳ ಮೇಲೆ ಹೂಗಳ ಒಳಗೆ
ಅಮೃತದ ಬಿಂದು
ಕಂಡವು - ಅಮೃತದ ಬಿಂದು

ಯಾರಿರಿರುವರು ಮುಗಿಲ್ಗೆ ಮೇಲಿಂ-
ಬಿಳ್ಳಗೆ ತಂದು
ಶ್ರೀನ — ಬಿಳ್ಳಗೆ ತಂದು.

ತಂಗಾಳಿಯಿಂದು ಕ್ಷೇತ್ರಮಿಟ್ಟಿರುವರೆ
ಎಸಳೆನಾ ಚತುರ
ರೂಪಿಸ — ಎಸಳೆನಾ ಚತುರ
ನಾರಿನಿರುವಕ್ಕರು ತುಂಬಿಯು ಹಂದು
ಮೆಟ್ಟಿಲುಗಳಾ ಸುವರ
ಗಂಧಾ — ಮೆಟ್ಟಿಲುಗಳಾ ಸುವರ.

ನಿದಗಂಟಿಂದು ಕೋಲಕ್ಕಿಗಳಿಂದ
ಹಕ್ಕಿಗಳಾ ಹಾಡು
ಕೋಗಿಲತು — ಹಕ್ಕಿಗಳಾ ಹಾಡು
ಗಂಧರ್ವರಾ ಶಿಲೆಮೆಯಾಯಿತು
ಕಾಲಿನಾ ನಾದು
ಕ್ಷಣಾಯುಗ — ಕಾಲಿನಾ ನಾದು.

ಕಂಡಿತು ಕಣ್ಣು ಸುತ್ತಿತು ಕಾಲಿಗೆ
ಮುಗಿದಂತಿಲ್ಲ ದಾರಿ
ಸ್ವರ್ಗ — ಮುಗಿದಂತಿಲ್ಲ ದಾರಿ.
ಹೇಳಿತು ಕಿವಿಯಲು ಮಾತಿತು ಮಾತು
ತೃಪ್ತಿಯಾಗಿಲ್ಲ ಗೀತಾ
ಗೀತಾ-ವಿಲ ಮೃಗತೃಷ್ಣ ಗೀತಾ.

ಉರಿಯುವ ಒಲೆಯ ತೆರೆಯುವ ಮನಸ್ಸು
ಕಾಣ್ಣದ ಹೋಗಿ ಬಾಣ್ಣ
ಕಣ್ಣಿಗೆ — ಕಾಣ್ಣದ ಹೋಗಿ ಬಾಣ್ಣ —
ತುಂಬಿಕೊಂಡಿತ ಹೃದಯದಲ್ಲಿ
ಮುನ್ನಡೆಸುತ ಬಾಣ್ಣ
ಇರುವ ಬರೆ — ಬೆಳ್ಳಗಾಗುವ್ವ ಬಾಣ್ಣ.

ಆಲಸಂಧ

ಬಾರಮ್ಮ ಬೆಳ್ಳುದಿಂಗಳೇ । ಸಮ್ಮಾರ ಜನಿಪಂಥ

ಹೊಂಗೇದತ್ತ್ರಿ ಬಂದ್ರ ವತ್ತ್ರಿ ಬೆಳ್ಳಕ್ಕಿ ಸಾಡಿ ನಿಂದ್ರ ವತ್ತ್ರಿ
ಕಾಮನೂರ ಹೊಳೆಯಿಂದ ಕುಂತು ನಿಂತು ಬರುತಿದ್ದ
ಕಾಮನಾಳ್ರಲೇ ಕಾಣಾದೋರು ತಿಂಗಳನಾಳ್ರಲೇ ಕಾಣಾದೋರು

ತಿಂಗಳು ತಿಂಗಳೀಗೆ ತಿಂಗಳು ಮಾವನ ಪೂಜೆ
ಗರುಡ್ರನ ಪೂಜೆ ಘನಪೂಜೆ । ಕೋಲು ಮಲ್ಲಿಗೆ ಕೋ
ಗರುಡನ್ರ ಪೂಜೆ ಘನಪೂಜೆ ತಿಂಗಳ ಮಾವ
ನಿನ ಪೂಜೆ ಗಂಗೆ ದಿನದಾಗೆ । ಕೋಲು ಮಲ್ಲಿಗೆ ಕೋ
ತಿಂಗಳು ಮಾವನ
ತುಂಬೆ ಹೂವಿನ ಗುಡಾಳ್ಗಿ । ಕೋಲು ಮಲ್ಲಿಗೆ ಕೋ
ತುಂಬೆ ಹೂವಿನ ಗುಡಾಳ್ಗಿ. ತಿಂಗಳ ಮಾವ
ಮೀವೆನೆಂದರೆ ತಾವಿಲ್ಲ । ಕೋಲು ಮಲ್ಲಿಗೆ ಕೋ
ಮೀವೆನೆಂದರೆ ತಾವಿಲ್ಲ ತಿಂಗಳ ಮಾವ
ಹೋಗಮ್ಮ ಮುಗಿಲ ತೆರೆವಾಗ ಕೋಲು ಮಲ್ಲಿಗೆ ಕೋ
ಮೀವನೆಂದರೆ ತಾವಿಲ್ಲ ತಿಂಗಳ ಮಾವ
ಹೋಗಮ್ಮ ಮುಗಿಲ ತೆರೆವ್ಯಾಗೆ.

ಅತ್ತಿಂದು ಮರದ ಕತ್ತಿ ನೆಡುತ್ತೀರುಂಟೆ
ಅತ್ತಿಲ್ಲದ ಮನೆಗೆ ಗಾಳಿಯು । ಕೊಟ್ಟರೆ
ಮತ್ತೆ ಇನ್ನಾರು ಕಳ್ಳರೋರು.
ಅತ್ತೆಂದು ನಾನೆ ಮಾವನು ನಾನೆ
ಮತ್ತೆ ಸೋದರತೆ ಗಾಳಿಗೆ ನಾನೇ
ಗಾಳಿಲಿಂದು ನಮ್ಮಿಗೆ ಕೊಡಬೇಕು.
ಬಲದ ಮರದ ಅಲ್ಲಿ ನೆಡುತ್ತೀರುಂಟೆ
ಮಾವಿಲ್ಲದ ಮನೆಗೆ ಗಾಳಿಯು । ಕೊಟ್ಟರೆ
ಬಂದು ಇನ್ನಾರು ಕಳುಹೋರು.
ಮಾವನು ನಾನೆ ಭಾವನು ನಾನೇ
ಮತ್ತೆ ಸೋದರತೆ ಗಾಳಿಗೆ ನಾನೇ
ಗಾಳಿಲಿಂದು ನಮ್ಮಿಗೆ ಕೊಡಬೇಕು.
ಕತ್ತಿ ಮರದ ಬಾಳೆ. ಬತ್ತ ಮರು ನಮ್ಮ ಗಾಳಿ
ಯಿಂದಾಗಿ ಬೆಳೆಗಳು ಬಂದಿವೆ. ನಮ್ಮ ಗಾಳಿ
ಯನ್ನೆಂಗೆ ಗಾಳಿಯು ಕೊಡಬೇಕು.
ಅತ್ತೆ ಮರದ ಬಾಳೆ ಬತ್ತ ಮರವನ್ನು
ಬೆಳೆದಾಗ ಬೆಳೆಗಳು ಕಳುಹುವೆ ನಾನೇ
ಗಾಳಿಯು ನಮ್ಮಿಗೆ ಕೊಡಬೇಕು.
[illegible]

ದೇವನದೆಂಥ ದೊಡ್ಡಸ್ತಿಕೆ ಬಿಟ್ಟ ನನ್ನ ಹೆಂಡ್ರ ಮಕ್ಕಳ
ನನ್ನ ಹೊರತು ಇನ್ನೊಂದು ಹೆಣ್ಣು ಮಕ್ಕಳಲ್ಲ ಇವರ ಬಾಳ್ವೆ ||
ರಾಮರಾಮನಂತೆ ಕೊಂಗೊಕ್ಕೊಂಗನುತಾರೆ ರಾಮನೇನು ಹುಚ್ಚ
ರಾಮರ ಹಾಗ ಕೇಳ್ರಿ ತನ್ನ ಸತಿಯನು ಅಡವಿಗೆ ಅಟ್ಟಿದ್ದ ||
ಬ್ರಹ್ಮದೇವನಂತೆ ಭಾಳ ಅರಿಯನಂತೆ ಬುದ್ಧಿ ಹೇಳ ಇವಗ್ಯ
ಮಗಳಿಗೆ ಹೆಂಡತ್ಯಾಗತಾನೆ ತ್ರಿಶಂಕು ಬರಿ ಪಾಪಿಯಗ್ಯ ||
ಹೇಳ್ಬಾರ್ದ ಶಿವನೇಳ್ಗೆ ಗಂಡನು ಹೋಗ್ಯ ಗಂಗೆ ಬಿಟ್ಟಿತ್ತ
ಹೇಳದೆ ಕೇಳದೆ ತನ್ನ ಜಡೆಯೊಳಗೆ ಗಂಗೆಯ ತಂದಿಟ್ಟ ||
ಕೃಷ್ಣನವನಂತು ಬಿಡೋಣ ಬಿಡು ತನನ ನೋಡೆವು ಹೆಂಡಿರ ಸಂಗ
ಒಬ್ಬರಿಗಂತ ಹದಿನಾರು ಸಾವಿರ ಸತಿಯರು ಗ್ಯಾನವು ಸಾಗ ||

ಅಪ್ಪಾವಲ್ಲಿಯೊಂಬೋರು ಬಾಡಿಲ್ಲ ಬರೋರು
ತಾಗ್ಯದೇಲೆ ಬಿಡದು ತಿರುಗುವಲ್ಲ
ತಾಗ್ಯದೇತ ಬಿಡದು ತಿರುಗುವಲ್ಲ ಜಂಗಮಗೆ
ಹೆಂಗ್ಯ ಶಿವಗಾಲ ಮನಸಾಗ.

ಜಕ್ಕಣಕ್ಕಣಕ್ಕ ಜಕ್ಕ ಜಕ್ಕಣಕ್ಕಣಕ್ಕ ಜಕ್ಕ
ಜಕ್ಕಣಕ್ಕಣಕ್ಕ ಜಕ್ಕ ಜಕ್ಕಣಕ್ಕಣ ....

ಬಿಲ್ಲುಬಾಣಾ ಹೂಡಿಕೊಂಡು, ಬಿಳ್ಳಂಬು ಕುದುರೆನೇರಿಕೊಂಡ
ಧ್ರೋಣಾಡಿ ಬರುತಾನೆ ರಣಧೀರ । ಮೋಜುಗಾರ
ಮೊಗದಿಂದು ರಂಗನಾಥ ಬೇಟೆಗಾರ ...
ಸಾಗರ ತೇಲ್ಡ ಕೆಂಡದಂತೆ, ರಾಮರು ಬಿಟ್ಟ ಬಾಣದಂತೆ
ಧ್ರೋಣಾಡಿ ಬರುತಾನೆ ರಣಧೀರ । ಮೋಜುಗಾರ
ಮೊಗದಿಂದು ರಂಗನಾಥ ಬೇಟೆಗಾರ....
ಮುತ್ತಿನ ಛತ್ರ ಬಿಚ್ಚಿ ಬಾರೆ ಚೆಂದದಲ್ಲಿ ಚಾಮರಂದಿ
ರಿರಿಯಾದ ಜಾಜಿ ಮೊಗ್ಗ ಅರಳ್ಯಾವೆ । ಚಾಮರಂದಿ
ಮೊಗದಿಂದು ರಂಗನಾಥ ಬರುವಾಗ...
ಮಾದಯ್ಯ/ನಿತ್ಯಲಿ ಬರುವಾಗ ಮಾಡಿಲ್ಲ ಛತ್ರಿಂದು
ದಬ್ಬೆ ದರು ಹುಲ್ಲೆ ಮರಿ ಜೋಡೆಂದಾಗಿ । ಬರುವಾಗ
ಮಾದಯ್ಯ ಮನೆಗೆ ಜನನಾರಿ ....
ಜೀವನವೆಲ್ಲ ಬೇವು ಬೆಲ್ಲ ಬಲ್ಲವರೆಲ್ಲ ಸಂಬಂಧರಲ್ಲ
ಕಷ್ಟ ಸುಖ ನಿಂದ ಕಂದ ನಮ್ಮವೆಲ್ಲ । ಬೆಟ್ಟದಡಿಯು
ಮಲ್ಲಯ್ಯ ದಂತು ಮಾದ್ರೆ ಭಯವಿಲ್ಲ

ಸುವ್ವನಾರೀ,......... ಸುವ್ವಾರೀ..........
ಆಷಾಢಮಾಸ ಬಂದಿತವ್ವ
ಹಾಸಾ ಅಣ್ಣ ಬರಲಿಲ್ಲ
ಎಷ್ಟು ಕಾಯಲಿ ಅಣ್ಣನ ದಾರಿ
ಹಾಸಾ ಅಣ್ಣಾ ಬರಲಿಲ್ಲ...
ಹೊತ್ತು ಮುಳುಗೋ ವ್ಯಾಳ್ಯಾನಾಗ
ದೀಪ ಹಚ್ಚೋ ಮನಿ ಒಳಗ
ಅಣ್ಣಾ ಕರೆಯಾಕ ಬರಲಿಲ್ಲ ನಾರೀ,
... ಸುವ್ವನಾರೀ,.. ಸುವ್ವಾರೀ...
ರೊಟ್ಟಿ ಬುತ್ತಿ ಕಟ್ಟಿಕೊಂಡು
ಕುಕ್ಕಿ ಒಳಗ ಇಟ್ಟುಕೊಂಡು
ಹೊಂಟಿನ್ನಿ ನಾನು ತವರೀಗೆ ಇಂದು,
...ಸುವ್ವನಾರೀ,.... ಸುವ್ವಾರೀ....

ಕುಮುರೆಂಬು ತಂದಿದ್ವಿ, ಬೇನಾವ ಬಿಸಿದಿದ್ವಿ
ಬರಬೇಕು ತಂಗಿ ಮದುವೇಗೆ ॥

ಅಂಗಳ್ಳ ಗುಡಿಸ್ಕೊಂಡಿಲ್ಲ, ಗಂಗಳ್ಳ ತೊಳ್ಕೊಂಡಿಲ್ಲ
ಹೆಂಗೆ ಬರಲಣ್ಣ ಮದುವೇಗೆ ?
ಅಂಗಳ್ಳಕ್ಕೆ ಆಳಿಡುವೆ ಗಂಗಳ್ಳಕ್ಕೆ ತೊತ್ತಿಡುವೆ
ಬರಬೇಕು ತಂಗಿ ಮದುವೇಗೆ.

ಬಸ್ರೀಗೆ ಬಿಸಿಲಣ್ಣ, ಕೂಸೀನ ತಾಯಣ್ಣ
ಹೆಂಗೆ ಬರಲಣ್ಣ ಮದುವೇಗೆ ?
ಕೂಸೀನ ತಾಯೀಗೆ ಪಲ್ಲಕ್ಕಿ ತರಿಸುವೆ
ಬರಬೇಕು ತಂಗಿ ಮದುವೇಗೆ.

ಮಗ್ಗೆಂಥೂರ ಬಂದೀತು, ಹೊಗ್ಗೆಂಥೂರ ತುಂಬೀತು
ಹೆಂಗೆ ಬರಲಣ್ಣ ಮದುವೇಗೆ ?
ಚಿನ್ನದ ಕುಡಿಗೋಲ್, ರನ್ನದ ಕೈಬಾಳ
ಜೊತೆಗಾರ ನಿನ್ನ ಕಳಿಸೋಂತ್ಲು.

ರಚ್ಚೆಯ ಮಗುವನ್ನ ರಗಳೆಂತು ಮಾಡೀತು
ಹೊಂಗೆ ಬರಲಿಲ್ಲ ಮಮ್ಮಡೇನ ?
ರಚ್ಚೆಯ ಮಗುವಿಗೆ ರಸ್ತೆಯ ಬಾಲ್ಯದ
ತೋರಿಸುವ ತಂಗಿ ಬರಬೇಕು.

ಅಪ್ಪ ಇದ್ದರೆ ಎಷ್ಟು ಒಪ್ಪಾಗಿ ಕರೆದೊಯ್ಯ
ಅಪ್ಪ ಇಲ್ಲದ ಮನೆಯೊಳಗೆ
ಅಪ್ಪನ ಭಾಗ್ಯವನ್ನು ನಾನಿಲ್ಲವೇನಪ್ಪ
ಅಣ್ಣನ ಮನೆಗೆ ಬರಬೇಕು

ಅವ್ವ ಇದ್ದರೆ ಎಷ್ಟು ಸುಮ್ಮನೆ ಕಳುಹಿಸೋಳ್
ಅವ್ವ ಇಲ್ಲದ ಮನೆಯೊಳಗೆ
ಅವ್ವನ ಭಾಗ್ಯವನ್ನು ನೀನಿಲ್ಲವೇನಮ್ಮ
ಬರಬೇಕು ತಂಗಿ ಬರಬೇಕು.

ಹುತ್ತರಾಯ ಬಂದಾನು ಕೋಣನ ಸಂದಾಣ್ಯನು
ಅವನೀಗ ನಮ್ಮಮ್ಮ ಬಿಡಲಾರ;
ಬಂದಾರ ಬಂದೇನು ಅಂಗ್ಳದಾಗ ನಿಂತೇನು
ಹಣ್ಣಿಗೆ ಹೂವೆ ಎರೆದೇನು

ಕರಿಯದು ಕಾಲ್ಗಿಂಗನ ಸೀರೆ ಸಿಂತಿಂದಿಂಡನು ಮಾಡಿ
ಹೊಂತ್ರ್ಯಕ್ಕೆಂಡು ಕೊಂಡದ। ಗೊಲ್ಲರ ಬಾಲೆ ॥

ಕಬ್ಬಿನ ಓಲೆ ಮೊಗತೋಳಿನೆ ಮುತ್ತಿನ ಸೆರಗಾ ಹಿಡಿದೋನೆ
ಸುಮ್ಮನೆ ಸೆರಗಾ ಬಿಡದೋ। ರಂಗಯ್ಯ ರಂಗ ॥

ಎತ್ತು ಎಮ್ಮೆಗೂ ಸುಂಕ ಎಲೆ ಅಡಕೇಗೂ ಸುಂಕ
ತುಮ್ಮುಕ್ಕೆ ಸುಂಕವೇನೋ? ಗೊಲ್ಲರ ಬಾಲೆ ॥

ಅಣ್ಣನೆ ಸೆರಗಾ ಬಿಡೋ ಅಣ್ಣಂತವ್ನೆ ಸೆರಗಾ ಬಿಡೋ
ಸುಮ್ಮನೆ ಸೆರಗಾ ಬಿಡೋ। ರಂಗಯ್ಯ ರಂಗ ॥
ಅಣ್ಣನು ನಾನಲ್ಲ. ಅಣ್ಣಯ್ಯನು ನಾನಲ್ಲ
ಅಣ್ಣನ ಮೈದುನ ಕಣೇ। ಗೊಲ್ಲರ ಬಾಲೆ ॥

ತಮ್ಮನೆ ಸೆರಗಾ ಬಿಡೋ ತಮ್ಮಂತವ್ನೆ ಸೆರಗಾ ಬಿಡೋ
ಸುಮ್ಮನೆ ಸೆರಗಾ ಬಿಡೋ। ರಂಗಯ್ಯ ರಂಗ ॥
ತಮ್ಮನು ನಾನಲ್ಲ, ತಮ್ಮಯ್ಯನು ನಾನಲ್ಲ
ತಮ್ಮನ ಭಾವ ಕಣೇ। ಗೊಲ್ಲರ ಬಾಲೆ ॥

ಗಂಡನೇ ಸೆರಗಾ ಬಿಡೋ,
ಭಂಡನೇ ಸೆರಗಾ ಬಿಡೋ!
ಸುಮ್ಮನೆ ಸೆರಗಾ ಬಿಡೋ,
ರಂಗಯ್ಯ ರಂಗ ||
ಗಂಡನೂ ನಾನಲ್ಲ, ಭಂಡನೂ ನಾನಲ್ಲ
ಭಂಡರ ಗಂಡ ಕಣೇ, ಗೊಲ್ಲರ ಬಾಲೆ ||

ಗಂಡನೇ ಸೆರಗಾ ಬಿಡೋ,
ಗಂಡಯ್ಯ ಸೆರಗಾ ಬಿಡೋ
ಸುಮ್ಮನೆ ಸೆರಗಾ ಬಿಡೋ, ಜಾಣರ ಜಾಣ ||
ಜಾಣೆಲ್ಲಿಗೆ ನನ್ನಾಣೆ, [illegible] ನನ್ನಾಣೆ
ನಾನೇ ನಿನ್ನಂಥ ಕಣೇ, ಜಾಣೆಯ ಜಾಣೆ ||

ಕಬ್ಬಿನ ಜಲ್ಲೆ ಮುರಿದೋನೆ,
ಮುತ್ತಿನ ಸೆರಗಾ ಬಿಡೋನೆ
ನೀನೇ ನನ್ನಂಥ ಕಣೋ
ರಂಗಯ್ಯ ರಂಗ ||

ಅದು ಬೆಟ್ಟ ಇದು ಬೆಟ್ಟವೋ ನಂಜುಂಡ
ನಂದ್ಯಾಲ ಗಿರಿ ಬೆಟ್ಟವೋ
ನಂದ್ಯಾಲ ಗಿರಿ ಬೆಟ್ಟಕೆ ನಂಜುಂಡ ದಾಸ್ವಾಳ್ದ ಗಿಡ ಹುಟ್ಟಿತೊ
ದಾಸ್ವಾಳ್ದ ಹೂವ ತಂದು ದಾಸ್ಯಾಗೆ ಪೂಜೆ ಮಾಡಿ
ಹೂ ಬಾಡಿ ಹೋದಲತಲ್ಲೋ ಎಷ್ಟು ಬಾರಯ್ಯ ಮನೆಗೆ
ಕರನಾಡ ಸೀಮೆಯವನೇ ಕಪ್ಪೂರ ವೀಳ್ಯದವನೇ
ನಿನ ಕರುಣೆ ತಪ್ಪಿದ್ಯಾಗೇ ಪರದೇಶಿ ನಾನಾದೆನೋ
ಪರದೇಶಿ ನಾನಾದೆನೋ ಪರಪಂಚ ನನಗ್ಯಾತಕೋ
ಪರಪಂಚ ನನಗ್ಯಾತಕೋ ನನ ಚಿಂತೆ ನಿನಗ್ಯಾತಕೋ
ಸ್ವಾತಿಯಿಂದ ಮಳೆ ಹುಯ್ಯ್ತೋ ಸುಂಟಂಗಿ ಕೆರೆ ತುಂಬಿತೋ
ಸುಂಟಂಗಿ ಕೆರೆಯ ಕೆಳಗೆ ಕೆಂಬತ್ತಿ ಪೈರು ಬಿತ್ತಿ.
ಕಾಲಿಡಿದು ಕಬ್ಬನೆತ್ತು ಚೆಂಬಿಡಿದು ನೀರ ಹೊತ್ತು
ಕೊಳ ನೋಡಿ ಬಾವಿ ತೆಗೆಯೋ ಗಿಡ ನೋಡಿ ಎಸ್ಳೆ ತೆಗೆಯೋ
ಮೂಡಲ ಸೀಮೆಯವನೇ ಮುತ್ತಿನ ಹಾರದವನೇ
ಬೆಳಗಲ ಸೀಮೆಯವನೇ ಬಂಯುಲಾದ ಕುಪ್ಪದವನೇ
ತಾಯಿತಂಗೀನ ಮರ ಮೇಲೆ ನಂದ್ಯಾನ ಗುಡಿಯೋ
ಹದಿನಾಲ್ಕು ಪರದೆಕ್ಕನಾ ಹದಿನಾಲ್ಕು ಕಿರಿದೆಕ್ಕನಾ ||

ಮೂಡಲ್ ಕುಣಿಗಲ ಕೆರೆ ನೋಡೋಕೊಂದೈಭೋಗ
ಮೂಡಿ ಬರ್ತಾನೆ ಚಂದಿರ್ಯಾಮ । ತಾನಂದನೋ
ಅಂತಂತ್ಕೆರಿರಿ ನೋಡೋಕೆ ಎಂಥಾ ಕುಣಿಗಲ ಕೆರೆ
ಸಂತೆ ಹಾದೀಲಿ ಕಲುಕಟ್ಟೆ । ತಾನಂದನೋ..
ಬಾಳೆಯ ಹಣ್ಣಿನಂತೆ ಬಾಗಿದ್ ಕುಣಿಗಲ ಕೆರೆ
ಬಾವ ತಂದಾನೆ ಬಣ್ಣದ ಸೀರೆ । ತಾನಂದನೋ..
ನಿಂಬೆಯ ಹಣ್ಣಿನಂತೆ ತುಂಬಿದ್ ಕುಣಿಗಲ ಕೆರೆ
ಅಂದಾ ನೋಡಲು ಶಿವ ಬಂದ್ರು । ತಾನಂದನೋ...
ಅಂದಾನೆ ನೋಡಲು ಶಿವ ಬಂದ್ರು ಶಿವಮಗ್ಗೆ
ಕಬ್ಬಕ್ಕಿ ಬಾಯ ಬಿಡುತಾವೆ
ಹಾಕೋಕೊಂದಾರು ಗೋಲು ನೂಕೋಕೊಂದಾರು ಗೋಲು
ಜೊಬ್ಬೆ ಹೊಡೆದಾವು ಬಾಳೆ ಮೀನು
ಜೊಬ್ಬೆನೆ ಹೊಡೆದಾವು ಬಾಳೆ ಮೀನು ಕೆರೆಯಾಗೆ
ಗುಬ್ಬಿ ಸಾರಂಗ ನಗುತಾವೆ.

ನಾವ್ ಕೈಲಾಸಕ್ ಹೋಗ್ತೇವ್ರೀ
ನೀವ್ ಬೇಕಾದ್ರೀಗ ಹೊರ್ಟುಬಹುದ್ರೀ
ಹೇಳ್ಲಿಲ್ಲ ಕೇಳ್ಲಿಲ್ಲ ಅಂದ ಗಿಂದೀರಿ
ಮುಂದಕ್ಕಿಂತಾ ಸಮಯ ನಿಮ್ಗೆ ದೊರಕೋದಿಲ್ರೀ!

ಹಿಂದಕ್ಕೊಬ್ಬ ತುಕಾರಾಂ ಸಾಧು ಕರೆಕರೆದ್ಹೋದಾನ್ರೀ
ಮಂದಜನಮನಕ್ಕದು ತಿಳಿಯದ್ಹೋಯ್ತ್ರೀ ।
ಮುಂದಾಜೀವರೆಂದೀಗಾದ್ರು ಹಿಂಗೇ ಸ್ವರೀ
ಕುಂದು ಕೊರತೆ ಸಂಸಾರಕ್ಕಿಳ್ಹಗೆ ಬಿಟ್ಟ್ಯಾಂಗ್ರೀ ॥
ಪುರಾಣಶಾಸ್ತ್ರವೆಂಬೋ ಕುಸ್ತಿ ಕುಣಿಯುತ್ತಾವಲ್ರೀ
ವರವೇದಾಗಮ ಶಾಲ್ಯ ಮೇಲೆ ನೆಗೆನೆಗದ್ಹತ್ತ್ಯಾರ್ರೀ
ತರ್ಕಮೀಮಾಂಸೆಂಬೋ ಛತ್ರಚಾಮರ ಧರಿಸೀರಿ
ಭಕ್ತರು ಮುಕ್ತರು ಎಂಬೋ ಹೆಚ್ಚಿನ ಕ್ಷೌಜನ್ಸ ಮೆರೆಯೀರಿ॥

ಶುದ್ಧಜ್ಞಾನವೆಂಬೀ ಭಕ್ತದೇಶ ನೋಡಿರಿ
ಶುದ್ಧಜ್ಞಾನವೆಂಬೋ ಅಮರ ಬ್ರಹ್ಮನ ಬಳಿಯರಿ
ಇದ್ದಿದ್ದೊಳಗೆ ನಿಮ್ಮ ಬುದ್ಧಿ ಹೀಗಾಕ್ತಿದ್ದೀರಿ
ಕಮ್ಮ [illegible] ನ ಮೋಕ್ಷ ಹುಡಿಮರೆ ಸಿಕ್ಕೋದೆಂದೀರಿ ॥

ಕೋಡಿಪಾಪುರ ಗೀಪುರ ಭಾಗ್ಯ ಬಂದೀತ್ವ್ಯಂಗ್ರೆ
ಬಂದವ್ರೆಲ್ಲ ಬರದವರೊಂದಿಗೆ ಸಾಂಹೋದ್ವ್ಯಂಗ್ರೆ
ಸದ್ಯರ್ ತೆರಂದರೆ ನಮಗೂ ನಿಮಗೂ ಇದರಿಂದ್ದೆ ಬಂದಿತ್ತಿ
ಎಂಥ ತೊಂದ್ರೆ ಬಂದ್ರೂ ನಾವು ಬಿಡ್ಳೋದಲ್ರೆ ॥
ರೊಟ್ಟಿನ ರೊಕ್ಕ ಇದ್ದವ್ರೆಲ್ಲಾ ಅತ್ಲಾಗ್ಹೋಗಿಂತಿ
ಕಟ್ಟಾ ವೆಚ್ಚ ಧನಗಳಿಗೆಲ್ಲ ಕಿಚ್ಚು ಹಚ್ಚೀರಿ
ಸಿದ್ದಾರೂಢ ವೆಂಕಟೋ ಮೋಹರ ಹತ್ತೋರ ಹತ್ತೀರಿ
ಸುದೃಕ ಕ್ರೈವರ್ ಚಿಸ್ನಾವಿರನ ಮಜಿಕ್ ಹಾಯಿರಿ ॥

ಅಕ್ರೈಗಣ್ಣಾ ಮುಕ್ರಮುದ್ದೆ ಮೂರ ಸುಟ್ಟೆ ಮುರೀತಿದ್ದ
ಗೀರ ಸುಟ್ಟೆ ಗರೀತಿದ್ದ ಗಿಲಗಿಲ ಗೆಜ್ಜೆ ಸುತ್ತ್ಯಾಳದ್ಯಾಂಗೆ
ತಾಧಿಮ್ಮಿ ತಾಧಿಮ್ಮಿ ತಕ ತಾಳ ಮೃದಂಗದ ಗೆಳತಿ, ಗೆಳತಿ...
ಏ ಕೃತಿ, ಏನೈಳು ಕೂಕ್ಕನ್ನಂಗೆ ಕೊಣಕ್ಕ ಹಾರುತೀನಿ
ತಾನ ಮಾನ ಬರೀತೀನಿ ಅಗರಬತ್ತಿ ಹಚ್ಚಿದ್ದ್ಯಾಂಗೆ
ಚಿಟ್ಟಾಲ ಚಿತೀರಿದ್ಯಾಂಗೆ ಚಿಟಿಕ್ಕೆಂತ ಬೆಳ್ಳ ಬೆಳ್ಳಕ್ಕೆ ಆಗಿ ನೀ
ಎಲ್ಲಿಗೆ ಹೋಂಟಿರುವೆ ನಡಿಂತು ನಡಿಯೋ...
ನೀ ರುಕುಮಿನಿ ಗೊಂಬೆ ಹಾಂಗ ನೀ ಒಮ್ಮೆ ನಿಂತಿರುವೆ
ಬಾಂಬ್ಬಿಟ್ಟ ಮಾತಾಡೇ ಮನಸ್ಸು ಮುರಿಬ್ಯಾಡೇ
ಅಗರಬತ್ತಿ ಹಚ್ಚಿದ್ಯಾಂಗೆ.

ಕೆ.ಎಸ್. ನಿಸಾರ್ ಅಹಮದ್

ಸುಗ್ಗದ ಸಿರಿ ಬಂತು ನಮ್ಮೂರಿಗೆ
ಸುಗ್ಗಿಯ ಸೊಬಗಿಂದ ನಮ್ಮೂರಿಗೆ.

ಎತ್ತೆತ್ತಲೆತ್ತಲೂ ತೆನೆ ಬತ್ತೆಲ್ಲ ಹಾಲು
ಚಿಲಿಪಿಲಿಗುಟ್ಯಾವೋ ಹಕ್ಕಿಯ ಮೇಳ
ಕಣ ಕಣದಲ್ಲೂ ಬಂಗಾರ ಜಾಲ
ಬೆರಗಾಗಿ ನಿಂತಿತೋ ಚಲಿಸದೆ ಕಾಲ.

ಅರಿಶಿನ ಕುಂಕುಮ ಮೈಗೆಲ್ಲ ಮೆತ್ತಿ
ಹಸಿರುಟ್ಟ ನೆಲದವ್ವ ಮದುವಣಗಿತ್ತಿ
ತೊಟ್ಟರೆ ಜರತಾರಿ ಮರಗಳ ನೆತ್ತಿ–
ದಿಬ್ಬಣ ಹೊರಟ್ಯಾವೋ ಪಾತರಗಿತ್ತಿ.

ಕೊಬ್ಬಿಗೆ ತುಂಬಾ ಕರುಗಳ ಅಂಬಾ
ಆಕಳ ಕೆಚ್ಚಲು ಅಮೃತದ ಕುಂಭ!
ಹುಚ್ಚಿಯ ಚೆಲ್ವಗಿದೆ ತುಂಬಿದ ಬೈಲು
ತೀರಿತೋ ಶಿವನೇ, ಬಡವರ ಸಾಲ.

ಒತ್ತಾವರಿ ಮುಂದಿಗೆ ಒಕ್ಕಪ್ಪುರವೆದ್ದು
ಸೇರಿತೋ ಊರೆಲ್ಲಾ-ಗುಜುಗುಜು ಸದ್ದು;
ಬೆಳ್ಳದಿಂಗಳ್ಳಾರುಳ್ಳೆಲ್ಲ ಬಂತುಲಾಟ ವಿದ್ದು—
ಗೌಡರೇ ನೋಡೋಕೆ ಬಂದಾರೋ ಖುದ್ದು.

ಹೂಂಕಾಯಿ ನೀಡೇವು ದೀಪವನುರಿಸಿ
ಬಾರಮ್ಮ ಮಾರಮ್ಮ, ಬಾ ಗೌರಿ ಅರಸಿ;
ಊರಾಚೆ ಹನುಮ, ಬಾ ನಮ್ಮ ಹರಸಿ—
ಕರಣು ಕರಗೋಂಚೆವು ತುಂಗೆಯ ನಮಿಸಿ.

ಇನ್ನೆಲ್ಲಿ ಸೋಲುವೆಯಂತು ಬಿಲ್ಲಿಂದು ಬಿಲ್ಲುಗಾರ ನೀನ್ನು
ಕೋಲೆಸೆಯಲ್ಲಿ ನನ್ನ ತನುವೆಡೆಗೆ ॥

ನಿನ್ನ ತೋಟದ ನಾರ್ಸಿಸಸ್ ಬಿಗೋನಿಯಸ್
ಗುತ್ತಿಲ್ಲ ಸನತ ಸುಗಂಧಿಯಲ್ಲಿ ಎಲೆ ಹೂಲೆ
ತೋಲಿದು ತೋಟದ ಹಾದಿಯಲು.

ಹಾಳೆಯು ಬಿಳಿಕಲ್ಲು, ಸಿಲೆಗೆಯು ಎಳಕಲ್ಲು
ನಾಗಸಂಪಿಗೆ ನಡುವೆಯೆ ನಡೆದಾಗ
ಅದೆ ಕಾರ್ಗೋಲ ನನ್ನ ತನುವೊಳು.

ಅಲೆ ಆಡುತಾವೆ, ಗಾಳಿ ತಿರುಗುತಾವೆ
ನವಿಲು ನಾರಂಗ ನಗುತಾವೆ । ಬಿಲ್ಲುಗಾರ
ಅದೆ ಕಾರ್ಗೋಲ ನನ್ನ ತನುವೊಳು.

ಹಕ್ಕಿ ಹಾಡುತಾವೆ,
ಕೊಳದಲ್ಲಿ ತಾವರೆ ಗರಿ ಬಿಚ್ಚಿ ನಗುತಾವೆ
ಅದೆ ಕಾರ್ಗೋಲ ನನ್ನ ತನುವೊಳು.

ಕಂಚಿನ ಮನೆ ಕಾಣೋಲೆ ಕಂಚಿನ ಕದ ಕಾಣೋಲೆ
ಇಂಚಾಡೋಲೆವೆರಡು ಗಿಳಿ ಕಾಣೋಲೆ ಬಳೆಗಾರ
ಅದೆ ಕಾಣೋಲೆ ನನ್ನ ತವರೂರು.

ಮುತ್ತೈದೆ ಹಟ್ಟೀಲಿ ಮುತ್ತಿನ ಚಪ್ಪರ ಹಾಕಿ
ನಚ್ಚನಡುವೆ ಹಗಲೆಂಬನಾಡಾಳ್ವೆ ಬಳೆಗಾರ
ಅವಳೇ ಕಾಣಯ್ಯ ನನ್ನ ಹಡೆದವ್ವ.

ಅಚ್ಚ ಕೆಂಪು ಬಳೆ ಹಸಿರು ಪಚ್ಚೆ ಬಳೆ
ನನ್ನ ಹಡೆದವ್ವಗೆ ಬಲು ಆಸೆ ಬಳೆಗಾರ
ಕೊಂಡೋಗಯ್ಯ ನನ್ನ ತವರೀಗೆ.

ಬಾಳಂತಿ ಅಚ್ಚಲ್ಲಿ ಬಾಳೆಯ ಚಪ್ಪರ ಹಾಕಿ
ಬಾಗಿ ಕಾರಯ್ಯ ಬಳೆಗಾರ ನಮ್ಮವ್ವ
ಬಾಳಂತಿಗೆ ಬಳೆಯ ತೊಡಿಸು ಬಾರೋಲೆ.

ಯವ್ವ ಎವ್ವ ನಾ ಹೆಂಗೆ ಮಾಡಲೆ,
ಇಂಥಾವ್ನ ಕೂಡೆ ನಾ ಹೆಂಗೆ ಬಾಳುವೆ ಮಾಡಲೆ...
ರೊಟ್ಟೀಂದ್ರೆ ನನ ಗಂಡ ಸಿಟ್ಟುತಾನೆ ಸೀನುತಾನೆ,
ತೊಂಡೆಕಾಯಿನ್ನಂಗೆ ಉಂಡೆ ಮಾಡಿ ನುಂಗುತಾನೆ...
ಬಾನಾಂದ್ರೆ ನನ ಗಂಡ ಬಾಗುತಾನೆ ಬಳುಕುತಾನೆ,
ಬಾಳೆಕಾಯಿನ್ನಂಗೆ ಗುಕ್ಕ ಮಾಡಿ ನುಂಗುತಾನೆ...
ರಾತ್ರಲೀಗೆ ಹೋಗಲಾರ, ರಾಡಿ ಹುಲ್ಲ ತರಲಾರ,
ಕೋಳಿ ಕುಂಬಾರ ಮನೆಗೆ ಕುಕ್ಕ ಹಾಕ್ಕೊಂಡು ಹೋಗುತಾನೆ..
ಹೊಳೀಗೆ ಹೋಗಲಾರ, ಹೊಳೆ ಹುಲ್ಲ ತರಲಾರ,
ಕುರಿ ಕುಂಬಾರ ಮನೆಗೆ ಕುಂಟ್ಕೊಂಡೆ ಕುಂಟ್ಕೊಂಡ್ಹೋಗುತಾನೆ.
ಹೊಲಕ್ಕತ್ರ ಹೋಗಲಾರ, ಬೇಲಿಗೀಲಿ ನೋಡಲಾರ,
ಕಡೆದ ಮಜ್ಗೇನೆಲ್ಲ ನೀನೇ ಕುಡಿದೆ ಎನ್ನುತಾನೆ...
ಮೂರು ಮುದ್ದೆ ಉಣ್ಣುತಾನೆ, ಮೂಲೇಲಿ ಮುದುರುತಾನೆ,
ಊರ ಮುಂದ್ಕೆ ಹೋಗಂದ್ರೆ ಊರಗೋಲ ಬೇಡುತಾನೆ...
ಆರು ಮುದ್ದೆ ಮುಕ್ಕುತಾನೆ, ಹಿಲ್ಲಲ್ಲೆ ಕೂರುತಾನೆ,
ಆಡು ಹೊಡ್ಕೊಂಡು ಹೋಗಂದ್ರೆ ಗೋಳಾಡ್ಕೊಂಡಳುತಾನೆ......
...; ಎಬ್ಬರಿಸೆ, ಗದ್ದೆ ಗೋವೀ ಗೋಣ, ಎವ್ವ...
ಈ ಮುಕ್ಕನ ಮೂಳನ ಕಿವಿ ಹಿಡಕಂಡ್ ಕೆಪ್ಪರಿಗಾನ,
ಎಬ್ಬರಿಸೆ, ಗದ್ದೆ ಗೋವೀ ಗೋಣ.

ಶ್ರಾವಣಾ.

ಬೇಂದ್ರೆ

ಶ್ರಾವಣಾ ಬಂತು ಕಾಡಿಗೆ | ಬಂತು ನಾಡಿಗೆ.
ಬಂತು ಬೀಡಿಗೆ | ಶ್ರಾವಣಾ ಬಂತು |
ಕಡಲಿಗೆ ಬಂತು ಶ್ರಾವಣಾ | ಕುಣಿದ್ಹಾಂಗ ರಾವಣಾ
ಕುಣಿದಾವ ಗಾಳಿ | ಭೈರವನ ರೂಪತಾಳಿ |

ಶ್ರಾವಣಾ ಬಂತು ಘಟ್ಟಕ್ಕ | ರಾಜ್ಯದ ಪಟ್ಟಕ್ಕ
ಬಾನಿನ ಮಟ್ಟಕ್ಕ
ಏರ್ಯಾವ ಮುಗಿಲು | ರವಿ ಕಾಣೆ ಹಾಡೆಹಗಲು |

ಶ್ರಾವಣಾ ಬಂತು ಹೊಳಿಗಳಿಗೆ | ಅದೇ ಸುಳಿಗಳಿಗೆ
ಹೊಳಿಗೆ ಮತ್ತ ಮಳಿಗೆ
ಆಗ್ಯೇದ ಲಗ್ನ | ಅದರಾಗ ಭೂಮಿ ಮಗ್ನ |

ಶ್ರಾವಣಾ ಬಂತು ಊರಿಗೆ | ಕೇರಿ ಕೇರಿಗೆ
ಹೊಡೆದ ಝೂರಿಗೆ
ಜೋಕಾಲಿ ಏರಿ | ಅದ್ಯಾವ ಮದನ ಸಾರಿ |

ಶ್ರಾವಣಾ ಬಂತು ಮನಿಮನಿಗೆ । [illegible] ಮನಿಮನಿಗೆ
ಮನದ [illegible]
[illegible] । [illegible]
ಶ್ರಾವಣಾ ಬಂತು ।।

ಬೆಟ್ಟ [illegible]
[illegible]
[illegible]
[illegible] । [illegible] ।।

[illegible]
[illegible]
[illegible]
[illegible] । [illegible] ।।

[illegible]
[illegible]
[illegible]
[illegible] । [illegible] ।।

ಗುಡ್ಡ ಗುಡ್ಡ ಶಾಸ್ತ್ರವಿದಲಿಂದ
ಬಿದಿಕ ಬಿಚ್ಚಲಿಂದ
ಎಲಿಕಾಯಸ್ಥಳ ಹಾಂದ
ಕೆಂಪಾದ ನೋಡ । ಕುತ್ತಿಲ್ಲ ನೋಡ ನೋಡ ।

ನಾಡೆಲ್ಲ ಮಂದಿಯ ದಾರಿ
ಹರಿಕಾರ ದೃಷ್ಟಿ
ಕಾಲಿನ ಹೆಜ್ಜೆ
ಹೋಗ ಬರುತ್ತ । ನೆಲವೆಲ್ಲ ಕುಣಿಕುಣಿಸ
ಶ್ರೀಮಹಾ ಬಂತು ॥೨

ಜಗವನ್ನು ಸೃಷ್ಟಿಸಿದ ದೊರೆ
ಕಷ್ಟ ಸುಖ ಹೇಳಿ
ಕೊಟ್ಟು ಸುಖಕೊಂಡಿ
ಕುಣಿತದ । ತಾನ್ಯನ ದಣಿತದ ।

ಶ್ರೀಮಹಾ ಬಂತು ಕಾಣಿರೆ । ಬಂತು ಕಾಣಿರೆ
ಬಂತು ಇಳಿದಿತೆ । ಶ್ರೀಮಹಾ ಬಂತು.

ಮದುವೆ

ಪುಟ 70 ರಿಂದ...

ಕೆ.ಎಸ್. ನಿಸಾರ್ ಅಹ್ಮದ್

ಯಾರು ಯಾರಿಗೆ ಮೀಸಲೋ?
ಅವಳಿಗಿವನೋ? ಇಲ್ಲ ಇವನಿಗವಳೋ?
ಯಾರಾದರೇನಂತೆ! ಒಂದೆ ಗುರಿಗೆ ಹದಂಥ
ಎರಡು ಬಾಣಗಳಂತೆ ಸಾಗಬೇಕು.
ಎರಡು ಗಾಲಿಯ ಬಂಡಿ ಸಾಗುತಿದ್ದರೆ ಸಾಕು
ಮಿಗ ಕಟ್ಟಿಕೊಂಡೇನು ಆಗಬೇಕು?
ತಂತಿ ಮೇಲಿನ ನಡಿಗೆ ಪ್ರಾಯದಲಿ ಸಂಸಾರ
ತೂಕ ತಪ್ಪದೆ ಆತು ನಡೆಯಬೇಕು.
ಸೋತರೊಬ್ಬರು, ಎದ್ದು ಮತ್ತೊಬ್ಬರಿಂದ
ಸವ್ಯಸಾಚಿತ್ವದಲಿ ಕಾಯಬೇಕು.
ಬಾಳನನುಭವದಡೆಯೊಳಿಟ್ಟ ಹೋಳಿಗಳವರು
ಕಾವಿಸಲಿ ದುಃಖ ನೀಗಿ ಮಾಗಬೇಕು.
ಅಂಬೆಗಾಲಿನ ಕೇಕೆ, ತೊದಲು ನಗೆಯ ಪತಾಕೆ—
ಕರುಳ ತೆನೆಗಳ ಹೊತ್ತು ಬೀಗಬೇಕು.

ದಾಸರು

ಗಿಳಿಯು ಪಂಜರದೊಳಿಲ್ಲ ।
ಬರಿದೆ ಪಂಜರವಾಯಿತಲ್ಲ ॥
ಅಕ್ಕ ನಿನ್ನ ಮಾತ ಕೇಳಿ
ಚಿಕ್ಕದೊಂದು ಗಿಳಿಯ ಸಾಕಿದೆ ।
ಅಕ್ಕ ನಾನಿಲ್ಲದ ವೇಳೆಯೊಳು
ಬೆಕ್ಕು ಕೊಂಡು ಹೋಯಿತಲ್ಲೆ ॥
ಒಂಬತ್ತು ಬಾಗಿಲ ಮನೆಯೊಳು
ತುಂಬಿ ತುಂಬಿ ಮಂದಿಯಿರಲು ।
ಕಂಬ ಬಿದ್ದು ಡಿಂಬ ಮುರಿದು
ಅಂಬರಕ್ಕೆ ಹಾರಿತಲ್ಲೆ ॥
ರಾಮ ರಾಮ ಎಂಬುವೋ ಗಿಳಿ
ಕೋಮಲ ಕಾಯದ ಗಿಳಿ ।
ಪ್ರೇಮದಿ ಸಾಕಿದ ಗಿಳಿ
ಬುದ್ಧಿಗೆ ಸುಮ್ಮನಾಯಿತಲ್ಲೆ ॥
ಅಂಗೈ ಮೇಲೆ ಆಡೋ ಗಿಳಿ
ಮುಂಗೈ ಮೇಲೆ ಕುಣಿಯೋ ಗಿಳಿ ।
ರಂಗಪುರಂದರ ವಿಠಲನ
ಸಂಗ ಬಿಡಲು ಹೋಯಿತಲ್ಲೆ ॥

ತೊರೆದು ಜೀವಿಸಬಹುದೆ
ಹರಿ ನಿನ್ನ ಚರಣವನು
ಬರಿದೆ ಮಾತೇಕಿನ್ನು
ಅರಿತು ಪೇಳುವೆನಯ್ಯ.

ತಾಯಿತಂದೆಯ ಬಿಟ್ಟು ಜಪವ ಮಾಡಲುಬಹುದು
ದಾಯಾದಿ ಬಂಧುಗಳ ತ್ಯಜಿಸಬಹುದು
ರಾಯ ತಾ ಮುನಿದರೆ ರಾಜ್ಯವನೆ ಬಿಡಬಹುದು
ಕಾಯಜಾಪಿತ ನಿನ್ನ ಅಡಿಯ ಬಿಡಲಾಗದು.

ಒಡಲ ಹಸಿವಿಗೆ ಅನ್ನವನು ಬಿಡಬಹುದು
ಪಡೆದ ಕ್ಷೇತ್ರಗಳನ್ನು ತೊರೆಯಬಹುದು
ಮಡದಿ ಮಕ್ಕಳ ಕಡೆಗೆ ತೊಲಗಿಸಿಯೆ ಬಿಡಬಹುದು
ಕಡಲೊಡೆಯ ನಿನ್ನಡಿಯ ಘಳಿಗೆ ಬಿಡಲಾಗದು.

ಪ್ರಾಣವನು ಪರರು ಬೇಡಿದರೆ ಕೊಡಬಹುದು
ಮಾನಾಭಿಮಾನವನು ಬಿಡಲುಬಹುದು
ಪ್ರಾಣನಾಯಕನಾದ ಆದಿಕೇಶವರಾಯ
ಜಾಣ ಶ್ರೀಕೃಷ್ಣ ನಿನ್ನ ಅಡಿಯ ಬಿಡಲಾಗದು.

ಕನಕದಾಸರು

ಎಲ್ಲರು ಮಾಡುವುದು ಹೊಟ್ಟೆಗಾಗಿ,
ಗೇಣು ಬಟ್ಟೆಗಾಗಿ, ತುತ್ತು ಹಿಟ್ಟಿಗಾಗಿ ||

ವೇದ ಶಾಸ್ತ್ರ ಪಂಚಾಂಗ ಓದಿಕೊಂಡು ಪರರಿಗೆ
ಬೋಧನೆಯ ಮಾಡುವುದು — ಹೊಟ್ಟೆಗಾಗಿ....
ಬಂಡಾಬಟ್ಟಗಾರಿ ಅಳ್ಳೆದು ಕತ್ತಿ ಡಾಳು ಕೈಲಿ ಹಿಡಿದು
ಖಂಡತುಂಡ ಮಾಡುವುದು — ಹೊಟ್ಟೆಗಾಗಿ...
ಅಂಗಡಿಗಳನ್ನು ಹೂಡಿ ವ್ಯಂಗ ಮಾತುಗಳಾಡಿ
ಭಂಗ ಬಿಟ್ಟು ಸಲ್ಲಿಸುವುದು — ಹೊಟ್ಟೆಗಾಗಿ....
ಬೆಲ್ಲದಂತೆ ಮಾತನಾಡಿ ಎಲ್ಲರನು ಮರುಳು ಮಾಡಿ
ಸುಳ್ಳು ಬೊಗಳಿ ತಿಂಬುವುದು — ಹೊಟ್ಟೆಗಾಗಿ....
ಅಂದಣ ಪಲ್ಲಕ್ಕಿಯನೇರಿ ಚಂದ ಮಾತುಗಳನಾಡಿ
ಚಂದದಿಂದ ಮೆರೆಯುವುದು — ಹೊಟ್ಟೆಗಾಗಿ...

ಸನ್ನುತ ಕಾಗಿ ನೆಲೆಯಾದಿ ಕೇಶವನ ಧ್ಯಾನವನ್ನು
ಮನಮುಟ್ಟಿ ಮಾಡುವುದು, — ಮುಕ್ತಿಗಾಗಿ,
ಆನಂದಕ್ಕಾಗಿ,
ಕೈವಲ್ಯಕ್ಕಾಗಿ...

ದ್ವಿ.ನಿ.

ಕುರುಡು ನಾಯಿ ತಾ ಸಂತೇಗೆ ಬಂತಂತೆ
ಅದು ಏಕೆ ಬಂತು, ಅದು ಹೇಗೆ ಬಂತು.
ಬಂಡಾಬಟ್ಟೆ ಉಟ್ಟಿಬಿಟ್ಟಿತಂತೆ, ಎಲುಬು ಹಾಳ್ಗೆ ಕಡಿದಿತ್ತಂತೆ
ಎಂಜಲು ಮಾತ್ರ ಎತ್ತಿತಂತೆ ಕೊಂಡು ಹೋಗುವಾಗ ಯಾರಿಲ್ಲವಂತೆ.
ರುಚಿ ಅಂಗಿ ತೊಟ್ಟಿತಂತೆ, ತಿರುಗಿ ನೋಡ್ಯಾರಿಟ್ಟದಂತೆ
ಮೊಲೆ ಇದ್ದ ಎತ್ತಿದಂತೆ, ನರಕ ದೋಣ್ಗೆ ಬಿದ್ದಿತಂತೆ.
ಮೇದಮಾಡ ಓಡಿ[illegible]ತಂತೆ ಗಾದೆ ಮಾಡಿ ಬಿಟ್ಟಿತಂತೆ
ಕಾಡಿ ತಟ್ಟಿ ನಡೆದು ಎಸುಮನ ಪಾದಕ್ಕೆ ತಾ ಗುರಿಯಾಯಿತಂತೆ.
ನಾನಾ ಜನ್ಮದ ನೆತ್ತಿತಂತೆ ಮನದಸಾಗಿ ಜನಿಸಿತಂತೆ
ತಾನೇ ತಾನಾ ತಿರುಗಿತಂತೆ ತಾನು ತನ್ನನು ಮರೆತಂತೆ.
ಮಂಗನ ಕೈಲಿ ಮಾಣಿಕ್ಯದಂತೆ ಶಾಂಗು ಬಂದು ಹೊರಗಿಟ್ಟಿತಂತೆ
ರಂಗಪ್ಪನಂಥ ಸಾಧಕರ ಎಂದು ಭಜನ ಹಾಡ್ಗೆ ಹಾಡ್ಗೆ ಬಿಟ್ಟಿತಂತೆ.

ಪಾ.ಶಿ.ರ.

ಡೊಂಕು ಬಾಲದ ನಾಯಕರೆ,
ನೀವೇನೂಟವ ಮಾಡಿದಿರಿ?
ಕನಕವ ಕುಟ್ಟುವಲ್ಲಿಗೆ ಹೋಗಿ
ಹಣಿಕಿ ಇಣುಕಿ ನೋಡುತಿರಿ
ಕನಕವ ಕುಟ್ಟುವ ಒನಕೆಲಿ ಬಡಿದರೆ
ಕುಂಯಿಕ್ ಕುಂಯಿಕ್ ರಾಗವ ಮಾಡುತಿರಿ!
ಹುಗ್ಗಿ ಮಾಡುವಲ್ಲಿಗೆ ಹೋಗಿ
ತಗ್ಗಿ ಬಗ್ಗಿ ನೋಡುತಿರಿ
ಹುಗ್ಗಿ ಮಾಡುವ ಸೌಟಲಿ ಬಡಿದರೆ
ಕುಂಯಿಕ್ ಕುಂಯಿಕ್ ರಾಗವ ಮಾಡುತಿರಿ!
ಊರ ಹಾದಿಯಲಿ ಓಡುತಿರಿ
ಕೇರಿ ಬಾಗಿಲಲಿ ಹೊಕ್ಕುತಿರಿ
ಪುರಂದರವಿಠಲನ ದಾಸರ ಕಂಡರೆ
ಮರೆತು ಸದಾ ನೀವೆ ಬೊಗಳುತಿರಿ!

ಘಲ್ಲು ಘಲ್ಲೆನುತಾ ಗೆಜ್ಜೆ ಘಲ್ಲು ತಾಧಿಮಿ ತಾ
ಬಲ್ಲಿದ ರಂಗನ ಪಲ್ಲ ಮೇಲೆ ನಿಕ್ಕಿಲ್ಲದೋರುತ್ತಿಹುದು.

ಬಿಳಿದು ಬಿಳಿಬಣ್ಣಾ ಬಿಳಿಕೆ ಒಳ್ಳೆಸಾದು ಹಬ್ಬ್ಣಾ
ರಂಗನ ಮೇಲೆ ನಿಕ್ಕಿಲ್ಲದೋರುತ್ತಿಹುದು.
ಕಾಣಿಸುತ್ತಿಹುದು ಒಳ್ಳೆ ನೀಲ ತೋರುತ್ತಿಹುದು
ನೀಲವಾದ ರಂಗನ ಮೇಲೆ ಎರಚಿದರೊತ್ತಿಹುದು.
ಹಸುರು ತೋರುತ್ತಿಹುದು ಒಳ್ಳೆ ಹಸ್ರು ತೋರುತ್ತಿಹುದು
ರಂಗನ ಮೇಲೆ ಎರಚಿದರೊತ್ತಿಹುದು.
ಗಂಧ ತೋರುತ್ತಿಹುದು ಒಳ್ಳೆ ಚಂದ ತೋರುತ್ತಿಹುದು
ಚಂದ್ರನಾದ ರಂಗನ ಮೇಲೆ ಹಂಗಿಸದೋರುತ್ತಿಹುದು.

ಬರ್ತೀರಾ ಇಲ್ಲೇ ಇರ್ತೀರಾ ನೀವು ಬರ್ತೀರಾ |
ಧರೆಯ ಭೋಗವ ನೀಗಿ ಪರಮೋಕ್ಷ ಪಡೆಯಲು ||

ಅಕ್ಕರದಿ ಸುತಸುತರು ಅಣ್ಣ ತಮ್ಮದಿರ ಬಿಟ್ಟು
ಸಕ್ಕರೆಯನಿಸಿಹ ಸತಿಯಳಾಸೆಯ ಬಿಟ್ಟು |
ತಕ್ಕ ಗಾದಿಯ ಬಿಟ್ಟು ಸಿಕ್ಕ ಸಡಗರ ಬಿಟ್ಟು
ರೊಕ್ಕದ ತಿಜೂರಿಯ ಕೀಲಿ ಕೈಯನು ಬಿಟ್ಟು ||

ತಂಟೆ ತಗಲವ ಮಾಡಿ ಗಳಿಸಿದ ಹೊಲಮನೆ
ಎಂಬು ಎತ್ತಿನ ಕಂತ ಎಲ್ಲ ವಿಶ್ವಯರ ಬಿಟ್ಟು |
ನೆಂಟರು ಬಂಟರುಗಳ ಕೂಡ ಗಾಢ್ಯದಿ
ಗಂಟಲ ದರಕೊಂಡು ಗಳಿಕೆ ಮಾಡುವುದ ಬಿಟ್ಟು ||

ಅಷ್ಟ ವೈಭವ ಬಿಟ್ಟು ಅಧಿಕಾರ ಮದ ಬಿಟ್ಟು
ದುಷ್ಟ ಚಟವ ಬಿಟ್ಟು ಇಷ್ಟ ಮಿತ್ರರ ಬಿಟ್ಟು |
ಕಡಿದ ಕಲ್ಲಿನ ಕಂಬ ಕಟ್ಟಿದ ಮನೆ ಬಿಟ್ಟು
ಕುಟಿಲ ಸಂಸಾರದ ಕಟ್ಟಕಡೆಯನು ಬಿಟ್ಟು ||

ನೇಮ ನಿತ್ಯದ ಬಿಟ್ಟು ಕಾಮ ಕಾಂಚನವ ಬಿಟ್ಟು
ತಾಮಸಗುಣ ಬಿಟ್ಟು ಪ್ರೇಮ ರಸವ ಬಿಟ್ಟು
ಸ್ವಾಮಿಯ ಪುಣ್ಯ ಶ್ರೀರಾಮನ ಪಾದವ
ಪ್ರೇಮದಿ ಭಜಿಸಲು ನೇಮದಿಂದಲಿ ನೀವು ||

ಮೂಡು ಸಿಕ್ಕದಲ್ಲ ಮಾತಿನ
ಗೂಡು ಸಿಕ್ಕದಲ್ಲ ।
ಜೋಡು ಹೆಂಡಿರಂಜಿ ಓಡಿ ಹೋಗುವಾಗ
ಗೋಡೆ ಬಿದ್ದು ಬಂದು ಆಯಿತಲ್ಲ ॥
ಎಚ್ಚರಗೊಳ್ಳಲಿಲ್ಲ ಮನವೇ
ಹುಚ್ಚನಾದೆನಲ್ಲ ।
ಬಿಚ್ಚಿನೊಳಗೆ ಮೆಚ್ಚು ಮೆಚ್ಚಿನೊಳಗೆ ಬಿಚ್ಚು
ಕಿಚ್ಚಿದ್ದು ಹೋಯಿತಲ್ಲ ॥
ಮುಪ್ಪು ಬಂದಿತಲ್ಲ ಮಾಯದ
ತಪ್ಪದೆ ಉಣಲಿಲ್ಲ ।
ತುಪ್ಪದ ಬಿಂದಿಗೆ ತಿಪ್ಪೆ ಮೇಲೆ
ಧೊಪ್ಪನೆ ಬಿತ್ತಲ್ಲ ॥
ಯೋಗವು ಬಂತಲ್ಲ ಬದುಕು ವಿ-
ಭಾಗವಾಯಿತಲ್ಲ ।
ಭೋಗಿಶಯನ ಶ್ರೀ ಪುರಂದರವಿಠಲನ
ಆಗ ನೆನೆಯಲಿಲ್ಲ ॥

ಪ್ರಾಪ್ತ

ಎನಗು ಆಣೆ ರಂಗ ನಿನಗು ಆಣೆ ।
ಎನಗು ನಿನಗು ಇಬ್ಬರಿಗೂ ಭಕ್ತರಾಣೆ ॥
ನಿನ್ನ ಬಿಟ್ಟು ಅನ್ಯರ ಭಜಿಸಿದರೆನಗೆ ಆಣೆ
ಎನ್ನ ನೀ ಕೈ ಬಿಟ್ಟು ಪೋದರೆ ನಿನಗೆ ಆಣೆ.
ತನು ಮನ ಧನದಲಿ ವಂಚಕ ನಾದರೆ ಎನಗೆ ಆಣೆ
ಮನಸು ನಿನ್ನಲಿ ನಿಲಿಸದಿದ್ದರೆ ನಿನಗೆ ಆಣೆ.
ಕಾಕು ಜನರ ಸಂಗವ ಮಾಡಿದರೆನಗೆ ಆಣೆ
ಲೌಕಿಕವ ಬಿಡಿಸುದಿದ್ದರೆ ನಿನಗೆ ಆಣೆ.
ಶಿಷ್ಟರ ಸಂಗ ಮಾಡದಿದ್ದರೆ ಎನಗೆ ಆಣೆ
ದುಷ್ಟರ ಸಂಗ ಬಿಡಿಸುದಿದ್ದರೆ ನಿನಗೆ ಆಣೆ.
ಹರಿ ನಿನ್ನಾಶ್ರಯ ಮಾಡದಿದ್ದರೆ ಎನಗೆ ಆಣೆ
ಪುರಂದರವಿಠಲನೊಲಿಯದಿದ್ದರೆ ನಿನಗೆ ಆಣೆ.

ಜೋ ಅಚ್ಯುತಾನಂದ ಜೋ ಜೋ ಮುಕುನ್ದ
ಎನ್ನ ಪರಮಾನಂದ, ರಾಮ ಗೋವಿಂದ ಜೋ ಜೋ..
ತಂಗಾಳಿ ನಯವಾಗಿ ಬೀಸುತಿದೆ ನಿನಗಾಗಿ
ಚಂದಿರನ ಕಿರಣಗಳು ಮುತ್ತುತಿವೆ ಮೊಗಕಾಗಿ
ಊರೆಲ್ಲ ಮಲಗಿಹರು ನಿನ್ನಾಟ ಮುಗಿಯದೇ
ಸಾಕಿನ್ನು ಮಲಗಯ್ಯ ಎನ್ನ ಮುದ್ದು ರಂಗ ॥
ತೊಟ್ಟಿಲಲಿ ಮಲಗಿರುವ ಕೌಸಲೆಯ ಕುಂಬಳವೆ
ಅರಮನೆಯ ಕಣ್ಮಣಿಯೆ ಮುದ್ದು ಮರಿಯೆ
ನಿನ ನಿದ್ದೆ ಕದ್ದೊಯ್ದ ಕಳ್ಳ ನಾರಯ್ಯ
ಎನ್ನ ಮನದಾ ಚಕೋರ ಮೋಹನಾಕಾರ ॥
ಅಂಗೈಯಲ್ಲೇನು ಬಿಡಿ ಬೀಳ್ವುತಿಹೆ ಗುಟ್ಟಾಗಿ
ಶೃಂಗಾರ ರಚನೆಗಳಿಗಾಗರೆಯ ನಿನ್ನ ಪರಿ
ಕೋಟಿ ಸೌಂದದಕೆಲ್ಲ ಬಿಂಕದ ದೊರೆಮರಿಯೆ
ಮಂಗಳಕೆ ನೀ ಧಾಮ ಕೋದಂಡರಾಮ ॥

ದೇವನದೆಂಥ ಜೋಗ್ಯತ್ರಿಕೆ ಬಾರ್, ನನ್ನ ಜೊತೆ ಮಾಲ್ಲ
ನನ್ನ ಹೃದಯ ಇನ್ನೊಂದು ಜೋಗ್ಗ ಮ್ಯಾಲಿಲ್ಲ ಇವರ ಶಾಲ್ಲ.
ರಾಮರಾಜುನಂತ್ಯ ಹೊಗಲು ಹೊಗಲ್ಕಾರ್ಯ ರಾಮುನೇನು ಹೂಟ್ರ
ಯುಗಯುಗದ ಶೇಲ್ಲ ನನ್ನ ಗತಿಯು ಲಹುವಿನ ಲಿಬ್ಬಿ ಬರ್ರು.
ಪ್ರಿಯ ದೇವನಂತ್ಯ ಬಹಳ ಬಂಯನಂತ್ಯ ಬುದ್ಧಿ ಪಿತ್ರ ಲವರ್ಗ್
ಮಾನುಜನ ಜೊಂತಿರ್ಯಾತರ್ತ್ರ, ತ್ರಿಂತಿಯು ಬಾಗಿ ರಾಲ್ಲಿರ್ಗ್.
ದೇಲ್ಲಿಯ್ಯಾರ ಶಿವನೇಲ್ಲಿನ ಗಾರಿಯು ಹೋಲ್ಲು ಗಾರ್ತ್ರಿಬಿಬ್ಬರ್ತ್ರ
ಹೇಳ್ಳದೆ ಕೇಳ್ಳದೆ ತನ್ನ ಜನರೊಳ್ಳು ಗಂಗೆಯು ತಂದಿಟ್ಟ.
ಕೃಷ್ಣ ನಡೆಂತು ಇರೆಂಟ್ಟ ತನನ ನೋಡರ್ಟ ಹೆಂಡರವರ,
ಒಬ್ಬರಿಗಿಂತ ಹೆಚ್ಚು ಜನ್ರ ಬಂತಿವಿತ್ರ, ಕೃದಯಮಾಗ.

ಕುಂತ್ರೆ ನಿಂತ್ರೆ ಅವ್ನ ಧ್ಯಾನ, ಜೀವಕ್ಕಿಲ್ರೀ ಸಮಾಧಾನ,
ಅವ್ನಿಗೆ ಎಷ್ಟಿದ್ರೀ ಬಿಗುಮಾನ, ಅವ್ನೆ ನನ್ನ ಗೆಣೆಕಾರ.
ಇಂದ್ರಲೋಕ್ದಾಗಿಲ್ಲ ಕಣ್ರಿ, ಚಂದ್ರಲೋಕ್ದಾಗಿಲ್ಲ ಕಣ್ರಿ
ಮೂರು ಲೋಕ್ದಾಗಿಲ್ಲ ಕಣ್ರಿ ಅವ್ನೆ ನನ್ನ
ಯಾವ್ದಲ್ಲೇನೂ ಕಮ್ಮಿಯಿಲ್ರೀ ಮಾತ್ನಲ್ಲವ್ನ ಸೋಲ್ಸೋರಿಲ್ರೀ
ಅವ್ನೆ ನಂಗೆ ತಕ್ಕೋನ್ಕಣ್ರೀ ಅವ್ನೆ ನನ್ನ ಗೆಣೆಕಾರ.
ಜಾತ್ರೇಲವ್ನ ನೋಡ್ದೆ ಕಣ್ರೀ ನೋಡಿ ನಾಚಿದೆ ಕಂಡು ತಾನೇ
ಪಕ್ಕಕ್ಬಂದು ನಿಂತ ಕಣ್ರೀ ಅವ್ನೆ ನನ್ನ
ಮಲ್ಗೆ ಹೂವ ತಂದ ಕಣ್ರೀ ತಂದು ತುರುಬಲ್ಲಿಟ್ಟ ಕಣ್ರೀ
ಇವನ್ಗೆ ನಂಗೂ ಮದ್ವೆ ಕಣ್ರೀ ಅವ್ನೆ ನನ್ನ ಸರದಾರ.

ಬುತ್ತಿ ತಕ್ಕೊಂಡು ಹೋಗುತ್ತೇನೆ ಹೊಲಕ್ಕೆ | ನಾ
ಬರ್ತೀನಿ ಹೊತ್ತು ಮುಳುಗೋದಕ್ಕೆ ||

ಹೊಳ್ಳಂಬಿಡ್ಯಾಗೆ ನಡೆದೆ ಹೊಲ
ಬೆಳೆದು ನಿಂತೈತೆ ಬಿಳಿಜೋಳದ ಪೈಲ
ಊರ ಕಡೆಗ್ಯಾಕ ಮುತ್ತಿ ನನ್ನಂಬಲ
ಅನ್ನ ಕೊಡ್ತೈತೆ ಇನ್ನ ನಾಡಿನ್ಯಾಕೆ.
ಹೊಳೆ ಬದಿಯಾಗೆ ಬಿದಿರ್ಯಾವ ನಾಲ
ಬಾನೆ ... ಮುಗಿಲಾಯ್ತು ಹಾಳು
ಕಣ್ಣೇ ಕುರುಡಾಯ್ತು ನಾನಾರಿ ಹೇಳು
ಕುಸುಬಿ ಹೂವಿನ ಕುಸುರಿಯನ್ನು ನಾಡಾಡು.

ದುಡಿಯೋ ಎರಡು ಕೈಗಳ ಬಿಸ್ಸಿನನ್ನ
ಅವು ತಿನ್ನೋದೆ ಹೊಟ್ಟೆ ದಣಿವನ್ನ
ಇವು ತಿಂದದ್ದು ನಮ್ಮ ಗೋಬ್ಬ ಅನ್ನ
ನಾನು ನೀಡಾಕೆ ನೀರ್ಯಾನು ಅವಕ್ಕೆ.
ಉಳುಮೆಯತೆ ಹೊತ್ತು ಕ್ಯೆ ಮಾರ
ಅದ ನಾ ಬದುಕಿ ಕ್ಯೆಂಬಾರ

ಕುಂತು ನಿಂತೀವಿ ನಾವ [illegible]
ನಮ್ಮ [illegible], ಬಿಳಿ [illegible] ಫಲಕ್ಕ ।
ನೋಡ್ತೀವಿ ಬದುಕಿನ ಜೋತ
[illegible] ಪ್ರೀತಿಯಿಂದ [illegible]
ಆಡ್ತೀವಿ ನನೊ ನನೊ [illegible]
ನಾಟ್ಕ ಬಿಡ್ತೈತೆ, ಮುಂದಿನೆಲ್ಲ ಹೇಳ್ತಾತ.

ಕಡಲಾ ತೀರದ ದಂಡೆಯ ಮ್ಯಾಗ
ತೆಂಗೀನ ಬನದಾಗ ಽಽ
ಗುಡಿಸಲ ಕಟ್ಟಿಕೊಂಡು ಇರುವೋರು ನಾವು
ಬೆಸ್ತರ ಮಂದಿಯೆಲ್ಲಾ ಽಽ
ಹಕ್ಕಿ ಕೂಗು ಕೇಳಿದಾಗ ಕೋಳಿ ಕೂಗು ಹಾಕಿದಾಗ.
ಕಾಳಿ ನಾದ ಕೇಳಿದಾಗ ಽಽ ಜಗವೆಲ್ಲ [illegible] ಽಽ
ಬಾನಿನಲಿ ಭೂಮಿಯಲಿ, ನೀಲಾಲ ಕಡಲಿನಲಿ
ಇದು ಮತ್ತ ಹಿಗ್ಗಿನ ಕಾಲಾ ಽಽ
ಹುಣ್ಣಿಮೆ ಚಂದಿರನು ಆಗಸದಿ ಬಂದಾಗ
ನಾವೆಲ್ಲಾ ನಲಿದಾಗ ಽ ದೋಣಿಲಿ ಬಂದಾಗ ಽಽ
ಜಲದೇವಿ ಬಂದೆಮ್ಮ ಬೆಸ್ತರ ಕಾಯುವಮ್ಮ
ನೀನೆಮ್ಮ ಕುಲದಮ್ಮ ಽ ನಮ್ಮ ದೇವಿ ನೋಡಮ್ಮ ಽಽ

ಗೋಪೀಜೀಕಂದನ ಮೊಕ್ಕಳಿಂದ ಗೋಪಾಲ ಮುರಾರಿ ಬಂದ
ದ್ವಾರಕೆಯಿಂದ ಕಡಲಲಿ ಬಂದು ಉಡುಪಿ ಕ್ಷೇತ್ರದಿ ತಾ ನಿಂದ

ಯಶೋದೆ ತಾಯಿಯ ಪ್ರೀತಿಯ ಕಂದ
ಯದು ಕುಲ ತಿಲಕ ಗೋವಿಂದ
ಗೋವರ್ಧನಗಿರಿ ಕಿರು ಬೆರಳಿಂದ
ಎತ್ತಿದ ಮುರಹರ ಶ್ರೀ ಮುಕುಂದ
ತುಂಟರ ನಗುಮೊಗದ ಎನ್ನಿನ ಪೋರ
ಗೋಪೀಜನರ ಮನಸ ಚಕೋರ
ಮಾನವ ಕುಲಕೆ ಗೀತೆಯ ಬೋಧಿಸಿ
ಜ್ಞಾನವ ನೀಡಿದ ಗೀತಾಚಾರ್ಯ.

ನೀಲಮೇಘ ತಾವರೆಯಂಥ ಕಾಂತಿಯುಳ್ಳ ಕಂಗೊಳಿಸುವ
ಕಮಲದಂಥ ಬಟ್ಟಲ್ಕಣ್ಣುಳ್ಳ ಕಡೆಗೋಲನ್ನು ಹಿಡಿದಿರುವ
ರತ್ನದ ಹಿಡಿದು ಎಡಗೈಯಲ್ಲಿ ಸೊಂಟದ ಮೇಲೆ ಇಟ್ಟ [illegible]
ತೋಳ್ಬಂದಿ ಕೈಕಡಗ ಪದಕ ಕೊರಳ ಸುರತ್ನ ಸಂಪಿಗೆ [illegible]

ಏನೆಲ್ಲ ಅರಿತಿರುವೆ ಕೃಷ್ಣಯ್ಯ ನೀ
ಏನೆಲ್ಲ ಅರಿತಿರುವೆ, ಏನೆಲ್ಲ ಕುರುಕಲ
ಜ್ಞಾನದ ಮಳೆಯನು ಹರಿಸಲು ಬಂದ್ಯ ||
ಕಣ್ಣು ಮುಚ್ಚಲೆ ಅರಿಯ ಬೇಕೆಂದು ಕೃ
ಬಣ್ಣದ ನವಿಲಿನ ನೋಟ
ಕಣ್ಣು ಮುಚ್ಚಲು ಕಪ್ಪು ಕಣ್ಣನೆ ಬಿಡಿಸೋದೆ
ಅಣ್ಣ ಕುರುಳಿ ಕುರು ಕಿ ಹಣ್ಣಾಗಿ ತೋರಿದೆನು.
ಕರು ಕಷ್ಟ ಕುರುಕುರು ಮನಸಿನ ನಿನ್ನ
ಅರಿಯಲು ಕುರುಕುರು.
ಅರಿದು ಅರಿದು ತಂದು ಒಡಲೊಳು ಮತ್ತೆ
ಒಡನೆನೋ ನಿನ್ನ ತಂದು ಬರೆದುಕೊಂಡೆ ನೀ.
ಎಲ್ಲೆಲ್ಲು ತುಂಬಿರುವೆ ನೀ ಕುರುಕಲು
ಎಲ್ಲೆಲ್ಲು ತಿಳಿದಿರುವೆ
ಕೃಷ್ಣ ನಿನ್ನನು ಬಲ್ಲನೆ ನಿನ್ನವರು
ಬಲ್ಲ ರಾಧೆ ಬಂದು ನಿಲ್ಲುವಳೆ ಬಿಟ್ಟು.

ಕೇಶವಾ, ಮಾಧವಾ, ತುಝ್ಯ ನಾಮಾಂತರೇ ಗೋಡವಾ ॥

ದಾಸರು

ಇಲ್ಲಿರಲಾರೆ, ಅಲ್ಲಿಗೆ ಹೋಗಲಾರೆ |
ಫುಲ್ಲನಾಭನೆ ನೀನಿದ್ದಲ್ಲಿ ಸೇರಿಸೆನ್ನ ||
ಮರಣವನೊಲ್ಲೆ ಜನನವನೊಲ್ಲೆ
ಮುಕ್ತಿ ಸಂಸಾರದ ಕೋಟಲೆ ಎನಗಿಲ್ಲ ನಾನೊಲ್ಲೆ |
ಕರುಣದಿ ಕರುಣಳ್ಳ ಕಾಂತುಂ ಗೋಪಾಲನ
ಚರಣ ಕಮಲದ ಸ್ಮರಣೆಯೊಳಿರಿಸೆನ್ನ ||
ಬೆಂದ ಸಂಸಾರದಿ ಬೇನೆ ಮುಕ್ತ್ಯದೊಳು
ನೊಂದೆನು ನಾ ಬಲು ನರಕದೊಳಿಲ್ಲಿ |
ನಂದಗೋಪ ಕಂದ ಬೃಂದಾವನ ಮುಕುಂದ
ಎಂದೆಂದು ನಿನ್ನ ಸ್ಮರಣೆಯೊಳಿರಿಸೆನ್ನ ||
--- ಇಲ್ಲಿರಲಾರೆ, --- ಅಲ್ಲಿಗೆ ಹೋಗಲಾರೆ, ---

ಪು. ದಾ.

ಲೊಳ್ಳಲೊಣ್ಣೆ, ಬಡುಕು ಲೊಳ್ಳಲೊಣ್ಣೆ ||

ಆನೆ ಕುದುರೆ ಒಂಟೆ ಎಲ್ಲ ಲೊಳ್ಳಲೊಣ್ಣೆ
ಬಟ್ಟು ಸೇನೆ ಭಂಡಾರವು ಲೊಳ್ಳಲೊಣ್ಣೆ
ಮನ್ನಿಸಿದಂಥ ಸಂಗ ಲೊಳ್ಳಲೊಣ್ಣೆ
ಮೊದ್ದು ಧರಣೀಶನೆಂಬುದು ಲೊಳ್ಳಲೊಣ್ಣೆ.
ಮುತ್ತು ಮಾಣಿಕ ಎಲ್ಲ ಲೊಳ್ಳಲೊಣ್ಣೆ
ಮತ್ತೆ ಛತ್ರ ಚಾಮರ ಧ್ವಜ ಲೊಳ್ಳಲೊಣ್ಣೆ
ಸುತ್ತ ದಳ ಕೋಟೆ ಕೊತ್ತಳ ಲೊಳ್ಳಲೊಣ್ಣೆ
ಮತ್ತೆ ಬಂದ ಪ್ರಭುತ್ವ ಲೊಳ್ಳಲೊಣ್ಣೆ
ಸ್ವಂತ ಕಾಯದ ಜೋಡೆಲ್ಲ ಲೊಳ್ಳಲೊಣ್ಣೆ
ನೆಂಟರು ಇಷ್ಟರು ಲೊಳ್ಳಲೊಣ್ಣೆ
ಪುರಂದರವಿಠಲರಾಯನ
ಬಂಟನಾಗದವ ಲೊಳ್ಳಲೊಣ್ಣೆ.

ನಾವು ಬಂದೇವ ಶ್ರೀ ಶೈಲ ನೋಡಲಿಕ್ಕ,
ಸ್ವಾಮಿ ಸೇವಾ ಮಾಡಿ ಮುಕ್ತಿ ಹೊಂದಲಿಕ್ಕ ||
ಬೆಟ್ಟದ ಮೇಲೇರಿ ಶಿವ ಲಿಂಗ ಕಂ
ಹಿಂದಾ ಶಿವನಿಗೇನ ಬಂತ ?... ಹೇಳ್ರಿ
ಕೆಟ್ಟ ಜನರ ನೋಡಿ ನೋಡ ಬಾರದಂತಾ
ಹಣ್ಣು ಕಾಯಿ ಧೂಪ ದೀಪ ಇಡತಾರಂತ !.. ಅಲ್ಲಿಂದ
ಪುಣ್ಯ ಬರಲಿ ಅಂತ !
ನಾರಿಕೇಳ ಒಡೆದು ಪುಣ್ಯ ಬರಲಿ ಅಂತಾ
ಭಕ್ತರ ಬಂದರ ನಿಜ್ಜನ್ನಕನಾಗಿ ಹೇಳ್ತಾರಂತ !
ವಸಂತ ?... ಮುಂದಕ್ಕ ಹೋಗೆಂತ !
ಈಗಾ ಹೋದಿಲ್ಲ, ಮುಂದಕ್ಕ ಹೋಗೆಂತ..
ಬೆಟ್ಟ ಏರಿ ಬಂದವ್ರು ಕೆಟ್ಟ ಗುಣ ಹೋಗಲಿ,
ಪುಣ್ಯ ಗುಣ ತುಂಬ್ಯಾರು ಹೋಗೆಂದಂತ .||
[illegible]ಯುದ್ಧ ಮುಗಿಸಿದಾಗಿ [illegible]ಯುದ್ಧ [illegible]ನಾಗಿ
ಶಿವ ಲಿಂಗ ಕಂಡ ?
... ವರ ಹೇಳ್ತಾರಂತ !
[illegible] ಬಂದಿದ್ದಕ್ಕ, ಏನು ಮಾಡಬೇಕ ?
[illegible] ನಾಕ ನಮ್ಮಿಂದ ಶಿವನಿಗೇನು ಬೇಕ ! ?
... [illegible] [illegible] ನಾನಿನ್ನು [illegible] ...

ಪು.೩ಪ.

ಹುಚ್ಚುಲ ನಾಗವಾನ

ಕೊಳಲನೂದು ಗೋವಿಂದ
ಮುಪ್ಪಿನಾಗಲಾನಂದ ||

ಮೈ ಮುಪ್ಪು ಕಾಡುವಂತೆ
ಮನಸಿಗೆ ಚಿಂತೆ ಸೇರುವಂತೆ
ದುರಂತದ ಪುರುಷರಾದ ನಾವು
ದಗುದು ಹೆಜ್ಜೆಯಿಡುವ ತೆರದಿ —
..ಕೊಳಲನೂದು...

ಕಣ್ಣು ಮಂಜು ಕವಿಯುವಂತೆ
ಕಿವಿಯು ದಟ್ಟವಾಗುವಂತೆ
ಬಾಳ್ವೆ ಸವಿಯು ನಾವು ಜಾರ
ಎಂಬ ತೆರದ ಸಂಚಿಕೆ ಬಾರೆ —
.. ಕೊಳಲನೂದು...

ದಿನದಿನಕೂ ಬೆಳ್ಳಿಯ ಕೂದಲ
ಕಾಲ ಬೆನ್ನು ಬಾಗೆ ಭಾರ
ನಿನ್ನ ಕೊಳಲ ಮಂತ್ರಕವನು
ಹರಡಿ ಹೆಗಲು ನೀಡುವ ತೆರದಿ —
..ಕೊಳಲನೂದು ಗೋವಿಂದ
ಮುಪ್ಪಿನಾಗಲಾನಂದ

[illegible]

ಕೃಷ್ಣನ ಕೊಳಲಿನ ಕರೆ - ಆಲಿಸು
ಕೃಷ್ಣನ ಕೊಳಲಿನ ಕರೆ - ತ್ವರೆ ತ್ವರೆ.
ತೊಟ್ಟಿಲಿನ ಹಸುಗೂಸು ಮರೆ ಮರೆ
ಪಕ್ಕದ ಗಂಡನ ತೊರೆ ತೊರೆ
ಬೃಂದಾವನಕೆ ತ್ವರೆ ತ್ವರೆ - ಕೃಷ್ಣನ ||
ಮುತ್ತಿನ ಕುಪ್ಪಸ ಕುರುಳೋಲೆ
ಮಲ್ಲಿಗೆ ಜಾಜಿ ಮುಡಿಮಾಲೆ
ಹೆಜ್ಜೆಯ ನೇವುರ ಗೆಜ್ಜೆಯ ಬಿಲ್ಲಿ
ಮರೆತೇ ಬಂದೆನೆ ಮನೆಯಿಂದ ಸಖಿ - ಕೃಷ್ಣನ
ಹೊತ್ತಾರೆ ಹೊರೆಗೆಲಸ ಬಿಕ್ಕರೆ ಬಿಗಲಿ
ಬಿಕ್ಕದ ನೆರೆಹೊರೆ ನಕ್ಕರೆ ನಗಲಿ
ಬೃಂದಾವನದೊಳಾಡಿಸುವ ಮುರಳಿ - ಕೃಷ್ಣ
ನೇಸರ ಕಿರಣ ಆಗಸದಿರುಳು
ತೊಗೆಯುವ ರೀತಿ
ಮುರಳೀಧರನ ಮುರಳೀ ಮಾಯೆಗೆ
ಮನ ಬೆಚ್ಚಿತೆ ಭೀತಿ
ಇನ್ನಾಯಿತೆ ಪ್ರೀತಿ - ಕೃಷ್ಣನ

ಪು.ತಿ.ನ.

ನಿಲ್ಲಿಸದಿರು ವನಮಾಲಿ
ಕೊಳಲ ಗಾನವ ॥
ನಿಲ್ಲಿಸೆ ನೀ ಕಳೆವುದೆಂತೊ
ಜೀವಿತದಿಂದು ಶೋಕವ ॥
ಕ್ರೂರ ಸೃಷ್ಟಿ ಬಲಿಗೆ ಎಂದು
ಕಾಯುತಿಹುದೊ ಘೋರ ನಿಂದು
ಹಿಂತೆ ನಮ್ಮ ತುತ್ತುಗೊಳ್ಳೆ
ಕೊಂಡಕುತಿಹುದು ಜೀವಿತವನಿಂದು — ನಿಲ್ಲಿಸದಿರು
ಒಡಲಿನಲ್ಲಿ ಹಸಿವು ಎಂಬ
ಹಗಲಿನಲ್ಲಿ ಇರುಳು ಎಂಬ
ಜಂತುಗಳ್ಗೆ ಕೊಳ್ಳತೇ ಎಂಬ
ಜಯದವನ್ನು ಬಗೆಂದು ತಿಂಬ — ನಿಲ್ಲಿಸದಿರು
ನಾನು ಸತಿ ಅತ ಪತಿ
ಅಣ್ಣ ಅಕ್ಕ ತನು ಗತಿ
ಇಂತು ನಂಟತನವಿದೆಲ್ಲ
ಮರುಕೊಳ್ಳುವುದೊ ಮನದಿ ನಿಲ್ಲ — ನಿಲ್ಲಿಸದಿರು

ಹರಿಯುತಿಟ್ಟ ಸಂಜೆಯ ನವಿಲು
ಮಿಂಚಿನೆಂಗಪ್ಪುದುರು ಭಾವವು
ನಿನ್ನ ಕೊಳಲು ನೀಡಲಿಹವು
ನಲ್ಲಿದುಳ್ಳೊಳ್ಗೆ ಬಂದೆವಯ್ಯ — ನಿಲ್ಲಿಸದಿರು

ನಮ್ಮ ಬಾಳ್ಗೆ ನಾಳ್ಕದಿಂದ
ಮತ್ಸ್ಯನಂತೆ ಮೇಲೆ ತಂದು
ಕೃಷ್ಣ ಈಗ ಬಿಡಾನಂದ
ಮರಳಿ ಮಬ್ಬಾಗಿ ಹೋಯ್ತು ದಂಯ್ಯ — ನಿಲ್ಲಿಸದಿರು

ನೀರು ನಿಂತು ಕೊಳೆಂತುವಂತೆ
ಸವಿಗಪ್ಪದೋ ಸಾರು ಬಿಂತೆ
ಕೊಳಲುಲುಗಳ ನೇಹದ ನುಗ್ಗಿ
ಜೀವ ದೂರಂದ ತೆಂಕ ನುಗ್ಗಿ — ನಿಲ್ಲಿಸದಿರು

ಭಾವದ ಮಾತು ಬಿಡಗುವಂತೆ
ಅಹಂಕಾರ ಕರಗುವಂತೆ
ನಿನ್ನ ನಾದಸುಧಾಗವು
ಬಿಡುಗ ತುಂಬಿ ಬರುಗಾಲವು —
ನಿಲ್ಲಿಸದಿರು ವನಮಾಲೀ
ಕೊಳಲ ಗಾನವ

ತೊರೆಗಳೆಲ್ಲ ಬರಲಿ ಬರಲಿ!

ತೊರೆಗಳೆಲ್ಲ ಬರಲಿ ಬರಲಿ
ಎದೆಯ ಕಡಲಿಗೆ ;
ಜಗದ ಎಲ್ಲ ಬಳಲಿಕೆಗಳು
ಬಿಡದ ಮಡಿಲಿಗೆ
ಬಂದು ಇಲ್ಲಿ ಮುಳುಗಿ ಜನ್ಮದ ಕೊಳೆಯು ಹೋಗಲಿ !
ಚಿಕ್ಕೆ ಮುಡಿದ ಚಿಂತೆಗಳೇ ಇತ್ತ ಬನ್ನಿರಿ ;
ಈ ಎದೆ ನೆಮ್ಮದಿಯಲ್ಲಿ ಬಂದು ಮುಳುಗಿರಿ .
ನೋವುಗಳೆಲ್ಲ ಮುಗಿಯುವ ಬಳಿಕ
ಚಿಕ್ಕ ವೃಕ್ಷ ಬಲಿತ ಬಳಿಕ
ಮನ ಬಂದೆಡೆ ಸಾಗಿರಿ ;
ಅಲ್ಲಿತನಕ ಇಲ್ಲೆ ಇರಿ ; ಎಲೆ ಮುದ್ದು ಮುಖಗಳೇ !
ನಿಮ್ಮ ಮನದ ನೋವನೆಲ್ಲ
ಹಿರಿತನದ ಜಾವಗಳಿಗೆ ;
ಬಿಸಿಗಾಳಿಯು, ಬೆಂಗಾಳಿಯು ತಾಗಿಗೆ
ಮೆಲ್ಲೆಲರಿನ, ತಂಗಾಳಿಯ ಕೇಳಿಗೆ ;
ಸುಮದ ಬನಿಲ, ತಂಪೆರೆಯುವ ಬೆಳುದಿಂಗಳ ಮಧುಮಧುರ ನಾ[illegible]
ಎಲ್ಲ ಎಲ್ಲ ಅನುಭವದ
ಮುನಿಸೆಯುಳ್ಳ ಭವಭವದ

ಪುಟ 179 ಕ್ಕೆ

ಆ ಪಾರುಣೆ.

ಕಾರ್ತಿಕ ಶು. — ೭೨. ೧೧. ೪.

ಎಲ್ಲೋ ದೂರದಿ ಜಿನುಗುವ ದನಿಗಳೇ
ಬನ್ನಿ ಬನ್ನಿ ಕಿರು ಮಳೆಯಾಗಿ,
ತುಂಬಲಿ ತುಳುಕಲಿ ಬತ್ತಿದ ಹೊಳೆ ಕೆರೆ
ಹೊಸ ರಸಗಳೆಲ್ಲಲಿ ನವ್ಯರಾಗಿ!
ಎಲ್ಲೋ ದೂರದಿ ಜಿನುಗುವ ದನಿಗಳೇ
ಬನ್ನಿ ಬನ್ನಿ ರಸಗೀತೆಗಳಾಗಿ,
ಮತ್ತಾನದಿ ಮಲಗಿದ ಕಾವ್ಯ ವೃಂದಗಳ
ಮೇಲಾಡಿಸಿ ಚೆಲುವ ಬೆರಳಾಗಿ!
ಎಲ್ಲೋ ದೂರದಿ ಮಿನುಗುವ ಕಿಡಿಗಳೇ
ಬನ್ನಿ ಬನ್ನಿ ಹೊಂಬೆಳಗಾಗಿ,
ಹಣತೆ ಹಣತೆಗಳ ತುಂಬಿಯೊಳು ಕುಡಿವಿಗೆ
ಮಿಂಚಿಸಿ ಬೆಳ್ಳಿ-ಹೊಂಗನಸು ಚೆಲ್ಲಗಿ.
ಎಲ್ಲೋ ದೂರದಿ ಚಿಕ್ಕ ಗೆಜ್ಜೆಗಳೇ
ಕಿಬ್ಬಿ ನರ್ತಿಸುವ ಹೆಜ್ಜೆಗಳೇ
ಬನ್ನಿ ನನ್ನೆದೆಗೆ; ಲಾಸ್ಯವನಾಡಿಸಿ
ಚಿಮ್ಮಲಿ ನಲವಿನ ಬುಗ್ಗೆಗಳೇ.

ಸುಮಸುಂದರ ತರುಲತೆಗಳ ಬೃಂದಾವನ ಅಲ್ಲಿ
ಸುಸ್ವರ ಬೀರಿದ ಪಕ್ಷಿಸ್ತೋಮಗಳು ಹಾಡಾಡುವ ತಾಣ
ಸರಿಸರಿದನ ಸಂಚಾರಗೈವ ತುಂಗಾಜಲ ಲೀಲೆ
ಜಲಜಲಜಲ ಧುಮುಕುವ ಗಾನ ನೃತ್ಯ ಲೀಲೆ.
ಮಲೆನಾಡಿನ ಕೋಗಿಲೆಯಂತೆ
ಬಯಲುನಾಡ ಮಲ್ಲಿಗೆಯಂತೆ
ರಂಗವಿಸ್ತರದ ಭೃಂಗವೆ
ಧವಳಗಿರಿಯ ಶೃಂಗವೆ
ಕಾವೇರಿ ಗೋದಾವರಿ ಗಂಗೆ ಯಮುನೆ ಸಿಂಧುವೆ.
ಶತಶತ ಶತಮಾನಗಳ ಸುಪ್ತಗಾಮಿ ಚೇತನವೆ
ಚಿಗುರು ಚಿಗುರು ಚಿಗುರಾಗಿ ಹೂವಾಗಿ ಫಲವಾಗುವ ತನಿರಸವೆ
ಚಿಲಿಬಿಲಿಯಿಂದಾಮೋದದಿ ನಲಿಯುವ ಕೂಜನವೆ
ಮಧುಕರ ಮಂದಾನಿಲ ಸೌಗಂಧದ ಸಿರಿ ಪರಿಮಳವೆ
ನಸುಕು ಕುಸುಮಿನ ಹಿಮಮಣಿಯಂತೆ
ಎಳೆ ಬಿಸಿಲಿನ ಮಿಲುಗುವೆ
ಬಿರಿದ ಮುಗುಳ್ಗಳ ಬಿಂಕವೆ
ತ್ರೈರಿಕ ಸೋಕಿ ನರ್ತನವೆ
ನಿರ್ಭರ ನಿರ್ಝರಿಣಿಯು ಜಲಪಾತದ ಸಿಂಗರಿಸಿದವು

ಇನ್ನುಳಿದ ಪುಟ 218 ರಲ್ಲಿ

ಭಾರತದ ಜನ ಭಾರತೀಯರು ಮನ ಎಲ್ಲಿದ್ದರೂ ಒಂದಂತೆ
ಬರಡಾಗದ ನೆಲ ಹರಿದಾಡುವ ಜಲ ಎಲ್ಲಿದ್ದರದೇನಂತೆ ?
ಇವ ದಕ್ಷಿಣದವ ಅವ ಉತ್ತರದವ ಇವ ಸಿಖ್ಖನು ತಾನೆಂತೆ
ಇವ ಮುಸಲನು ಅವ ಕ್ರೈಸ್ತನು ಈ ಬಿಂದು ಬೇರಂತೆ !
ಆಡುವುದೇ ಒಂದಾಗಿರೆ ಮಾಡುವುದೇ ಬೇರೊಂದು
ನಡೆನುಡಿಯುಳ್ಳನ ಭೇದವು ಮೂರು ಮತ್ತೊಂದು !
ಹರಿದಾಡುವ ಜಲ ನಡೆದಾಡುವ ನೆಲ; ಎಲ್ಲವೂ ಒಂದರಂತೆ
ನಾವಾಡುವ ನುಡಿ ಬೆಳೆಸುವ ಗಾನವೆ ಭಾರತಿಗದೆ ಚಿಂತೆ !

ಪುಟ 176 ರಿಂದ

ಕಿಲ್ಬಿಷಗಳು ಸುಟ್ಟುಹೋಯಿತು ಕೆರಳಿಸಿದೆಯ ಕಾವ್ಯಗಳ ;
ಬಿರಲು ಉತ್ತು ಬಂಗಾರ
ನಿನ್ನ ತನುವ ಸಿಂಗಾರ ;
ಅಕ್ಷರಾ ಬರಿ ಸಿಂಗಾರ
ಮುಗಿಲು ನಿನ್ನ ಮಾತನೆಲ್ಲ ಮರೆಯಿತು ಭೂತಳ !

ಭಾರತೀಯರು ನಾವು ಎಂದೆಂದು ಒಂದೆ
ಭಾವೈಕ್ಯದಲಿ ಕೂಡಿ ನಡೆಯುವೆವು ಮುಂದೆ.

ನೂರು ಮತ ನಮಗಿರಲಿ ನೂರು ಮಾತಾಗಿರಲಿ
ನಾಡಿನಾ ಜನಮನ ನಾವೆಲ್ಲ ಒಂದೆ.
ನಾಡ ರಕ್ಷಣೆಗಾಗಿ ನಡೆಯುವೆವು ಮುಂದೆ

ಕಾಶ್ಮೀರದಿಂದ ಕನ್ಯಾಕುಮಾರಿಯವರೆಗು
ಕಂಗೊಳಿಪ ತಾಯ್ನಾಡೆ ಪ್ರಾಕಾರ ಎಗಿಲೆಮಗೆ
ಕುಲಭೇದ ಜಲಭೇದ ಜಾತಿಭೇದವ ತೊರೆದು
ಕಾಳಗಕೆ ಒಂದಾಗಿ ನಡೆಯುವೆವು ಮುಂದೆ.
ಎಮ್ಮ ನೆಲದಿಂದ ಹಗೆ ದೂರ ಸರಿವನಕ
ಎಮ್ಮ ಧಮನಿಯಲಿ ಬಿಸಿ ನೆತ್ತರಿರುವನಕ
ಎಮ್ಮುಸಿರು ಎಮ್ಮ ಬಲ ನಗ ನಾಣ್ಯ ಧನ ಕನಕ
ಎಮಗೆ ಬೆಂಬಲವಾಗಿ ಎಮ್ಮವರಿರುವನಕ.

ಜಾಲಿ ಹಾಲಿ ಜಾಲಿ ಮತ್ತೆ ಅಪ್ಪಲು ಲವಂಗ ಮೇಲಿನ
ಕಬ್ಬು ಹೋಳಹೋಳ ಸೇರಿಸೀನ | ಸಲ್ಲಾಣ ಜಾಣ ||
ಚಿಕ್ಕೆಲೆ ಹಾಲೆ ನಾಗವಾಲೆ ಮುತ್ತಿನ ಬಿಡ್ಯಾನ ಮೇಲೆ
ಹೋಗುವ ಕಣ ಜಾತ್ರೇಗೆ | ಶಿಂಗಾರ ಜಾಣೆ |
ಬಾರ ನನ್ನ ಜೊತೆಯಾಗೆ | ಶಿಂಗಾರ ಜಾಣೆ ||
ಮುತ್ತಿನ ಜುಂಕಿ ಮುಡಿಸಿ ಕೊಡುವೆ
ನಂಕಿ ಗಿಂಕಿ ತಂದು ಕೊಡುವೆ
ಹೋಗುವ ಕಣ ಜಾತ್ರೇಗೆ | ಶಿಂಗಾರ ಜಾಣೆ ||
ನಂಕಿ ಗಿಂಕಿ ಧರಿಸುವಳಲ್ಲ ಬರಿಯ ಕೋಲೆ ತಿರುಗುವಳಲ್ಲ
ಬರುವಳಲ್ಲ ಜಾತ್ರೇಗೆ | ಸಲ್ಲಾಣ ಜಾಣ
ಬರುವಳಲ್ಲ ನಿನ್ನೊಳಗೆ | ಸಲ್ಲಾಣ ಜಾಣ ||
ಹಾಲೆ ಗೀಲೆ ಹಾಕಿಸಿ ಕೊಡುವೆ ಬೆಳ್ಳಿ ಗೆಜ್ಜೆ ತಂದು ಕೊಡುವೆ
ಹೋಗುವ ಕಣ ಜಾತ್ರೇಗೆ | ಬಂಗಾರ ಜಾಣೆ |
ಗೆಜ್ಜೆ ಗಿಜ್ಜೆ ಕಟ್ಟುವಳಲ್ಲ ಬರಿಯ ಕಾಲಲಿ ತಿರುಗುವಳಲ್ಲ
ಬರುವಳಲ್ಲ ಜಾತ್ರೇಗೆ | ಸಲ್ಲಾಣ ಜಾಣ ||
ಹರಬಳ್ಳಿ ತಿಪ್ಪೇಸಂತ ರಾಯಲ್ಲಿಗೆ ಓಡ್ತಿದ್ದೀನಿ
ಕೈಯ ಮುಗಿದು ಕರೆದು ಬಂದ್ನೆ | ಸಲ್ಲಾಣ ಜಾಣ ||
ಹರಬಳ್ಳಿ ತಿಪ್ಪೇಸಂತ ಕೆಟ್ಟು ಕುಂತ ಕಾಣ ಹೋಗೆ

ಕೊಪ್ಪ ನೆತ್ತಿ ಕೊಡಸಲಿಲ್ಲ । ಸಿಂಗಾರ ಜಾಣೆ ।
ಶಿರಸಿ ಪುಷ್ಪ ತೆಗೆದಂತೆ ಬೊಂಬು ಬಾಳೆ ಒಪ್ಪಿದ್ದಲ್ಲಿ
ಕೈಯಬಾಗಿಲೆ ಕರೆಯಲಿಲ್ಲ । ಸಣ್ಣ ಜಾಣ ॥
ಶಿರಸಿ ಪುಷ್ಪ ತೆಗೆದಂತೆ ಬಾಳೆ ಬೇಸಾಯ ಕಣ್ಣ ಬರೆ
ಒಬ್ಬ ಬಾಳೆ ಕೊಡಸಲಿಲ್ಲ । ಸಿಂಗಾರ ಜಾಣೆ ॥
ನೀರಬಂತೆ ನೀರಸ ಬಾರೆ ಹೆಣ್ಣನಂತೆ ನಾನು ಬಿಟ್ಟೆನೆ
ಕುಂತು ನಿಂತು ನೋಡುನಾ ಹೋಗಲಿ । ಸಿಂಗಾರ ಜಾಣೆ ।
ಜಾತ್ರೆಗಂತೆ ನೀನು ಬಾರೆ ಹೆಣ್ಣಿನಂತೆ ನಾನು ಬಿಟ್ಟೆನಿ
ತಿಬ್ಬ ಕುಂತು ನೋಡನಾ ಹೋಗಲಿ ॥ ಸಿಂಗಾರ ಜಾಣೆ ।
ಜಾತ್ರೆಗಂತ ನಾ ಹೋಂಟೆ ಜಾತ್ರೆಗೆ ನೀನು ಬಿಟ್ಟೆನೆ
ಸಪ್ಪ ಸಪ್ಪ ಬಿಡಲಿಲ್ಲ । ಸಣ್ಣ ಜಾಣ ॥

ನಾಥ ಹರೇ ಜಗನ್ನಾಥ ಹರೇ
ಪಶ್ಯತಿ ದಿಶಿ ದಿಶಿ ರಹಸಿ ಭವಂತಂ
ತದಧರ ಮಧುರ ಮಧೂನಿ ಪಿಬಂತಂ
ನಾಥ ಹರೇ! ಸೀದತಿ ರಾಧಾ ವಾಸಗೃಹೇ ॥
ತ್ವದಭಿಸರಣ ರಭಸೇನ ವಲಂತೀ
ಪತತಿ ಪದಾನಿ ಕಿಯಂತಿ ಚಲಂತೀ ॥
ವಿಹಿತ ವಿಶದ ಕಿಸಲಯ ವಲಯಾ
ಜೀವತಿ ಪರಮಿಹ ತವ ರತಿ ಕಲಯಾ ॥
ಮುಹುರವಲೋಕಿತ ಮಂಡನಲೀಲಾ
ಮಧುರಿಪುರಹಮಿತಿ ಭಾವನ ಶೀಲಾ ॥
ತ್ವರಿತಮುಪೈತಿ ನ ಕಥಮಭಿಸಾರಂ
ಹರಿರಿತಿ ವದತಿ ಸಖೀಮನುವಾರಂ ॥
ಶ್ಲಿಷ್ಯತಿ ಚುಂಬತಿ ಜಲಧರ ಕಲ್ಪಂ
ಹರಿರುಪಗತ ಇತಿ ತಿಮಿರಮನಲ್ಪಂ ॥
ಭವತಿ ವಿಲಂಬಿನಿ ವಿಗಲಿತ ಲಜ್ಜಾ
ವಿಲಪತಿ ರೋದಿತಿ ವಾಸಕ ಸಜ್ಜಾ ॥
ಶ್ರೀಜಯದೇವ ಕವೇರಿದಮುದಿತಂ
